# “ಭಾರತ ಮಾತೆ”



ಅಖಿಲ ಭಾರತ ಪತ್ರಿಕೆ

ಸೆಪ್ಟಂಬರ್ – 2013



*"The Truth is known only when all is seen."*

**- Sri Aurobindo**

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**

## ಪರಿವಿಡಿ

### "ಭಾರತ ಮಾತೆ"

**ಸದ್ಯದ ಸಮಸ್ಯೆಗಳು ಮತ್ತು ಭವಿಷ್ಯತ್ತಿಗಾಗಿ ಕೈಕೊಳ್ಳಬೇಕಾದ ಕಾರ್ಯ**

**ವಿಶೇಷ ಸಂಚಿಕೆ: ಭಾಗ – 2**

(ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಬರಹಗಳ ಸಂಕಲನ)

**ನಮ್ಮೆದುರಿಗೆ ಇರುವ ಕಾರ್ಯ**

**ಅನು : ಡಾ. ಕೆ.ಎಸ್. ಆಮೂರ**

ಭಾರತೀಯ ಮನೋಧರ್ಮವನ್ನು ಮರಳಿ ಪಡೆಯುವುದು 4
ರಾಷ್ಟ್ರೀಯ ಶಿಕ್ಷಣದ ಆವಶ್ಯಕತೆ 8
ಸಮಗ್ರ ಶಿಕ್ಷಣದ ಆವಶ್ಯಕತೆ 10
ಸೃಜನಶೀಲ ಚಿಂತನದ ಆವಶ್ಯಕತೆ 11
ಭದ್ರವಾದ ತಳಹದಿಯನ್ನು ನಿರ್ಮಾಣ ಮಾಡುವುದು 13
ಸಮಗ್ರ ಅಭಿವೃದ್ಧಿಯ ಆವಶ್ಯಕತೆ 15
ಮನುಷ್ಯರ ನಿರ್ಮಾಣ, ಯಂತ್ರಗಳದಲ್ಲ 15
ನೈತಿಕ ಮತ್ತು ಮೌಲಿಕ ಶಿಕ್ಷಣಕ್ಕೆ ಸರಿಯಾದ ರೀತಿ (1910) 16
ಭಾರತ ಮತ್ತು ಸ್ತ್ರೀಯರ ಸಮಸ್ಯೆ 18
ಕುಟುಂಬ ಯೋಜನೆ (Birth Control) 20
ವಿವಾಹ ಮತ್ತು ಕೌಟುಂಬಿಕ ಪದ್ಧತಿ ಇವುಗಳ ವಿಚ್ಛೇದನ 21
ಸ್ತ್ರೀಯೂ ಕೂಡ ಮುಕ್ತ ವ್ಯಕ್ತಿವಿಶಿಷ್ಟ ಸತ್ತೆಯಾಗಿದ್ದಾಳೆ 22
ಜೀವನದ ಎಲ್ಲ ಕ್ಷೇತ್ರಗಳಲ್ಲಿ ಸ್ತ್ರೀಯರು 23
ಸಾರ್ವಜನಿಕ ಜೀವನದಲ್ಲಿ ಅಪ್ರಾಮಾಣಿಕ ಜನರೊಂದಿಗೆ ವ್ಯವಹರಿಸುವುದನ್ನು ಕುರಿತು 24
ಪ್ರತಿಯೊಂದರಲ್ಲಿ ಸರಕಾರದ ಮಧ್ಯಪ್ರವೇಶ 25

**ಮೇರೆಗಳಿಂದಾಚೆಯಿಂದ ಸಂಭವಿಸಬಹುದಾದ ಅಪಾಯ**

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಚೈನಾ ದೇಶದ ವಿರುದ್ಧ ರಕ್ಷಣೋಪಾಯದ ಆವಶ್ಯಕತೆ (April 1, 1908) 27
ಚೈನಾ ದೇಶದ ಪ್ರಗತಿ (Oct. 9, 1909) 28
ಚೈನಾ ದೇಶದಿಂದಾಗುವ ಭಯೋತ್ಪಾದನೆ 30
ಪ್ರಾಬಲ್ಯಕ್ಕಾಗಿ ಕಮ್ಯೂನಿಷ್ಟರ ಯೋಜನೆ (June 28, 1950) 31

**ಅನು : ಶ್ರೀ ವೀರೇಂದ್ರ ಸಿಂಪಿ**

ವಿವಾದದ ವಿಷಯವಾದ ತಿಬೇಟ: ಐತಿಹಾಸಿಕ ಸಂದರ್ಶನ (Jan. 18, 1973) 33
ಭಾರತ ಪಾಕಿಸ್ತಾನಗಳ ನಡುವೆ ಪ್ರತ್ಯೇಕತೆ ಇರಬಾರದು 35
ಏಶಿಯಾ ಖಂಡಕ್ಕೆ ಒಕ್ಕೂಟ(Federation)ದ ಆವಶ್ಯಕತೆ (ಸಪ್ಟಂಬರ 21, 1966) 36

**ಭಾರತದಲ್ಲಿ ಪುನರುಜ್ಜೀವನ**

**ಅನು : ಡಾ. ಕೆ.ಎಸ್. ಆಮೂರ**

ಭಾರತ ಯುರೋಪಿನ ಹೆಜ್ಜೆಗಳನ್ನು ಅನುಸರಿಸಿದರೆ 37

**ಅನು : ದಿ॥ ಎಂ. ಕೇಶವ ಭಟ್ಟ**

ಭಾರತದ ಪುನರುಜ್ಜೀವನದ ಮೂರು ಹಂತಗಳು 38
ಸರಿಯಾದ ಉಪಾಯ 39

**ಭಾರತ ಮತ್ತು ಹೊರಹೊಮ್ಮುತ್ತಿರುವ ಜಾಗತಿಕ ಸಂಸ್ಕೃತಿ**

**ಅನು : ಡಾ. ಕೆ.ಎಸ್. ಆಮೂರ**

ಸಂಸ್ಕೃತಿಗಳ ಒಂದುಗೂಡುವಿಕೆ 41
ಸಾಂಪ್ರದಾಯಿಕತೆ ಮತ್ತು ಆಧುನಿಕತೆ 43
ಚಿಂತನಕ್ಕಾಗಿ ವೈಶಾಲ್ಯವಿರುವುದರ ಆವಶ್ಯಕತೆ 44

**ಜಗತ್ತಿನಲ್ಲಿ ಭಾರತದ ಪಾತ್ರ**

ಭಾರತ ಭವಿಷ್ಯತ್ತಿನಲ್ಲಿ ಕೈಕೊಳ್ಳಬೇಕಾದ ಕಾರ್ಯ (1947) 45
ಪ್ರಕಟಗೊಂಡ ಜೀವನದ ಸಾಮರಸ್ಯಕ್ಕೆ ಮಾರ್ಗ 49
ನಡತೆಯ ಅತ್ಯುಚ್ಚ ನಿಯಮವಾದ ಸತ್ಯ 49

| | |
|---|---|
| ಜಗತ್ತಿಗೆ ಗುರುವಾಗಿರುವ ಭಾರತ | 50 |
| ಭಾರತದ ನಕಾಶವನ್ನು ಕುರಿತು | 50 |
| ಆವಾಹನೆ | 52 |
| ಭರವಸೆಯ ಒಂದು ಶಬ್ದ | 52 |
| **ವಾರ್ತಾಪತ್ರ** | 55 |


**ಅಖಿಲ ಭಾರತ ಪತ್ರಿಕೆ – ಸಪ್ಟಂಬರ 2013**

## "ಭಾರತ ಮಾತೆ"

'ಸದ್ಯದ ಸಮಸ್ಯೆಗಳು ಮತ್ತು ಭವಿಷ್ಯತ್ತಿಗಾಗಿ ಕೈಕೊಳ್ಳಬೇಕಾದ ಕಾರ್ಯ'

**ವಿಶೇಷ ಸಂಚಿಕೆ – ಭಾಗ ಎರಡು**

**(ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಬರಹಗಳ ಸಂಕಲನ)**

### ಅವಶ್ಯವಾದ ಮೂರು ರೀತಿಯ ಕಾರ್ಯ

ಪ್ರಾಚೀನ ಕಾಲದ ಆಧ್ಯಾತ್ಮಿಕ ಜ್ಞಾನವನ್ನು ಮರಳಿ ಪಡೆಯುವುದು ಮತ್ತು ಅದನ್ನು ಅದರ ಎಲ್ಲ ಭವ್ಯತೆಯಲ್ಲಿ, ಆಳದಲ್ಲಿ ಮತ್ತು ಪೂರ್ಣತೆಯಲ್ಲಿ ಅನುಭವಕ್ಕೆ ತಂದುಕೊಳ್ಳುವುದು ಮೊದಲು ಕೈಕೊಳ್ಳಬೇಕಾದ ಅತ್ಯಂತ ಅವಶ್ಯವಾದ ಕಾರ್ಯ. ಈ ಆಧ್ಯಾತ್ಮಿಕತೆಯು ತತ್ವಜ್ಞಾನ, ಸಾಹಿತ್ಯ, ಕಲೆ ವಿಜ್ಞಾನ ಮತ್ತು ವಿಮರ್ಶಾತ್ಮಕ ಜ್ಞಾನ ಇವುಗಳಲ್ಲಿ ಹೊಸ ರೂಪಗಳಲ್ಲಿ ಹರಿದು ಬರುವಂತೆ ಮಾಡುವುದು ಎರಡನೆಯ ಮುಖ್ಯವಾದ ಕಾರ್ಯ. ಭಾರತೀಯ ಮನೋಧರ್ಮದ ಪ್ರಕಾಶದಲ್ಲಿ ಸೃಜನಶೀಲವಾಗಿ ವ್ಯವಹರಿಸುವುದು ಮತ್ತು ಆಧ್ಯಾತ್ಮೀಕರಣಗೊಂಡ ಸಮಾಜದ ಶ್ರೇಷ್ಠತರ ಸಮನ್ವಯವನ್ನು ರೂಪಿಸುವುದು ಮೂರನೆಯ ಮತ್ತು ಅತ್ಯಂತ ಕಠಿಣ ಕಾರ್ಯ. ಈ ಮೂರು ರೀತಿಗಳಲ್ಲಿ ದೊರಕಿಸುವ ಯಶಸ್ಸು ಭವಿಷ್ಯತ್ತಿನ ಮನುಕುಲಕ್ಕೆ ಸಹಾಯ ಸಲ್ಲಿಸುವುದರ ಪ್ರಮಾಣ (measure) ವಾಗಿರುತ್ತದೆ

**(20/15)** **– ಶ್ರೀ ಅರವಿಂದರು**

*



## ನಮ್ಮೆದುರಿಗೆ ಇರುವ ಕಾರ್ಯ

### ಭಾರತೀಯ ಮನೋಧರ್ಮವನ್ನು ಮರಳಿ ಪಡೆಯುವುದು

(June 19, 1909)

ನಮ್ಮೆದುರಿಗೆ ಇರಿಸಿಕೊಂಡ ಕಾರ್ಯ ಯಾಂತ್ರಿಕವಾಗಿಲ್ಲ, ಆದರೆ ನೈತಿಕ ಹಾಗೂ ಆಧ್ಯಾತ್ಮಿಕ ಕಾರ್ಯವಾಗಿದೆ. ನಾವು ಸರಕಾರದ ರೂಪ ಪರಿವರ್ತನೆಯನ್ನು ಗುರಿಯಾಗಿರಿಸಿಕೊಂಡಿಲ್ಲ, ಆದರೆ ರಾಷ್ಟ್ರವನ್ನು ನಿರ್ಮಾಣ ಮಾಡುವುದನ್ನು ಗುರಿಯಾಗಿರಿಸಿಕೊಂಡಿದ್ದೇವೆ. ಆ ಕಾರ್ಯದ ಭಾಗವೆಂದಾಗಿ ರಾಜಕೀಯವಿದೆ, ಆದರೆ ಅದು ಕೇವಲ ಒಂದು ಭಾಗ. ನಾವು ಕೇವಲ ರಾಜಕೀಯಕ್ಕಾಗಲಿ, ಸಾಮಾಜಿಕ ಪ್ರಶ್ನೆಗಳಿಗಾಗಲಿ, ಧರ್ಮಶಾಸ್ತ್ರಕ್ಕಾಗಲಿ, ತತ್ವಜ್ಞಾನಕ್ಕಾಗಲಿ ಇಲ್ಲವೆ ಸಾಹಿತ್ಯಕ್ಕಾಗಲಿ, ವಿಜ್ಞಾನಕ್ಕಾಗಲಿ ಅವುಗಳಿಗಾಗಿಯೇ ನಿಷ್ಠರಾಗಿರುವುದಿಲ್ಲ, ಆದರೆ ಅವೆಲ್ಲವುಗಳು ಒಂದು ಅಸ್ತಿತ್ವದಲ್ಲಿ ಒಳಗೊಂಡಿರುವಂತೆ ಮಾಡುತ್ತೇವೆ, ಅದು ಅತ್ಯಂತ ಮಹತ್ವದ್ದಾದ ಅಸ್ತಿತ್ವ ಎಂದರೆ ರಾಷ್ಟ್ರೀಯ ಧರ್ಮ. ಅದು ವಿಶ್ವಂಭರ ಕೂಡ ಆಗಿದೆ ಎಂದು ನಾವು ನಂಬುತ್ತೇವೆ. ಜೀವನದ ಬಲವತ್ತರವಾದ ನಿಯಮವಿದೆ, ಮಾನವ ಉತ್ಕ್ರಾಂತಿಯ ಶ್ರೇಷ್ಠ ತತ್ವವಿದೆ. ಭಾರತ ಆಧ್ಯಾತ್ಮಿಕ ಜ್ಞಾನ ಹಾಗೂ ಅನುಭವಗಳನ್ನು ಪಾಲಿಸಿಕೊಂಡು ಬರುವ, ಉದಾಹರಣೆಯಾಗುವ ಮತ್ತು ಧರ್ಮಬೋಧಕವಾಗುವ ಅದೃಷ್ಟ ಹೊಂದಿದೆ. ಇದು ಸನಾತನ ಧರ್ಮ, ಎಂದರೆ ಶಾಶ್ವತ ಧರ್ಮ. ವಿದೇಶೀಯ ಪ್ರಭಾವದ ಒತ್ತಡದಿಂದಾಗಿ ಭಾರತ ಧರ್ಮವನ್ನು ಜೀವಿಸುವ ನೈಜತೆಯ ಮೇಲಿನ ಹಿಡಿತ ಕಳೆದುಕೊಂಡಿದೆ, ಆದರೆ ಅದರ ರಚನೆಯ ಮೇಲಿನ ಹಿಡಿತವನ್ನು ಕಳೆದುಕೊಂಡಿಲ್ಲ, ಏಕೆಂದರೆ ಭಾರತದಲ್ಲಿ ಧರ್ಮದ ಪ್ರಕಾರ ಜೀವಿಸದಿದ್ದರೆ ಅದೇನೂ ಅಲ್ಲವೇ ಅಲ್ಲ. ಅದನ್ನು ಕೇವಲ ಜೀವನಕ್ಕೆ ಮಾತ್ರ ಅನ್ವಯಿಸುವುದಿರುವುದಿಲ್ಲ, ಆದರೆ ಜೀವನದ ಇಡಿಯ ಭಾಗಕ್ಕೆ ಅನ್ವಯಿಸಬೇಕಾಗುತ್ತದೆ. ಅದರ ಮನೋಧರ್ಮ ನಮ್ಮ ಸಮಾಜ, ರಾಜಕೀಯ, ಸಾಹಿತ್ಯ, ವಿಜ್ಞಾನ, ನಮ್ಮ ವೈಯಕ್ತಿಕ ಚಾರಿತ್ರ್ಯ, ಮನಃಸ್ಥಿತಿ ಮತ್ತು ಅಭೀಪ್ಸೆ ಇವೆಲ್ಲವುಗಳ ಎರಕದಲ್ಲಿ ಪ್ರವೇಶಿಸಬೇಕಾಗುತ್ತದೆ. ಈ ಧರ್ಮದ ಅಂತರ್ಯವನ್ನು ಒಂದು ಸತ್ಯವೆಂದು ಅನುಭವಕ್ಕೆ ತಂದುಕೊಳ್ಳುವುದು, ಮೇಲಕ್ಕೆದ್ದು ಬರುವ ಅದರ ಭಾವಗಳನ್ನು ಭಾವನೆಗೆ ತಂದುಕೊಳ್ಳುವುದು ಮತ್ತು ಅದನ್ನು ಅಭಿವ್ಯಕ್ತಪಡಿಸುವುದು, ನಿರ್ವಹಿಸುವುದು ಇದೆಲ್ಲವನ್ನೂ ನಾವು ಕರ್ಮಯೋಗ ಎಂದು ಅರ್ಥ ಮಾಡಿಕೊಳ್ಳುತ್ತೇವೆ. ಯೋಗವನ್ನು ಮಾನವ ಜೀವನದ

ಆದರ್ಶವನ್ನಾಗಿ ಮಾಡುವುದಕ್ಕೆಂದು ಭಾರತ ಈಗ ಮೇಲೆದ್ದು ಬರುತ್ತಿದೆ ಎಂದು ನಾವು ನಂಬುತ್ತೇವೆ, ಯೋಗದ ಮೂಲಕ ಭಾರತ ತನ್ನ ಸ್ವಾತಂತ್ರ್ಯವನ್ನು, ಏಕತೆಯನ್ನು ಮತ್ತು ಶ್ರೇಷ್ಠತೆಯನ್ನು ಪಡೆಯುತ್ತದೆ ಮತ್ತು ಯೋಗದ ಮೂಲಕ ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವ ಬಲವನ್ನು ಪಡೆಯುತ್ತದೆ. ನಾವು ಆಧ್ಯಾತ್ಮಿಕ ಕ್ರಾಂತಿಯನ್ನು ಪೂರ್ವಭಾವಿಯಾಗಿ ನೋಡುತ್ತೇವೆ, ಭೌತಿಕವಾದುದು ಅದರ ಛಾಯೆ ಮತ್ತು ಪ್ರತಿಫಲಿತವಾದದ್ದು ಮಾತ್ರವಾಗಿರುತ್ತದೆ.

ಯುರೋಪದ ಮನುಷ್ಯ ಯಂತ್ರೋಪಕರಣಗಳಿಗೆ ಹೆಚ್ಚಿನ ಮಹತ್ವ ಕೊಡುತ್ತಾನೆ. ಮಾನವತೆಯ ಪುನರುಜ್ಜೀವನವನ್ನು ಸಮಾಜದ ಯೋಜನೆಯ ಮೂಲಕ, ಸರಕಾರದ ಪದ್ಧತಿಗಳ ಮೂಲಕ ಅರಸುತ್ತಾನೆ, ಪಾರ್ಲಿಮೆಂಟಿನ ಕಾಯ್ದೆ ಮೂಲಕ ಸ್ವರ್ಣಯುಗ ಬರುವಂತೆ ಮಾಡಬಹುದೆಂಬ ಭರವಸೆ ಹೊಂದಿದ್ದಾನೆ. ಯಂತ್ರೋಪಕರಣಗಳು ಅತ್ಯಂತ ಮಹತ್ವದವಾಗಿವೆ, ಆದರೆ ಅವು ಕೇವಲ ಅಂತರಂಗದಲ್ಲಿರುವ ಆತ್ಮದ ಹಾಗೂ ಹಿಂದಿರುವ ಶಕ್ತಿಯ ಕಾರ್ಯನಿರ್ವಾಹಕ ಸಾಧನಗಳಾಗಿವೆ.

ಯುರೋಪ ದೇಶವನ್ನು ಅನುಕರಣೆ ಮಾಡಿ ಯಂತ್ರೋಪಕರಣಗಳಲ್ಲಿ ಬದಲು ಮಾಡುವುದರ ಮೂಲಕ ನಮ್ಮ ಸಮಾಜದ ಪುನರುಜ್ಜೀವನ ಪರಿಣಾಮಕಾರಿಯಾಗುವಂತೆ ಮಾಡಬಹುದು ಎಂದು ನಾವು ನಂಬುವುದಿಲ್ಲ. ವಿಧವಾ ವಿವಾಹ, ಜಾತಿಯ ಬದಲಾಗಿ ವರ್ಗ ವ್ಯವಸ್ಥೆ, ತರುಣರ ವಿವಾಹ, ಅಂತರ್ಜಾತೀಯ ವಿವಾಹ, ಜಾತಿಭೇದ ಮರೆತು ಒಟ್ಟಿಗೆ ಭೋಜನ ಮಾಡುವುದು ಮತ್ತು ಸಮಾಜ ಸುಧಾರಕರ ಇನ್ನಿತರ ಅಚ್ಚುಮೆಚ್ಚಿನ ಯೋಜನೆಗಳು ಇವೆಲ್ಲ ಯಾಂತ್ರಿಕ ಸ್ವರೂಪದ ಬದಲಾವಣೆಗಳು, ಅವುಗಳ ಹಿರಿಮೆ ಇಲ್ಲವೆ ಅವಗುಣ ಏನೇ ಇರಲಿ, ಅವುಗಳೇ ಸ್ವತಃ ದೇಶದ ಆತ್ಮ ಜೀವಂತವಿರುವಂತೆ ರಕ್ಷಿಸಲಾರವು ಇಲ್ಲವೆ ಕುಗ್ಗುವಿಕೆ ಹಾಗೂ ಅವನತಿಗಳ ಗತಿಯನ್ನು ತಡೆಹಿಡಿಯಲಾರವು. ಆತ್ಮ ಮಾತ್ರ ರಕ್ಷಣೆ ನೀಡಬಲ್ಲದು, ಹೃದಯದಲ್ಲಿ ಶ್ರೇಷ್ಠರೂ, ಮುಕ್ತರೂ ಆಗುವುದರಿಂದ ಮಾತ್ರ ನಾವು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಶ್ರೇಷ್ಠರೂ ಹಾಗೂ ಮುಕ್ತರೂ ಆಗಬಲ್ಲೆವು.

ಪಶ್ಚಿಮ ದೇಶಗಳಿಂದ ಆಮದು ಮಾಡಿಕೊಂಡ ಧರ್ಮದ ಸಂಕುಚಿತ, ಕೀಳುಮಟ್ಟದ ವಿಚಾರಗಳಲ್ಲಿ ಸೀಮಿತಗೊಂಡ ಹೊಸ ಪಂಥಗಳನ್ನು ಅನೇಕವಾಗಿಸುವುದರ ಮೂಲಕ ಇಲ್ಲವೆ ಕೇವಲ ಹಿಂದುತ್ವದ ದೇಹ, ವಸ್ತ್ರಗಳನ್ನು



ನಿರಂತರಗೊಳಿಸುವುದರ ಮೂಲಕ ನಾವು ಆಧ್ಯಾತ್ಮಿಕ ಆರೋಗ್ಯವನ್ನು, ಚೈತನ್ಯವನ್ನು ಮತ್ತು ಶ್ರೇಷ್ಠತೆಯನ್ನು ಮರಳಿ ಪಡೆಯುವೆವು ಎಂಬುದನ್ನು ನಾವು ನಂಬುವುದಿಲ್ಲ. ಜಗತ್ತು ಅತ್ಯಗತ್ಯದ್ದಾದ ಮುಕ್ತ ಯೋಜನೆ ಮತ್ತು ಪ್ರಾಪಂಚಿಕತೆ ಇವುಗಳ ಪ್ರಭುತ್ವಾಂತರದ ಅವಧಿಯ ಮೂಲಕ ಚಲಿಸುತ್ತದೆ. ಆ ಚಲನೆ ಧಾರ್ಮಿಕ ಯೋಚನೆ ಮತ್ತು ಅನುಭವಗಳ ಒಂದು ಸಮನ್ವಯದತ್ತ, ಪೂರ್ತಿ ನಂಬಿಕೆ ಹೊಂದಿದ ಹಾಗೂ ಉತ್ಕಟ ಆಸಕ್ತಿಯಿರುವ, ಅಸಹಿಷ್ಣುತೆಯಿಂದ ಮುಕ್ತವಾದ ಹೊಸ ಧಾರ್ಮಿಕ ಜಗಜ್ಜೀವನದತ್ತ ಇರುತ್ತದೆ, ಏಕೆಂದರೆ ಅದಕ್ಕೆ ಐಕ್ಯೈಕನಾದವನಲ್ಲಿ ಅಲುಗಾಡದ ನಂಬಿಕೆಯಿರುತ್ತದೆ. ನಂಬಿಕೆಯನ್ನೂ, ವಿಜ್ಞಾನವನ್ನೂ ಈಶ್ವರವಾದ (Theism), ಕ್ರೈಸ್ತ ಧರ್ಮ, ಇಸ್ಲಾಮ್, ಬೌದ್ಧ ಧರ್ಮಗಳನ್ನೂ ಅಪ್ಪಿಕೊಳ್ಳುವ ಧರ್ಮವು ಇವುಗಳಲ್ಲಾವುದೂ ಆಗಿರದೆ ಜಗತ್ತಿನ ಆತ್ಮ ಯಾವುದರತ್ತ ಚಲಿಸುತ್ತದೆಯೋ ಅದಾಗಿರುತ್ತದೆ. ನಮ್ಮದೇ ಧರ್ಮವನ್ನು ಗಮನಿಸಿದಾಗ ಅದು ಅತ್ಯಂತ ಸಂಶಯವಾದಿಯಾದದ್ದು ಮತ್ತು ಎಲ್ಲದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ನಂಬಿಕೆಯುಳ್ಳದ್ದು ಆಗಿರುವುದನ್ನು ನೋಡುತ್ತೇವೆ. ಅತ್ಯಂತ ಸಂಶಯವಾದಿ–ಯಾದದ್ದು ಏಕೆಂದರೆ ಅದು ಅತಿ ಹೆಚ್ಚಿನ ರೀತಿಯಲ್ಲಿ ಪ್ರಶ್ನಿಸಿದೆ ಮತ್ತು ಪ್ರಯೋಗ ಕೈಕೊಂಡಿದೆ, ಹೆಚ್ಚಿನ ರೀತಿಯಲ್ಲಿ ನಂಬಿಕೆಯುಳ್ಳದ್ದು, ಏಕೆಂದರೆ ಅದಕ್ಕೆ ಆಳಾತಿ ಆಳದ ಅನುಭವವಿದೆ ಮತ್ತು ವೈವಿಧ್ಯಮಯ ಧನಾತ್ಮಕ ಆಧ್ಯಾತ್ಮಿಕ ಜ್ಞಾನವಿದೆ – ಆ ವಿಶಾಲ ಹಿಂದುತ್ವ ಒಂದು ಮತತತ್ವವಲ್ಲ ಇಲ್ಲವೆ ಹಲವಾರು ಮತತತ್ವಗಳ ಸಂಯೋಜನೆಯದಾಗಿಲ್ಲ, ಅದು ಸಾಮಾಜಿಕ ಚೌಕಟ್ಟಲ್ಲ, ಆದರೆ ಗತಕಾಲದ ಹಾಗೂ ಭವಿಷ್ಯತ್ತಿನ ಉತ್ಕ್ರಾಂತಿಯ ಮನೋಧರ್ಮದ್ದಾಗಿದೆ, ಅದು ಯಾವುದನ್ನೂ ತಿರಸ್ಕರಿಸುವುದಿಲ್ಲ, ಆದರೆ ಪ್ರತಿಯೊಂದನ್ನು ಪರೀಕ್ಷೆಗೆ ಒಳಪಡಿಸುವುದರ ಮೇಲೆ ಮತ್ತು ಅನುಭವಕ್ಕೆ ತಂದುಕೊಳ್ಳುವುದರ ಮೇಲೆ ಒತ್ತು ನೀಡುತ್ತದೆ, ಪರೀಕ್ಷೆಗೆ ಒಳಪಡಿಸಿದ ನಂತರ, ಅನುಭವಕ್ಕೆ ತಂದುಕೊಂಡಾಗ ಅದನ್ನು ಆತ್ಮದ ಉಪಯೋಗಗಳತ್ತ ಹೊರಳಿಸುತ್ತದೆ, ಈ ಹಿಂದುತ್ವದಲ್ಲಿ ಭವಿಷ್ಯತ್ತಿನ ಜಗತ್ತಿನ ಧರ್ಮದ ಆಧಾರವನ್ನು ಕಂಡುಕೊಳ್ಳುತ್ತೇವೆ. ಸನಾತನ ಧರ್ಮಕ್ಕೆ ಹಲವಾರು ಧರ್ಮ ಗ್ರಂಥಗಳಿವೆ: ವೇದ, ವೇದಾಂತ, ಉಪನಿಷತ್ತು, ಭಗವದ್ಗೀತೆ, ದರ್ಶನ, ಪುರಾಣ ಮತ್ತು ಅದು ಬೈಬಲ್, ಕುರಾನಗಳನ್ನು ನಿರ್ಲಕ್ಷಿಸುವುದಿಲ್ಲ, ಆದರೆ ಅದರ ನಿಜವಾದ ಅತ್ಯಂತ ಅಧಿಕಾರಯುಕ್ತ ಶಾಸ್ತ್ರ ಹೃದಯದಲ್ಲಿದೆ, ಅಲ್ಲಿ ಸನಾತನನ ವಾಸಸ್ಥಾನವಿದೆ. ನಮ್ಮ ಆಂತರಿಕ ಆಧ್ಯಾತ್ಮಿಕ ಅನುಭವಗಳಲ್ಲಿ ಜಗತ್ತಿನ ಧರ್ಮ ಗ್ರಂಥಗಳಿಗೆ ಪ್ರಮಾಣ ಹಾಗೂ ಮೂಲವನ್ನು, ಜ್ಞಾನ, ಪ್ರೇಮ, ನಡೆನುಡಿ ಇವುಗಳ

ನಿಯಮವನ್ನು, ಕರ್ಮಯೋಗದ ತಳಹದಿ ಹಾಗೂ ಸ್ಫೂರ್ತಿಯನ್ನು ಕಂಡುಕೊಳ್ಳುತ್ತೇವೆ.

ಆದ್ದರಿಂದ ಮಾನವ ಕುಲದ ಸಲುವಾಗಿ ನಮ್ಮ ಗುರಿ ಭಾರತವನ್ನು ನಿರ್ಮಾಣ ಮಾಡುವ ಕಾರ್ಯಕ್ಕೆ ಸಹಾಯಮಾಡುವುದಾಗಿದೆ. ಇದು ನಾವು ಪ್ರತಿಪಾದಿಸುವ ಹಾಗೂ ಅನುಸರಿಸುತ್ತಿರುವ ರಾಷ್ಟ್ರೀಯತೆಯ ಮನೋಧರ್ಮ. ನಾವು ಮನು ಕುಲಕ್ಕೆ ಹೇಳುತ್ತೇವೆ: "ನೀವು ಶ್ರೇಷ್ಠತರ ಹೆಜ್ಜೆ ಇರಿಸುವ, ಪ್ರಾಪಂಚಿಕ ಅಸ್ತಿತ್ವದಿಂದ ಮೇಲಕ್ಕೆದ್ದೇಳುವ, ಉಚ್ಚತರ ಆಳಾತಿ ಆಳದ ಹೆಚ್ಚು ವಿಸ್ತಾರವಾದ ಜೀವನದತ್ತ ಚಲಿಸಬೇಕಾದ ಕಾಲ ಸನ್ನಿಹಿತವಾಗಿದೆ, ಮಾನವ ಕುಲ ಅದರತ್ತ ಚಲಿಸುತ್ತಿದೆ. ಮಾನವ ಕುಲವನ್ನು ಕಾಡಿಸಿದ ಸಮಸ್ಯೆಗಳಿಗೆ ಪರಿಹಾರ ಆಂತರಿಕ ಸಾಮ್ರಾಜ್ಯವನ್ನು ಗೆದ್ದುಕೊಳ್ಳುವುದರ ಮೂಲಕ ಮಾತ್ರ ದೊರಕಬಲ್ಲದು, ಅದನ್ನು ಪ್ರಕೃತಿಯ ಶಕ್ತಿಗಳನ್ನು ಸುಖ–ಸೌಲಭ್ಯಗಳ ಸೇವೆಗಾಗಿ ಚಾಲಕಶಕ್ತಿಗಳನ್ನಾಗಿ ಬಳಸುವುದರಿಂದ ದೊರಕಿಸಲಾಗದು, ಆದರೆ ಬುದ್ಧಿಮತ್ತೆಯ ಹಾಗೂ ಆತ್ಮದ ಶಕ್ತಿಗಳ ಮೇಲೆ ಪ್ರಭುತ್ವ ಪಡೆಯುವುದರ ಮೂಲಕ, ಆಂತರಿಕವಾಗಿ ಹಾಗೂ ಬಾಹ್ಯದಲ್ಲಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವುದರ ಮೂಲಕ ಮತ್ತು ಆಂತರಿಕವಾಗಿ ಬಾಹ್ಯ ಪ್ರಕೃತಿಯ ಮೇಲೆ ಜಯ ಸಾಧಿಸುವುದರ ಮೂಲಕ ಅದನ್ನು ಸಾಧಿಸಬಹುದು. ..."

ಭಾರತದ, ಜಗತ್ತಿನ ಹಾಗೂ ದೇವನ ಕಾರ್ಯಕೈಕೊಳ್ಳಲು ಸಿದ್ಧರಾಗಿರುವ ವ್ಯಕ್ತಿಗಳಿಗೆ, ಅದರಲ್ಲೂ ವಿಶೇಷವಾಗಿ ತರುಣರಿಗೆ ನಾವು ಹೇಳುತ್ತೇವೆ: "ಯುರೋಪಿಯನ್‌ರ ವಿಚಾರಗಳಿಗೆ ನಿಮ್ಮ ಮನಸ್ಸುಗಳನ್ನು ಅಧೀನಪಡಿಸಿ–ಕೊಂಡರೆ ಇಲ್ಲವೆ ಜೀವನವನ್ನು ಪ್ರಾಪಂಚಿಕ ದೃಷ್ಟಿಯಿಂದ ನೋಡಿದರೆ ನೀವು ಈ ಆದರ್ಶಗಳಿಗೆ ಮಾನ್ಯತೆ ಕೊಡಲಾರಿರಿ, ಅದಕ್ಕೂ ಹೆಚ್ಚಾಗಿ ಅವುಗಳನ್ನು ನೆರವೇರಿಸಲಾರಿರಿ. ಪ್ರಾಪಂಚಿಕವಾಗಿ ನೀವು ಏನೂ ಅಲ್ಲ, ಆಧ್ಯಾತ್ಮಿಕವಾಗಿ ನೀವು ಎಲ್ಲವೂ ಆಗಿದ್ದೀರಿ. ಭಾರತೀಯ ಮನುಷ್ಯ ಮಾತ್ರ ಎಲ್ಲವನ್ನು ನಂಬಬಲ್ಲ, ಎಲ್ಲವನ್ನು ಧೈರ್ಯದಿಂದ ಎದುರಿಸಬಲ್ಲ, ಎಲ್ಲವನ್ನೂ ತ್ಯಾಗಮಾಡಬಲ್ಲ, ಆದ್ದರಿಂದ ಮೊದಲು ನೀವು ಭಾರತೀಯರಾಗಿರಿ, ನಿಮ್ಮ ಪೂರ್ವಜರ ಪಿತ್ರಾರ್ಜಿತ ಸ್ವತ್ತನ್ನು ಮರಳಿ ಪಡೆಯಿರಿ. ಆರ್ಯರ ಯೋಚನೆಯನ್ನು, ಶಿಸ್ತುಪಾಲನೆಯನ್ನು, ಚಾರಿತ್ರ್ಯವನ್ನು, ಜೀವನವನ್ನು ಮರಳಿ ಪಡೆಯಿರಿ, ವೇದಾಂತ, ಗೀತೆ ಮತ್ತು ಯೋಗಗಳನ್ನು ಮರಳಿ ಪಡೆಯಿರಿ, ಕೇವಲ ಬುದ್ಧಿಮತ್ತೆಯಲ್ಲಾಗಲಿ,



ಭಾವನೆಯಲ್ಲಾಗಲಿ ಅಲ್ಲ, ಆದರೆ ನಿಮ್ಮ ಜೀವನದಲ್ಲಿ ಮರಳಿ ಪಡೆಯಿರಿ, ನೀವು ಶ್ರೇಷ್ಠರೂ, ಬಲಿಷ್ಠರೂ, ಅಜೇಯರೂ, ನಿರ್ಭಯರೂ ಆಗುವಿರಿ, ಜೀವನವಾಗಲಿ ಮರಣವಾಗಲಿ ನಿಮಗಾಗಿ ಯಾವ ಭೀಕರ ವಿಷಯಗಳನ್ನು ಹೊಂದಿರುವುದಿಲ್ಲ. ತೊಂದರೆ ಮತ್ತು ಅಸಾಧ್ಯತೆ ಇವು ನಿಮ್ಮ ಶಬ್ದ ಭಾಂಡಾರದಿಂದ ಮಾಯ–ವಾಗುವವು. ಏಕೆಂದರೆ ಬಲ ನಿಮ್ಮ ಆತ್ಮದಲ್ಲಿ ಶಾಶ್ವತವಾಗಿರುತ್ತದೆ ಮತ್ತು ಆ ಸಾಮ್ರಾಜ್ಯವನ್ನು ಎಂದರೆ ಆಂತರಿಕ ಸ್ವರಾಜ್ಯವನ್ನು ನಿಮಗಾಗಿ ನೀವು ಬಾಹ್ಯ ಸಾಮ್ರಾಜ್ಯವನ್ನು ಗೆದ್ದುಕೊಳ್ಳುವ ಮೊದಲು ಮರಳಿ ಜಯಿಸಬೇಕು. ಅಲ್ಲಿ ಜಗನ್ಮಾತೆ ವಾಸ ಮಾಡುತ್ತಾಳೆ ಮತ್ತು ಬಲವನ್ನು ಕೊಡಲೆಂದು ಅಲ್ಲಿ ಪೂಜೆಗೊಳ್ಳುವುದಕ್ಕಾಗಿ ಕಾದುಕೊಂಡಿದ್ದಾಳೆ. ಅವಳನ್ನು ನಂಬಿರಿ, ಅವಳಿಗೆ ಸೇವೆ ಸಲ್ಲಿಸಿರಿ, ನಿಮ್ಮ ಸಂಕಲ್ಪಗಳನ್ನು ಅವಳಲ್ಲಿ ಕಳೆದುಕೊಳ್ಳಿರಿ, ನಿಮ್ಮ ಅಹಂಕಾರವನ್ನು ದೇಶದ ಶ್ರೇಷ್ಠತರ ಅಹಂಕಾರದಲ್ಲಿ, ನಿಮ್ಮ ಪ್ರತ್ಯೇಕ ಸ್ವಾರ್ಥವನ್ನು ಮನುಕುಲದ ಸೇವೆಯಲ್ಲಿ ಕಳೆದುಕೊಳ್ಳಿರಿ. ಬಲದ ಮೂಲವನ್ನು ನಿಮ್ಮಲ್ಲಿ ಮರಳಿ ಪಡೆಯಿರಿ ಮತ್ತು ಉಳಿದದ್ದೆಲ್ಲ ಎಂದರೆ ಸಾಮಾಜಿಕ ದೃಢತೆ, ಬೌದ್ಧಿಕ ಸರ್ವಶ್ರೇಷ್ಠತೆ, ರಾಜಕೀಯ ಸ್ವಾತಂತ್ರ್ಯ, ಮಾನವ ಯೋಚನೆಯ ಮೇಲೆ ಪ್ರಭುತ್ವ, ಪ್ರಪಂಚದ ನಾಯಕತ್ವ ಇವೆಲ್ಲ ಅಧಿಕವಾಗಿ ಕೂಡಿಕೊಳ್ಳುವವು."

**(8/25–28)** **– ಶ್ರೀ ಅರವಿಂದರು**

*

## ರಾಷ್ಟ್ರೀಯ ಶಿಕ್ಷಣದ ಆವಶ್ಯಕತೆ

ಭಾರತದಲ್ಲಿರುವ ನಾವು ಎಷ್ಟೊಂದು ಅನಾಗರಿಕರಾಗಿದ್ದೇವೆಂದರೆ ನಮ್ಮ ಮಕ್ಕಳನ್ನು ಶಾಲೆಗೆ ಅತ್ಯಂತ ಒರಟಾದ ಪ್ರಯೋಜನಾತ್ಮಕ ಹಾಗೂ ಜ್ಞಾನದ ಬಗ್ಗೆ ಅನಾಸಕ್ತ ಆಸೆಯ ಮಿಶ್ರಣವಿಲ್ಲದ ಉದ್ದೇಶಗಳನ್ನಿಟ್ಟುಕೊಂಡು ಕಳಿಸುತ್ತೇವೆ, ಆದರೆ ನಮಗೆ ದೊರೆಯುತ್ತಿರುವ ಶಿಕ್ಷಣವೇ ಇದಕ್ಕೆ ಜವಾಬ್ದಾರಿಯಾಗಿದೆ.

ಹಾಗಾಗಿ ನಾವು ದೂರುತ್ತಿರುವ ಅನಿಷ್ಟದ ನಿಜವಾದ ಮೂಲ ಭಿನ್ನವಾದ ಏನೋ ಒಂದಾಗಿದೆ, ಅದು ಮೂಲಭೂತ, ವಿಷಾದಕರ ದೋಷ, ಆ ದೋಷದಿಂದಾಗಿ ಈ ದೇಶದಲ್ಲಿರುವ ನಾವು ಶಿಕ್ಷಣವನ್ನು ಜ್ಞಾನಾರ್ಜನೆ ಎಂದು ಗೊಂದಲಕ್ಕೀಡಾಗಿದ್ದೇವೆ ಮತ್ತು ಜ್ಞಾನವನ್ನೇ ವಿಚಿತ್ರ ರೀತಿಯಲ್ಲಿ ಸಂಕುಚಿತ, ಧಾರಾಳವಲ್ಲದ ಅರ್ಥದಲ್ಲಿ ಗ್ರಹಿಸಿದ್ದೇವೆ. ವಿದ್ಯಾರ್ಥಿಗೆ ಜ್ಞಾನವನ್ನು ಕೊಡುವುದು

ಅವಶ್ಯವಿದೆ, ಆದರೆ ಅದಕ್ಕಿಂತಲೂ ಹೆಚ್ಚು ಅವಶ್ಯವಾದದ್ದು ಅವನು ತನ್ನ ಜ್ಞಾನವನ್ನು ಉಪಯೋಗಿಸುವ ಸಾಮರ್ಥ್ಯ ಅವನಲ್ಲಿ ನಿರ್ಮಾಣಗೊಳ್ಳುವಂತೆ ಮಾಡುವು–ದಾಗಿದೆ.

ಹಾಗಾಗಿ ಸುಧಾರಣೆಯ ಕ್ರಮದಲ್ಲಿ ಮೊದಲ ಹೆಜ್ಜೆ ನಮ್ಮ ಶಿಕ್ಷಣದ ಇಡೀ ಗುರಿಗಳನ್ನು ಹಾಗೂ ವಿಧಾನಗಳನ್ನು ಕ್ರಾಂತಿಗೊಳಪಡಿಸುವುದಾಗಿದೆ. ಶಿಕ್ಷಕರು ತಮ್ಮ ಚೈತನ್ಯದ ಹತ್ತರಲ್ಲಿಯ ಒಂಬತ್ತು ಭಾಗಗಳನ್ನು ಕ್ರಿಯಾಶೀಲ ಮಾನಸಿಕ ಸಾಮರ್ಥ್ಯ ಕುರಿತು ಶಿಕ್ಷಣ ನೀಡುವಂತೆ ನಾವು ರೂಢಿಯಲ್ಲಿ ತರಬೇಕು; ಅದು ಹಾಗಿರುವಾಗ ನಿಷ್ಕ್ರಿಯ ರೂಪದಲ್ಲಿ ಉಳಿದುಕೊಳ್ಳುವ ನೆನಪಿನ ಶಕ್ತಿಯು ಎರಡನೆಯದಾಗಿ, ಸರಿಯಾಗಿ ಗುರುತಿಸಲಾದ, ಆದರೆ ಗೌಣವಾದ ಸ್ಥಾನ–ದಲ್ಲಿರಬೇಕು. ನಮ್ಮ ಶಾಲೆಗಳು ಹಾಗೂ ವಿಶ್ವವಿದ್ಯಾಲಯಗಳು ನಡೆಸುವ ಪರೀಕ್ಷೆಗಳು ಕ್ರಿಯಾಶೀಲ ಸಾಮರ್ಥ್ಯಗಳನ್ನು ಗುರುತಿಸುವುದಕ್ಕಾಗಿರಬೇಕು, ನೆನಪಿನ ಶಕ್ತಿಯನ್ನು ಗುರುತಿಸುವ ಪರೀಕ್ಷೆಗಳಾಗಬಾರದು. ಆದರೆ ಕೇವಲ ವ್ಯಾಸಂಗ ಕ್ರಮದಲ್ಲಿ ಮರು ವ್ಯವಸ್ಥೆ ಮಾಡುವುದರ ಮೂಲಕ ಈ ಉದ್ದೇಶವನ್ನು ಪರಿಣಾಮಕಾರಿಯಾಗಿಸಲು ಸಾಧ್ಯವಾಗದು. ಕೆಲವು ವಿಷಯಗಳು, ಇನ್ನಿತರ ವಿಷಯಗಳಿಗಿಂತ, ಕೆಲವೊಂದು ಸಾಮರ್ಥ್ಯಗಳನ್ನು ಅಭಿವೃದ್ಧಿಗೊಳಿಸಲು ಹೆಚ್ಚು ಯೋಗ್ಯವಾಗಿರುತ್ತವೆ ಎಂಬುದು ಸತ್ಯ. ಭೂಮಿತಿ, ತರ್ಕಶಾಸ್ತ್ರ, ರಾಜಕೀಯ ಅರ್ಥವ್ಯವಸ್ಥೆ ಇವುಗಳ ವ್ಯಾಸಂಗ ಸರಿಯಾಗಿ ತರ್ಕಮಾಡುವ ಸಾಮರ್ಥ್ಯಕ್ಕೆ ಹೆಚ್ಚು ಸಹಾಯಕವಾಗಿರುತ್ತದೆ. ಭಾಷೆಗಳನ್ನು ಅಭ್ಯಾಸ ಮಾಡುವುದರಿಂದಾಗುವ ಪ್ರಯೋಜನಗಳಲ್ಲಿ ಅತ್ಯಂತ ಮಹತ್ವದ್ದಾದದ್ದೆಂದರೆ ಅದು ಅಭಿವ್ಯಕ್ತಿಯ ಸಾಮರ್ಥ್ಯವನ್ನು ಸುಧಾರಿಸುತ್ತದೆ ಮತ್ತು ಅದಕ್ಕೆ ತರಬೇತು ನೀಡುತ್ತದೆ. ಇತಿಹಾಸವನ್ನು ಬೌದ್ಧಿಕವಾಗಿ ಅಭ್ಯಾಸ ಮಾಡುವುದರಿಂದ ತುಲನೆ ಮಾಡುವ ಹಾಗೂ ಭಿನ್ನತೆ ಗುರುತಿಸುವ ಸಾಮರ್ಥ್ಯ ವಿಸ್ತಾರಗೊಳ್ಳುತ್ತದೆ. ವಾಸ್ತವದಲ್ಲಿ ವಿಷಯ ಯಾವುದೇ ಇರಲಿ (ಲೆಕ್ಕಾಚಾರ ಮಾಡುವ ವಿಜ್ಞಾನಗಳನ್ನು ಹೊರತು ಪಡಿಸಿ), ಅದು ಸಮರ್ಥ ಶಿಕ್ಷಕನ ಮಾರ್ಗದರ್ಶನದಲ್ಲಿ ಮನಸ್ಸಿನ ಎಲ್ಲ ಸಾಮಾನ್ಯ ಸಾಮರ್ಥ್ಯಗಳು ಅಭಿವೃದ್ಧಿ ಹೊಂದುವುದಕ್ಕೆ ಸ್ಥಾನ ಪಡೆದುಕೊಳ್ಳುವಂತೆ ಮಾಡುತ್ತದೆ.

**(1/358–67)** **– ಶ್ರೀ ಅರವಿಂದರು**

*



## ಸಮಗ್ರ ಶಿಕ್ಷಣದ ಆವಶ್ಯಕತೆ

ಭಾರತದಲ್ಲಿ ಆತ್ಮಜ್ಞಾನವಿದೆ, ಅದಕ್ಕೂ ಹೆಚ್ಚಾಗಿ ಪ್ರಾಚೀನ ಕಾಲದಲ್ಲಿ ಆತ್ಮಜ್ಞಾನವಿತ್ತು ಎಂದು ಹೇಳಬಹುದು. ಅದು ಭೌತದ್ರವ್ಯವನ್ನು ನಿರ್ಲಕ್ಷಿಸಿತು, ಅದರಿಂದಾಗಿ ವೇದನೆಗೊಳಗಾಯಿತು.

ಪಾಶ್ಚಾತ್ಯ ದೇಶಗಳಲ್ಲಿ ಭೌತದ್ರವ್ಯದ ಬಗ್ಗೆ ಜ್ಞಾನವಿದೆ, ಆದರೆ ಆತ್ಮವನ್ನು ಅವರು ನಿರ್ಲಕ್ಷಿಸಿದ್ದಾರೆ, ಅದರಿಂದಾಗಿ ಅವರು ಬಹಳ ಕೆಟ್ಟ ರೀತಿಯಲ್ಲಿ ವೇದನೆಗೊಳಗಾಗಬೇಕಾಯಿತು.

ಕೆಲವೊಂದು ಮಾರ್ಪಾಡುಗಳೊಂದಿಗೆ ಸಮಗ್ರ ಶಿಕ್ಷಣವನ್ನು ಜಗತ್ತಿನ ಎಲ್ಲ ದೇಶಗಳು ಸರಿಹೊಂದಿಸಿಕೊಳ್ಳಬಹುದಾಗಿದೆ. ಪೂರ್ತಿಯಾಗಿ ಅಭಿವೃದ್ಧಿ ಹೊಂದಿದ ಹಾಗೂ ಉಪಯೋಗಿಸಲಾದ ಭೌತದ್ರವ್ಯದ ಮೇಲೆ ಆತ್ಮದ ನ್ಯಾಯ–ಸಮ್ಮತ ಅಧಿಕಾರವನ್ನು ಮರಳಿ ತರಬಹುದು.

*

**ಪ್ರಶ್ನೆ :** *ಯಾವ ಭ್ರಮೆಗಳು ಹಾಗೂ ಮೋಸಹೋಗುವಿಕೆಗಳು ಇಂದು ನಮ್ಮ ಶಿಕ್ಷಣವನ್ನು ಸುತ್ತುವರಿದಿವೆ? ಯಾವ ರೀತಿಯಲ್ಲಿ ನಾವು ಅವುಗಳಿಂದ ಮುಕ್ತಿ ಪಡೆಯಬಹುದು?*

**ಶ್ರೀಮಾತೆ :** ಅ) ಯಶಸ್ಸು, ವೃತ್ತಿ ಮತ್ತು ಧನ ಇವುಗಳಿಗೆ, ಬಹುಮಟ್ಟಿಗೆ, ಪ್ರತ್ಯೇಕ ಮಹತ್ವ ಕೊಟ್ಟಿರುವುದಾಗಿದೆ.

ಆ) ದಿವ್ಯಾತ್ಮದೊಂದಿಗೆ ಸಂಪರ್ಕ ಪಡೆಯುವುದರ ಮೇಲೆ ಮತ್ತು ಸತ್ತೆಯ ದೈವೀ ಸತ್ಯದ ಬೆಳವಣಿಗೆ ಹಾಗೂ ಪ್ರಕಟಣೆಯ ಮೇಲೆ ಒತ್ತುಕೊಡುವುದಾಗಿದೆ.

*

ಸರಕಾರ 'ಯೋಗ'ವನ್ನು ಶಿಕ್ಷಣದ ಒಂದು ಭಾಗ ಎಂದು ಗುರುತಿಸುವುದನ್ನು ನಾನು ಇಷ್ಟಪಡುತ್ತೇನೆ. ಅದು ಕೇವಲ ನಮ್ಮ ಸಲುವಾಗಿ ಅಲ್ಲ, ಆದರೆ ಅದು ದೇಶಕ್ಕೆ ಒಳ್ಳೆಯದನ್ನು ಮಾಡುತ್ತದೆ.

ಭೌತದ್ರವ್ಯವನ್ನು ಪರಿವರ್ತನೆಗೊಳಿಸಲಾಗುವುದು, ಅದು ಗಟ್ಟಿಮುಟ್ಟಾದ ಆಧಾರವಾಗುವುದು. ಜೀವನವನ್ನು ದೈವೀಕರಣಗೊಳಿಸಲಾಗುವುದು. ಭಾರತ ಅದರ ನೇತೃತ್ವ ವಹಿಸಲಿ.

**(13/361–63)** **– ಶ್ರೀಮಾತೆ**

*

## ಸೃಜನಶೀಲ ಚಿಂತನದ ಆವಶ್ಯಕತೆ

ಭಾರತ ಜೀವಂತವಾಗಿ ಉಳಿಯಬೇಕಾದರೆ ಹಾಗೂ ಜಗತ್ತಿನಲ್ಲಿ ಅದಕ್ಕೆ ನಿಯೋಜಿಸಲಾದ ಕಾರ್ಯವನ್ನು ಕೈಕೊಳ್ಳುವಂತಾಗಬೇಕಾದರೆ ಭಾರತದ ತರುಣರು ಚಿಂತನ ಮಾಡುವುದನ್ನು ಕಲಿಯುವುದು ಮೊದಲ ಆವಶ್ಯಕತೆಯಾಗಿದೆ. ಆ ಚಿಂತನ ಎಲ್ಲ ವಸ್ತು–ವಿಷಯಗಳನ್ನು ಕುರಿತಾಗಿರಬೇಕು, ಸ್ವತಂತ್ರವಾಗಿರಬೇಕು, ಫಲಪ್ರದವಾಗಿರಬೇಕು, ವಸ್ತು–ವಿಷಯಗಳ ಹೃದಯವನ್ನು ತಟ್ಟುವಂತಹ–ದಿರಬೇಕು, ಮೇಲ್ಮೈ ನೋಟದಿಂದ ತಡೆಗೊಳಗಾಗಬಾರದು, ಪೂರ್ವ ನಿರ್ಣಯಗಳಿಂದ ಮುಕ್ತವಾಗಿರಬೇಕು, ಚೂಪಾದ ಖಡ್ಗದಿಂದ ಕತ್ತರಿಸಿ ಹಾಕುವ ರೀತಿಯಲ್ಲಿ ಕುತರ್ಕವನ್ನು, ಪೂರ್ವಗ್ರಹವನ್ನು ನಿವಾರಿಸಬೇಕು, ಭೀಮನ ಗದೆಯಿಂದ ಹೊಡೆದು ಹಾಕುವ ರೀತಿಯಲ್ಲಿ ಎಲ್ಲ ಬಗೆಯ ಪ್ರಗತಿವಿರೋಧಿ ಮನೋವೃತ್ತಿಯನ್ನು ತೊಡೆದು ಹಾಕಬೇಕು. ಇನ್ನು ಮುಂದೆ, ಯುರೋಪಿಯನ್ ಶಿಶುಗಳನ್ನು ಹಲವಾರು ಬಟ್ಟೆ ಪಟ್ಟಿಗಳಲ್ಲಿ ಸುತ್ತಿರುವ ರೀತಿಯಲ್ಲಿ, ನಮ್ಮ ಮಿದುಳುಗಳನ್ನು ಕಟ್ಟಿ ಹಾಕಿಡುವುದು ಬೇಡ, ಅವು ದೇವತೆಗಳ ಮುಕ್ತ ಹಾಗೂ ಬಂಧನರಹಿತ ಚಲನೆಯನ್ನು ಪಡೆಯುವಂತಾಗಲಿ. ಅವು ಕೂಲಂಕಷತೆಯನ್ನು ಹಾಗೆಯೇ ಭಾರತಕ್ಕೆ ಸ್ವಾಭಾವಿಕವಾಗಿರುವ ವಿಸ್ತಾರವಾದ ಪ್ರಭುತ್ವ ಮತ್ತು ಸಾರ್ವಭೌಮತ್ವ ಹೊಂದಿರಲಿ, ಮತ್ತು ಭಾರತ ತನ್ನ ಸಾಮರ್ಥ್ಯದ ಭಾವನೆ ತಂದುಕೊಳ್ಳುವುದನ್ನು ಮತ್ತು ತನ್ನ ಯೋಗ್ಯತೆಯ ಬಗ್ಗೆ ಮನವರಿಕೆ ಮಾಡಿಕೊಂಡಿರುವುದನ್ನು ಒಮ್ಮೆ ರೂಢಿಸಿಕೊಂಡ ನಂತರ ಅದನ್ನು ಅದು ಬಹಳ ಸುಲಭವಾಗಿ ಮರಳಿ ಪಡೆಯಬಹುದು. ಬೇಡಿಗಳನ್ನು ಕಳಚಿಕೊಳ್ಳಲು ಅದಕ್ಕೆ ಸಾಧ್ಯವಾಗದೆ ಹೋದರೆ, ಕನಿಷ್ಠಪಕ್ಷ ಬಂಡಿಗೆ ಕಟ್ಟಿಹಾಕಲಾಗಿದ್ದ ಬಾಲಕೃಷ್ಣನ ಹಾಗೆ ಮೇಲೆದ್ದು ಬರಲಿ ಮತ್ತು ಆ ಬಂಡಿಯನ್ನು ಎಳೆದುಕೊಂಡು ಹೋಗುತ್ತ ಮುಂದೆ ಸಾಗಲಿ, ಅದರ ಪ್ರಗತಿಯ ದಾರಿಯಲ್ಲಿ ಮರ ಸದೃಶವಾದ ಎರಡು ಅಡೆತಡೆಗಳನ್ನು ಮುರಿದು ಚೂರು ಚೂರು ಮಾಡಲಿ, ಆ ಎರಡು ಅಡೆತಡೆಗಳೆಂದರೆ ಮಧ್ಯಯುಗದ ಪೂರ್ವಗ್ರಹ ಮತ್ತು ಆಧುನಿಕ ಉದ್ಧಟತನದ ಶಾಸ್ತ್ರಾಂಧತೆಗಳಾಗಿವೆ. ಸ್ಥಿರಗೊಳಿಸಿದ ಹಳೆಯ ಕಾಲದ ತಳಹದಿಗಳನ್ನು ಮುರಿದು ಹಾಕಲಾಗಿದೆ, ನಾವು ಭವ್ಯ ವಿಪ್ಲವ (upheaval) ಮತ್ತು ಬದಲಾವಣೆಗಳ ಜಲದಲ್ಲಿ ಹೊಯ್ದಾಡುತ್ತಿದ್ದೇವೆ. ಗತಕಾಲದ ತೇಲುತ್ತಿರುವ ಹಳೆಯ ನೀರ್ಗಲ್ಲಿನ ಹರವು (ice floe)ಗಳಿಗೆ ಅಂಟಿಕೊಳ್ಳುವುದು ನಿರುಪಯುಕ್ತವಾದದ್ದು, ಅವು ಅಲ್ಪ



ಸಮಯದಲ್ಲಿ ಕರಗಿ ಹೋಗುವವು ಮತ್ತು ತಮ್ಮ ನಿರಾಶ್ರಿತರನ್ನು ಅಪಾಯಕಾರಿ ನೀರಿನಲ್ಲಿ ಹೋರಾಡುವಂತೆ ಬಿಟ್ಟುಕೊಡುತ್ತವೆ. ಹಳತಾದ ಯುರೋಪಿನದನ್ನು ಸ್ವೀಕರಿಸುವ ಪ್ರವೃತ್ತಿಯಿಂದ ಶಿಥಿಲವಾದ ನೆಲದ ಮೇಲಾಗಲಿ ಸಮುದ್ರದಲ್ಲಾಗಲಿ, ಇಲ್ಲವೆ ಒಳ್ಳೆಯದಾದ ಒಣ ಭೂಮಿಯ ಮೇಲಾಗಲಿ ಕಾಲಿಡುವುದು ನಿರುಪಯುಕ್ತವಾದದ್ದು. ಅಲ್ಲಿ ನಾವು ಕೇವಲ ದುಃಖಕರ ಮತ್ತು ಕೊಳಕಾದ ಸಾವನ್ನಪ್ಪುತ್ತೇವೆ. ಇಲ್ಲ, ನಾವು ಈಜಲು ಕಲಿಯಬೇಕು ಮತ್ತು ಆ ಸಾಮರ್ಥ್ಯವನ್ನು ಬದಲಾಗದ ಸತ್ಯವಿರುವ ಹಡಗನ್ನು ತಲುಪಲು ಉಪಯೋಗಿಸಬೇಕು, ನಾವು ಮತ್ತೆ ಯುಗಾಂತರಗಳಲ್ಲಿ ಶಾಶ್ವತವಾಗಿದ್ದ ಬಂಡೆಯ ಮೇಲೆ ಕಾಲಿಡಬೇಕು.

ನಾವು ಗೊತ್ತುಗುರಿಯಿಲ್ಲದೆ ಆಯ್ದುಕೊಳ್ಳುವುದು ಬೇಡ, ನಾಮರಹಿತ ಕಲಸುಮೇಲೋಗರ ಮಾಡಿ ಮತ್ತು ನಂತರ ಜಯಶಾಲಿಯಾದ ರೀತಿಯಲ್ಲಿ ಅದನ್ನು ಪಾಶ್ಚಾತ್ಯ ಹಾಗೂ ಪೌರ್ವಾತ್ಯವಾದುದನ್ನು ಜೀರ್ಣಿಸಿಕೊಂಡಿದ್ದೇವೆ ಎನ್ನುವುದು ಬೇಡ. ನಾವು ಭರವಸೆಯ ಮೇಲೆ ಯಾವುದೇ ಮೂಲದಿಂದ, ಏನನ್ನಾದರೂ ಸ್ವೀಕರಿಸದೆ ಪ್ರಾರಂಭಿಸಬೇಕು, ಪ್ರತಿಯೊಂದನ್ನೂ ಪ್ರಶ್ನಿಸಿ ನಮ್ಮ ತೀರ್ಮಾನಕ್ಕೆ ಬರಬೇಕು. ಆ ವಿಧಾನದಿಂದ ನಾವು ನಮಗಾಗಿಯೇ ಯೋಚನೆ ಮಾಡಿದರೆ ನಾವು ಭಾರತೀಯರಾಗಿರುವುದು ನಿಂತು ಹೋಗಬಹುದು ಇಲ್ಲವೆ ಹಿಂದುತ್ವವನ್ನು ಕೈಬಿಡಬೇಕಾದ ಅಪಾಯಕ್ಕೊಳಗಾಗಬಹುದು ಎಂದು ಭಯಪಡಬಾರದು. ನಮಗಾಗಿ ಯುರೋಪ ಯೋಚನೆ ಮಾಡುವುದಕ್ಕೆ ಅನುವು ಮಾಡಿಕೊಟ್ಟರೆ ಭಾರತ ಕೆಟ್ಟ ಆಡಳಿತಕ್ಕೊಳಗಾಗುವ ಮತ್ತು ಯುರೋಪದ ಮೂರ್ಖತನದ ನಕಲಾಗುವ ಅಪಾಯವಿರುತ್ತದೆ. ಪಕ್ಷಾವಲಂಬಿಗಳಾಗುವುದ–ರೊಂದಿಗೆ ನಾವು ಪ್ರಾರಂಭಿಸಬಾರದು, ಆದರೆ ನಮ್ಮ ಮಾರ್ಗವನ್ನು ಹಿಡಿಯುವುದಕ್ಕಿಂತ ಮೊದಲು ಅದನ್ನು ತಿಳಿದುಕೊಂಡಿರಬೇಕು. ಸೃಜನಶೀಲ ಚಿಂತಕರೆಂದು ನಾವು ಕೈಕೊಳ್ಳಬೇಕಾದುದೆಂದರೆ ಯಾವುದನ್ನೂ ಒಪ್ಪಿಕೊಳ್ಳದೆ ಇರುವುದು, ಪ್ರತಿಯೊಂದನ್ನೂ ಪ್ರಶ್ನಿಸುವುದಾಗಿದೆ. ಅದರರ್ಥ ಪರೀಕ್ಷೆಗೆ ಒಳಪಡಿಸದೆ ಇದ್ದ ಹಳೆಯ ಅಥವಾ ಹೊಸ ಅಭಿಪ್ರಾಯಗಳನ್ನು, ಮನಸ್ಸಿನ ಎಲ್ಲ ಕೇವಲ ರೂಢಿಗತ ಸಂಸ್ಕಾರಗಳನ್ನು ತೊಡೆದು ಹಾಕುವುದಾಗಿದೆ, ಪೂರ್ವ–ಭಾವಿಯಾಗಿ ಕಲ್ಪಿಸಿಕೊಂಡ ತೀರ್ಮಾನಗಳನ್ನು ಹೊಂದದೇ ಇರುವುದಾಗಿದೆ. ಅನಿತ್ಯಃ ಸರ್ವಸಂಸ್ಕಾರಃ ಎಂದು ಬುದ್ಧ ಹೇಳಿದ. ನಾನು ಅದನ್ನು ಪೂರ್ತಿಯಾಗಿ ಒಪ್ಪಿಕೊಳ್ಳಲಾರೆ. ಕೆಲವು ಸಂಸ್ಕಾರಗಳಿವೆ, ಅವು ವಿಷಯಗಳು ಎಷ್ಟರಮಟ್ಟಿಗೆ

ಶಾಶ್ವತವಾಗಿರಬಲ್ಲವೋ ಅಷ್ಟರಮಟ್ಟಿಗೆ ಶಾಶ್ವತವಾಗಿರುತ್ತವೆ. ಸ್ವತಃ ಆತ್ಮವೆಂದರೆ ಏನು? ಶಾಶ್ವತವಾಗಿ, ಮೂಲಭೂತವಾಗಿ ಎಲ್ಲ ವಿಷಯಗಳನ್ನು ನೋಡುವುದಾಗಿರುವುದಿಲ್ಲವೆ? ಎಲ್ಲ ಸತ್ತೆಯ ಅತ್ಯಗತ್ಯತೆ ತನ್ನಲ್ಲಿಯೇ ಅಜ್ಞಾತವಾಗಿದೆ, ನೇತಿ, ನೇತಿ. ಆದ್ದರಿಂದ ನಂತರ ಬಂದ ಬುದ್ಧ ಧರ್ಮದವರು ಆತ್ಮ ಅಸ್ತಿತ್ವದಲ್ಲಿಯೇ ಇಲ್ಲ ಎಂದು ಸಾರಿದರು ಮತ್ತು ಕಟ್ಟಕಡೆಯ ಏನೂ ಇಲ್ಲದಿರುವಿಕೆಯತ್ತ ತಲುಪಿದರು, ಅದು ಶುಷ್ಕ ಹಾಗೂ ಮೂರ್ಖತನದ ತೀರ್ಮಾನ, ಏಕೆಂದರೆ ಏನೂ ಇಲ್ಲದಿರುವಿಕೆಯೇ ಒಂದು ಸಂಸ್ಕಾರ. ಆದಾಗ್ಯೂ ನಮ್ಮ ರೂಢಿಗತ ಕಲ್ಪನೆಗಳಲ್ಲಿ ಹೆಚ್ಚಿನವು ತಾತ್ಕಾಲಿಕವಾದವುಗಳು ಅಷ್ಟೇ ಅಲ್ಲ ಅಪರಿಪೂರ್ಣ ಹಾಗೂ ದಾರಿ ತಪ್ಪಿಸುವಂತಹವೂ ಆಗಿವೆ ಎಂಬುದು ನಿಶ್ಚಿತ. ನಾವು ಈ ಅಪರಿಪೂರ್ಣತೆಗಳಿಂದ ತಪ್ಪಿಸಿಕೊಳ್ಳಬೇಕು ಮತ್ತು ಸತ್ಯ ಹಾಗೂ ತಾಳಿಕೊಳ್ಳುವಂತಹಗಳನ್ನು ಕುರಿತು ನಮ್ಮ ನಿಲುವನ್ನು ತಾಳಬೇಕು. ಆದರೆ ನಮ್ಮ ಕಲ್ಪನೆಗಳಲ್ಲಿ ಸತ್ಯವಾದವುಗಳು ಹಾಗೂ ತಾಳಿಕೊಳ್ಳುವಂತಹಗಳನ್ನು ಕಂಡು–ಕೊಳ್ಳುವುದಕ್ಕೆ ನಾವು ಎಲ್ಲವನ್ನೂ ಒಂದೇ ರೀತಿಯಲ್ಲಿ ಕಟ್ಟುನಿಟ್ಟಾಗಿ ಹಾಗೂ ಪಕ್ಷಪಾತವಿಲ್ಲದೆ ಪ್ರಶ್ನಿಸಬೇಕು.

**(12/40–41)** **– ಶ್ರೀ ಅರವಿಂದರು**

*

## ಭದ್ರವಾದ ತಳಹದಿಯನ್ನು ನಿರ್ಮಾಣ ಮಾಡುವುದು

ಪ್ರಾಚೀನಕಾಲದ ಆರ್ಯರು ಮನುಷ್ಯ ವಿಶ್ವದಿಂದ ಭಿನ್ನನಾಗಿಲ್ಲ, ಆದರೆ ತರಂಗ ಸಮುದ್ರದ ಒಂದು ಭಾಗವಿದ್ದಂತೆ ಅವನು ವಿಶ್ವದೊಡನೆ ಸಾಮರಸ್ಯ–ದಿಂದಿರುವ ಒಂದು ಭಾಗ ಎಂದು ತಿಳಿದಿದ್ದರು. ಅನಂತ ಚೈತನ್ಯ, ಪ್ರಕೃತಿ, ಮಾಯಾ, ಇಲ್ಲವೆ ಶಕ್ತಿ ಜಗತ್ತನ್ನು ಸುತ್ತುವರಿದಿದೆ, ಪ್ರತಿಯೊಂದು ನಾಮ, ರೂಪಗಳಲ್ಲಿ ತನ್ನನ್ನು ಸುರಿಯುತ್ತದೆ, ಮತ್ತು ಹೆಂಟೆ, ಸಸಿ, ಕ್ರಿಮಿ, ಪಶು, ಮನುಷ್ಯ ಇವರೆಲ್ಲರು ತಮ್ಮ ಗೋಚರ ಅಸ್ತಿತ್ವದಲ್ಲಿ ಕೇವಲ ಹೆಚ್ಚುಕಡಿಮೆ ಈ ಚೈತನ್ಯದ ಪರಿಣಾಮಕಾರಿ ಆಧಾರಗಳು. ನಮ್ಮಲ್ಲಿ ಪ್ರತಿಯೊಬ್ಬನು ಒಂದು ವಿದ್ಯುಜ್ಜನಕ (dynamo)ನಾಗಿದ್ದಾನೆ, ಅದರಲ್ಲಿ ಆ ಚೈತನ್ಯದ ತರಂಗಗಳನ್ನು ಉತ್ಪಾದಿಸ–ಲಾಗುತ್ತದೆ, ಸಂಗ್ರಹಿಸಿ ಇಡಲಾಗುತ್ತದೆ, ಮತ್ತು ನಿರಂತರವಾಗಿ ರಕ್ಷಿಸಲಾಗುತ್ತದೆ, ಉಪಯೋಗಿಸಲಾಗುತ್ತದೆ ಮತ್ತು ಪುನಃ ಭರ್ತಿ ಮಾಡಲಾಗುತ್ತದೆ, ನಕ್ಷತ್ರ, ಗ್ರಹಗಳಲ್ಲಿ ಚಲಿಸುವ ಶಕ್ತಿಯೇ ನಮ್ಮಲ್ಲಿ ಚಲಿಸುತ್ತದೆ, ನಮ್ಮ ಎಲ್ಲ ಯೋಚನೆ ಮತ್ತು



ಕ್ರಿಯೆಗಳು ಕೇವಲ ಅದರ ಲೀಲೆ ಮತ್ತು ಅದರ ಕಾರ್ಯ ನಿರ್ವಹಣೆಗಳ ಸಂಕೀರ್ಣತೆಯಿಂದ ಜನಿಸುತ್ತವೆ. ಮನುಷ್ಯ ತನ್ನ ಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ಆಧಾರವೆಂದಾಗಿ ವಿಧಾನಗಳಿವೆ. ಇನ್ನಿತರ ವಿಧಾನಗಳಿವೆ, ಅವುಗಳ ಮೂಲಕ ತನ್ನ ಮತ್ತು ವಿಶ್ವಂಭರ ಚೈತನ್ಯಗಳ ನಡುವಿರುವ ಅಡೆತಡೆಗಳನ್ನು ತೊಡೆದು ಹಾಕಬಲ್ಲನು ಮತ್ತು ಅದರ ಹೆಚ್ಚು ಹೆಚ್ಚಾದ ಸಂಗ್ರಹವನ್ನು ತನ್ನ ಆತ್ಮ, ಮಿದುಳು ಹಾಗೂ ದೇಹಗಳಲ್ಲಿ ತರಬಲ್ಲನು. ಮುಂದುವರಿದುಕೊಂಡು ಹೋಗುವ ಆಧಾರದ ಸುಧಾರಣೆ, ಕ್ರಿಯೆಯ ಗಾತ್ರ ಹಾಗೂ ಸಂಕೀರ್ಣತೆಗಳಲ್ಲಿ ಮಾಹಿತಿ ನೀಡುವ ಶಕ್ತಿಯ ಹೆಚ್ಚಳ ಇದೆಲ್ಲ ಉತ್ಕ್ರಾಂತಿಯ ಇಡೀ ಗುರಿಯಾಗಿದೆ. ಆ ಚೈತನ್ಯ ಅದರ ಬಗೆಯಲ್ಲಿ ಅತ್ಯುಚ್ಚವಾದದ್ದು ಆದಾಗ ಮತ್ತು ಮೊತ್ತದಲ್ಲಿ ಮನುಷ್ಯ ಆಧಾರದ ಕ್ಷಮತೆಗನುಸಾರವಾಗಿ ಅತ್ಯಂತ ಪೂರ್ತಿಯಾಗಿದ್ದಾಗ ಅವನು ಸಿದ್ಧಪುರುಷನಾಗಿರುತ್ತಾನೆ, ನೆರವೇರಿಕೆ ಕಂಡುಕೊಂಡವನು, ಪರಿಪೂರ್ಣ–ನಾದವನು ಆಗಿರುತ್ತಾನೆ, ಅವನ ಉತ್ಕ್ರಾಂತಿ ಕೊನೆಗೊಂಡಿರುತ್ತದೆ, ಅವನು ವ್ಯಕ್ತಿಯಲ್ಲಿ ಮನುಕುಲ ಹಲವಾರು ಯುಗಗಳ ಕಾಲದಿಂದ ಯಾವ ಪರಮಾವಧಿ ಅಭಿವೃದ್ಧಿಗಾಗಿ ಶ್ರಮಿಸುತ್ತ ಬಂದಿರುವುದೋ ಅದನ್ನು ಅವನು ಪೂರ್ತಿ–ಗೊಳಿಸಿರುತ್ತಾನೆ.

ಈ ಸಿದ್ಧಾಂತ ಸರಿಯಾಗಿದ್ದರೆ ಬುದ್ಧಿಮತ್ತೆಯ ಕಾರ್ಯಾಚರಣೆಗೆ ಚೈತನ್ಯದ ಆಧಾರ ನಮ್ಮೊಳಗೆ ಇರಬೇಕು ಮತ್ತು ಅದು ಶ್ರೇಷ್ಠತರವಾಗಿ ವಿಸ್ತಾರಗೊಳ್ಳುವ ಮತ್ತು ಪ್ರಾಯೋಗಿಕವಾಗಿ ಸೀಮಾರಹಿತ, ಶ್ರೀಮಂತ ಉಪಯೋಗಕ್ಕೆ ಬರುವ ಕ್ಷಮತೆ ಹೊಂದಿರಬೇಕು. ಮತ್ತು ಇದು ಕೂಡ ದೃಢವಾದ ತತ್ವವಾಗಿರಬೇಕು. ನಾವು ಹೆಚ್ಚು ಹೆಚ್ಚಾಗಿ ಆ ಚೈತನ್ಯವನ್ನು ಹೆಚ್ಚಿಸಿದಾಗ, ಶ್ರೀಮಂತಗೊಳಿಸಿದಾಗ ಸಂಭಾವ್ಯತೆಯ ವ್ಯಾಪ್ತಿ, ಮನಸ್ಸಿನ ಕಾರ್ಯ ವಿಧಾನದ ಸಾಮರ್ಥ್ಯ ಮತ್ತು ಚಟುವಟಿಕೆಗಳು ಮತ್ತು ಪರಿಣಾಮವಾಗಿ ನಮ್ಮ ಬುದ್ಧಿಗ್ರಾಹ್ಯತೆ (intellectuality) ಮತ್ತು ನಮ್ಮ ಸಿದ್ಧಿಯ ಹಿರಿಮೆ ಇವೆಲ್ಲ ಇನ್ನೂ ಶ್ರೇಷ್ಠತರವಾಗುವವು. ಇದನ್ನೇ ಪ್ರಾಚೀನಕಾಲದ ಆರ್ಯರು ತಮ್ಮ ಶಿಕ್ಷಣಕ್ಕೆ ಆಧಾರವಾದ ಮೊದಲ ತತ್ವವನ್ನಾಗಿ ಮಾಡಿಕೊಂಡಿದ್ದರು. ಚೈತನ್ಯವನ್ನು ಹೆಚ್ಚಿನ ರೀತಿಯಲ್ಲಿ ಸಂಗ್ರಹಿಸುವ ಮುಖ್ಯ ವಿಧಾನಗಳಲ್ಲಿ ಬ್ರಹ್ಮಚರ್ಯದ ಪಾಲನೆಯೂ ಒಂದಾಗಿತ್ತು.

**(1/370–41)** **– ಶ್ರೀ ಅರವಿಂದರು**

*

## ಸಮಗ್ರ ಅಭಿವೃದ್ಧಿಯ ಆವಶ್ಯಕತೆ

ಮಾನವ ಯೋಚನೆಯ ಚಟುವಟಿಕೆ ವಿಶಾಲವಾದ ತನ್ನ ರೀತಿಯಲ್ಲಿ ಎರಡು ಗುಂಪುಗಳಾಗಿ ವಿಭಜನೆಗೊಂಡಿದೆ. ಬಲಗೈಯವಾದ ಕೆಲವು ಎಂದರೆ ಚಿಂತನ, ಸೃಜನ, ಕಲ್ಪನೆ, ಸತ್ಯವನ್ನು ನೋಡುವ ಕೇಂದ್ರಗಳು ಇವೆಲ್ಲ ಇವೆ, ಎಡಗೈಯವಾದ ಕೆಲವು ಎಂದರೆ ವಿಮರ್ಶೆ, ತರ್ಕ, ಭೇದಮಾಡಿ ನೋಡುವುದು, ವಿಚಾರಣೆ, ಸತ್ಯವನ್ನು ನೋಡಿದಾಗ ಅದನ್ನು ತೀರ್ಮಾನಕ್ಕೊಳಪಡಿಸುವ ಕೇಂದ್ರಗಳು ಇವೆಲ್ಲ ಇವೆ. ಶಿಕ್ಷಣದಲ್ಲಿ ಎಡಗೈಯವಾದವುಗಳನ್ನು ವೈಜ್ಞಾನಿಕ ಹಾಗೂ ಕೈಯಿಂದ ಕೆಲಸ ಮಾಡಿಸುವ ತರಬೇತಿನ ಮೂಲಕ ಪೋಷಿಸಿಕೊಂಡು ಬರಲಾಗುತ್ತದೆ, ಆದರೆ ಇದು ಪೋಷಿಸುವ ಬಲಗೈಯದಾದ ಒಂದೇ ಗುಣವೆಂದರೆ ಅವಲೋಕನ ಮಾಡುವುದಾಗಿದೆ. ಈ ಕಾರಣದಿಂದಾಗಿ ಕೇವಲ ವೈಜ್ಞಾನಿಕ ಶಿಕ್ಷಣ, ಕೆಲವೊಂದು ಸೀಮಿತತೆಗಳಿಗೆ ಒಳಗಾಗಿ, ತೀಕ್ಷ್ಣ ಹಾಗೂ ಸ್ಪಷ್ಟ ದೃಷ್ಟಿಯುಳ್ಳದ್ದನ್ನಾಗಿ ಮಾಡುವ ಪ್ರವೃತ್ತಿ ಹೊಂದಿರುತ್ತದೆ. ಆದರೆ ಅದು ಸಂಕುಚಿತವಾದದ್ದು, ಕಟ್ಟುನಿಟ್ಟಿನದು ಮತ್ತು ಭಾವಶೂನ್ಯವಾದದ್ದು ಆಗಿರುತ್ತದೆ. ಮನುಷ್ಯ ತನ್ನದೇ ವಲಯದಲ್ಲಿ ಬಲಗೈಯದಾದುರ ತರಬೇತು ಪಡೆಯದೆ ನೆಲೆಗೊಂಡ, ರೂಢಿಗತವಾದ ಕೆಲಸ ಕಾರ್ಯಗಳಲ್ಲಿ ಪ್ರಗತಿ ಸಾಧಿಸಬಲ್ಲ, ಆದರೆ ಮಾನವ ಸಂಸ್ಕೃತಿಯ ಆಧಾರವನ್ನು ವಿಸ್ತರಿಸಲಾರನು, ಇಲ್ಲವೆ ವಿಜ್ಞಾನದ ಮೇರೆಗಳನ್ನು ಭವ್ಯವಾಗಿರಿಸಲಾರನು.

ಏಕೆಂದರೆ ವೈಜ್ಞಾನಿಕ ಜ್ಞಾನದಲ್ಲಿ ಬಲಿಷ್ಠನಾದ, ಒರಟಾದ ಹಾಗೂ ಸೂಕ್ಷ್ಮ ಪ್ರಕೃತಿಯ ಮೇಲೆ ಪ್ರಭಾವವುಳ್ಳ, ಅದರ ಅಂಶಗಳನ್ನು ಹಾಗೂ ಜಗತ್ತನ್ನು ತನ್ನ ಸೇವಕರನ್ನಾಗಿ ಮಾಡಿಕೊಂಡು ಉಪಯೋಗಿಸುವ, ಆದರೆ ಹೃದಯ ಮತ್ತು ಆತ್ಮಗಳಲ್ಲಿ ಅಭಿವೃದ್ಧಿ ಹೊಂದಿರದ, ಬೌದ್ಧಿಕವಾಗಿ ಅಭಿವೃದ್ಧಿ ಹೊಂದಿದ ಮನುಷ್ಯ ಕೇವಲ ಕೀಳುಮಟ್ಟದ ಅಸುರನಾಗಿರುತ್ತಾನೆ, ಅವನು ಅರ್ಧದೇವತೆಯ ಸಾಮರ್ಥ್ಯಗಳನ್ನು ತನ್ನ ಪಶುತ್ವದ ಸ್ವಭಾವಕ್ಕೆ ತೃಪ್ತಿತಂದುಕೊಡಲು ಉಪಯೋಗಿಸುತ್ತಾನೆ.

**(1/438–39)** **– ಶ್ರೀ ಅರವಿಂದರು**

*

## ಮನುಷ್ಯರ ನಿರ್ಮಾಣ, ಯಂತ್ರಗಳದಲ್ಲ

ರಾಷ್ಟ್ರೀಯ ಶಿಕ್ಷಣ ಕುರಿತು ಒಂದೆರಡು ವಾಕ್ಯಗಳಲ್ಲಿ ವ್ಯಾಖ್ಯೆ ಕೊಡಲಾಗದು, ಆದರೆ ಗತಕಾಲದಿಂದ ಪ್ರಾರಂಭ ಮಾಡಿ ವರ್ತಮಾನ ಕಾಲವನ್ನು ಪೂರ್ತಿ



ಉಪಯೋಗ ಮಾಡಿಕೊಂಡು ಶ್ರೇಷ್ಠ ರಾಷ್ಟ್ರ ನಿರ್ಮಾಣ ಮಾಡುವ ಶಿಕ್ಷಣ ಎಂದು ಅದನ್ನು ತಾತ್ಕಾಲಿಕವಾಗಿ ವರ್ಣಿಸಬಹುದು. ರಾಷ್ಟ್ರ ಗತಕಾಲದಿಂದ ವಿಚ್ಛೇದನ–ಗೊಳ್ಳುವಂತೆ ಮಾಡಲು ಬಯಸುವವನು ನಮ್ಮ ರಾಷ್ಟ್ರದ ಅಭಿವೃದ್ಧಿಯ ಮಿತ್ರನಾಗಿರುವುದಿಲ್ಲ, ವರ್ತಮಾನ ಕಾಲದ ಪ್ರಯೋಜನವನ್ನು ಪಡೆಯುವುದರಲ್ಲಿ ವಿಫಲನಾದವನು ಜೀವನದ ಸಮರದಲ್ಲಿ ನಮಗೆ ಸೋಲನ್ನುಂಟು ಮಾಡುತ್ತಾನೆ. ಆದ್ದರಿಂದ ನಾವು ಭಾರತಕ್ಕಾಗಿ, ಅದು ಅನಾದಿಕಾಲದಿಂದ ಜ್ಞಾನ, ಚಾರಿತ್ರ್ಯ ಹಾಗೂ ಉದಾರ ಚಿಂತನ ಇವೆಲ್ಲವುಗಳಲ್ಲಿ ಸಂಗ್ರಹಿಸಿಟ್ಟದ್ದನ್ನು ರಕ್ಷಣೆ ಮಾಡಬೇಕು. ಯುರೋಪ ಕೊಡಬಹುದಾದ ಅತ್ಯಂತ ಶ್ರೇಷ್ಠ ಜ್ಞಾನವನ್ನು ನಾವು ಭಾರತಕ್ಕಾಗಿ ದೊರಕಿಸಬೇಕು, ಅದು ಆಧುನಿಕವಾಗಿರಲಿ ಇಲ್ಲವೆ ಪ್ರಾಚೀನ ಕಾಲದ್ದಾಗಿರಲಿ, ಅದನ್ನು ಭಾರತ ಅದರದೇ ವಿಶಿಷ್ಟ ಮನೋಧರ್ಮಕ್ಕೆ ಹೊಂದುವಂತೆ ಜೀರ್ಣಿಸಿ–ಕೊಳ್ಳಬೇಕು. ಇವೆಲ್ಲವನ್ನೂ ನಾವು ಒಂದು ಪದ್ಧತಿಯಲ್ಲಿ ಸಾಮರಸ್ಯಕ್ಕೊಳ–ಪಡಿಸಬೇಕು, ಆ ಪದ್ಧತಿ ಸ್ವಾವಲಂಬನೆಯ ಮನೋಧರ್ಮದಿಂದ ಗರ್ಭಿತ–ವಾಗಿರುತ್ತದೆ, ಅದರಿಂದಾಗಿ ಮನುಷ್ಯರ ನಿರ್ಮಾಣವಾಗುತ್ತದೆ, ಯಂತ್ರಗಳದಲ್ಲ.

**(7/895)** **– ಶ್ರೀ ಅರವಿಂದರು**

*

## ನೈತಿಕ ಮತ್ತು ಮೌಲಿಕ ಶಿಕ್ಷಣಕ್ಕೆ ಸರಿಯಾದ ರೀತಿ (1910)

ಮಕ್ಕಳಿಗೆ ನೈತಿಕ ಹಾಗೂ ಧಾರ್ಮಿಕ ಪಠ್ಯಪುಸ್ತಕಗಳ ಮೂಲಕ ಅವರನ್ನು ನೈತಿಕರಾದವರನ್ನಾಗಿ, ಧಾರ್ಮಿಕರಾದವರನ್ನಾಗಿ ಮಾಡಲು ಪ್ರಯತ್ನಿಸುವುದು ಜಂಬದ್ದು ಹಾಗೂ ಭ್ರಮೆಗೊಳಪಡಿಸುವಂತಹದು, ನಿಖರವಾಗಿ ಏಕೆಂದರೆ ಹೃದಯ ಮನಸ್ಸಲ್ಲ, ಮನಸ್ಸಿಗೆ ಬೋಧನೆ ನೀಡುವುದರಿಂದ ಹೃದಯ ಸುಧಾರಿ–ಸುವುದಿಲ್ಲ. ಅದಕ್ಕೆ ಯಾವ ಪರಿಣಾಮವೂ ಇಲ್ಲವೆಂದು ಹೇಳುವುದು ತಪ್ಪಾಗುತ್ತದೆ. ಅದು ಯೋಚನೆಯ ಕೆಲವೊಂದು ಬೀಜಗಳನ್ನು ಅಂತಃಕರಣದಲ್ಲಿ ಬಿತ್ತುತ್ತದೆ ಮತ್ತು ಈ ಯೋಚನೆಗಳು ರೂಢಿಗತವಾದಾಗ ನಡತೆಯ ಮೇಲೆ ಪ್ರಭಾವ ಬೀರುತ್ತವೆ. ಆದರೆ ನೈತಿಕತೆಯನ್ನು ಬೋಧಿಸುವ ಪಠ್ಯಪುಸ್ತಕಗಳಿಂದ ಅಪಾಯ–ವೆಂದರೆ ಅವು ಉಚ್ಚಮಟ್ಟದ ವಿಷಯಗಳನ್ನು ಕುರಿತಾದ ಯೋಚನೆ ಯಾಂತ್ರಿಕ ಹಾಗೂ ಕೃತ್ರಿಮವಾಗುವಂತೆ ಮಾಡುತ್ತವೆ, ಮತ್ತು ಯಾವುದು ಯಾಂತ್ರಿಕ ಹಾಗೂ ಕೃತ್ರಿಮವಾಗಿರುವುದೋ ಅದು ಒಳ್ಳೆಯದನ್ನು ಮಾಡುವುದಕ್ಕೆ ಕಾರ್ಯಾ–ಚರಣೆಯಲ್ಲಿ ಬರುವುದಿಲ್ಲ.

ಮಕ್ಕಳ ಮೇಲೆ ನೀವು ಒಂದು ಬಗೆಯ ಶಿಸ್ತುಪಾಲನೆಯನ್ನು ಹೇರಬಹುದು, ಒಂದು ವಿಶಿಷ್ಟ ರೀತಿಯ ಉಡುಪನ್ನು ಅವರು ಧರಿಸುವಂತೆ ಮಾಡಬಹುದು, ಬಯಸಿದ ಮಾರ್ಗದಲ್ಲಿ ಅವರು ಸಾಗುವಂತೆ ಮಾತಿನ ಚಾವಟಿ ಬೀಸಬಹುದು, ಆದರೆ ಅವರ ಹೃದಯಗಳು, ಸ್ವಭಾವಗಳು ನಿಮ್ಮೊಂದಿಗೆ ಬರುವಂತೆ ಮಾಡ–ಲಾಗದಿದ್ದರೆ, ಅವರ ಮೇಲೆ ಹೇರಲಾದ ನಿಯಮಕ್ಕೆ ಅನುಸರಣೆ ಕಪಟತನದ್ದು, ಹೃದಯಶೂನ್ಯ ಹಾಗೂ ರೂಢಿಗತವಾದದ್ದು, ಬಹಳಷ್ಟು ಸಲ ಅಂಜಿಕೆಯಿಂದ ಅನುಸರಿಸಿದ್ದಾಗಿರುತ್ತದೆ.

ನೈತಿಕ ತರಬೇತಿಗಾಗಿ ಮೊದಲ ನಿಯಮವೆಂದರೆ ಆಜ್ಞೆ ಮಾಡುವುದರ ಬದಲಾಗಿ, ನಿಯಮವನ್ನು ಹೇರುವುದರ ಬದಲಾಗಿ ಸೂಚನೆ ಕೊಡುವುದು ಇಲ್ಲವೆ ಕರೆ ಕೊಡುವುದಾಗಿದೆ. ಸೂಚನೆ ನೀಡುವ ಅತ್ಯಂತ ಒಳ್ಳೆಯ ವಿಧಾನವೆಂದರೆ ವ್ಯಕ್ತಿಗತವಾಗಿ ಉದಾಹರಣೆಯಾಗುವುದಾಗಿದೆ, ದಿನ ನಿತ್ಯ ಮಾತುಕತೆ ನಡೆಸುವು–ದಾಗಿದೆ, ಪುಸ್ತಕಗಳನ್ನು ಓದಿ ಹೇಳುವುದಾಗಿದೆ. ಚಿಕ್ಕವರಿಗಾಗಿ ಈ ಪುಸ್ತಕಗಳಲ್ಲಿ ಗತಕಾಲದ ಅತ್ಯುಚ್ಚ ಉದಾಹರಣೆಗಳಿರಬೇಕು, ಅವು ನೀತಿ ಪಾಠಗಳಂತಿರ–ಬಾರದು, ಆದರೆ ಮನುಷ್ಯನಲ್ಲಿ ಪರಮೋಚ್ಚ ಅಭಿರುಚಿಯನ್ನುಂಟು ಮಾಡು–ವಂತಿರಬೇಕು. ತರುಣ ವಿದ್ಯಾರ್ಥಿಗಳಿಗಾಗಿ ಅತ್ಯುಚ್ಚ ಭಾವನೆಗಳನ್ನು ಉದ್ದೀಪನ–ಗೊಳಿಸುವ ಆದರ್ಶಗಳನ್ನು, ಅಭೀಪ್ಸೆಗಳನ್ನು ಪ್ರಚೋದಿಸುವ ಶ್ರೇಷ್ಠ ಆತ್ಮಗಳ ಶ್ರೇಷ್ಠ ವಿಚಾರಗಳು ಹಾಗೂ ಸಾಹಿತ್ಯದಲ್ಲಿಯ ಪರಿಚ್ಛೇದಗಳು ಇರಬೇಕು, ಆ ಶ್ರೇಷ್ಠ ಯೋಚನೆಗಳು, ಉದಾತ್ತ ಭಾವನೆಗಳು, ಅಭೀಪ್ಸೆ ಪಡುತ್ತಿದ್ದ ಆದರ್ಶಗಳು ಇವುಗಳ ಉದಾಹರಣೆ ನೀಡುವ ಇತಿಹಾಸ ಹಾಗೂ ಜೀವನ ಚರಿತ್ರೆಗಳು ಅವರ ಪುಸ್ತಕದಲ್ಲಿರಬೇಕು. ಇದು ಒಂದು ಬಗೆಯ ಸಹವಾಸ ಅಥವಾ ಸತ್ಸಂಗ, ಆಡಂಬರದ ಪಾಂಡಿತ್ಯ ಪ್ರದರ್ಶನವಿಲ್ಲದೆ ಹೋದಾಗ ಅದು ಪರಿಣಾಮ ಬೀರದೆ ಇರುವುದು ಅಪರೂಪಕ್ಕೆ ಕಂಡುಬರುತ್ತದೆ ಮತ್ತು ವಿದ್ಯಾರ್ಥಿಗಳ ಮುಂದೆ ಶ್ರೇಷ್ಠ ವಿಚಾರಗಳನ್ನು ಮಂಡಿಸುವ ಶಿಕ್ಷಕನ ಜೀವನವೇ ಸ್ವತಃ ಆ ಶ್ರೇಷ್ಠ ವಿಚಾರಗಳಿಂದ ರೂಪಗೊಂಡಿದ್ದರೆ, ಅದು ಅತ್ಯುಚ್ಚ ಪರಿಣಾಮ ಬೀರುವಂತಹದಾಗುತ್ತದೆ. ಆದಾಗ್ಯೂ ತರುಣರ ಜೀವನದ ಸೀಮಿತ ವಲಯದಲ್ಲಿ ಎದ್ದುಬರುವ ನೈತಿಕ ಪ್ರಚೋದನೆಗಳನ್ನು ಕ್ರಿಯೆಯಲ್ಲಿ ಮೈವೆತ್ತುವ ಅವಕಾಶ ದೊರೆಯದೆ ಹೋದರೆ ಸತ್ಸಂಗದ ಪೂರ್ಣ ಶಕ್ತಿ ಬರಲಾರದು.

**(1/389–91)** **– ಶ್ರೀ ಅರವಿಂದರು**

*



## ಭಾರತ ಮತ್ತು ಸ್ತ್ರೀಯರ ಸಮಸ್ಯೆ

ಪುರುಷ ತಾನು ಶ್ರೇಷ್ಠನೆಂದು ಭಾವಿಸಿ ಪ್ರಾಬಲ್ಯ ಮೆರೆಸಬೇಕೆನ್ನುತ್ತಾನೆ, ಸ್ತ್ರೀ ತಾನು ದಬ್ಬಾಳಿಕೆಗೆ ಒಳಗಾಗಿದ್ದೇನೆ ಎಂದು ಭಾವಿಸಿ, ಬಹಿರಂಗವಾಗಿ ಇಲ್ಲವೆ ರಹಸ್ಯವಾಗಿ ಬಂಡಾಯವೇಳುತ್ತಾಳೆ. ಮತ್ತು ಲಿಂಗಗಳ ನಡುವಿರುವ ಈ ಜಗಳ ಎಲ್ಲ ಯುಗಗಳಲ್ಲಿ ನಿರಂತರವಾಗಿ ನಡೆದುಕೊಂಡು ಬಂದಿದೆ, ಸಾರದಲ್ಲಿ ಅದು ಒಂದೇ ಆಗಿದ್ದರೂ ರೂಪಗಳಲ್ಲಿ ಹಾಗೂ ಅಬ್ಬರಗಳಲ್ಲಿ ಅನೇಕ ರೀತಿಯದಾಗಿದೆ.

ಸಹಜವಾಗಿ ಪುರುಷ ಎಲ್ಲ ದೂಷಣೆಯನ್ನು ಸ್ತ್ರೀಯ ಮೇಲೆ ಹೊರಿಸುತ್ತಾನೆ, ಹಾಗೆಯೇ ಸ್ತ್ರೀ ಇಡಿಯಾಗಿ ಅವನನ್ನು ದೂಷಣೆಗೆ ಒಳಪಡಿಸುತ್ತಾಳೆ. ಸತ್ಯ ಹೇಳುವುದಾದರೆ ದೂಷಣೆಯನ್ನು ಅವರಿಬ್ಬರಲ್ಲೂ ಸಮನಾಗಿ ಹಂಚಬೇಕು. ಯಾರೂ ಒಬ್ಬರಿಗಿಂತ ಇನ್ನೊಬ್ಬರು ಮೇಲ್ಮಟ್ಟದವರೆಂದು ಜಂಬ ಕೊಚ್ಚಿ–ಕೊಳ್ಳಲಾರರು. ಅಲ್ಲದೆ ಮೇಲ್ಮಟ್ಟ ಮತ್ತು ಕೀಳ್ಮಟ್ಟ ಇವುಗಳ ವಿಚಾರವನ್ನು ತೆಗೆದುಹಾಕುವ ವರೆಗೆ ಯಾವುದೂ ಮತ್ತು ಯಾರೂ ಈ ತಪ್ಪು ತಿಳಿವಳಿಕೆಯನ್ನು ಕೊನೆಗೊಳಿಸಲಾರರು. ಈ ತಪ್ಪು ತಿಳಿವಳಿಕೆ ಮಾನವ ವರ್ಗವನ್ನು ಎರಡು ವಿರುದ್ಧ ಪಾಳೆಯಗಳಲ್ಲಿ ವಿಭಜಿಸುತ್ತದೆ ಮತ್ತು ಸಮಸ್ಯೆಯನ್ನು ಬಗೆಹರಿಸಲಾಗುವುದಿಲ್ಲ.

... ಅವರ ಪರಸ್ಪರ ಸಂಬಂಧದಲ್ಲಿ ಪುರುಷ ಹಾಗೂ ಸ್ತ್ರೀ ಹೆಚ್ಚಾಗಿ ಒಮ್ಮೆಗೆ ಪೀಡಕ ಮನೋವೃತ್ತಿಯ ಯಜಮಾನರು ಮತ್ತು ಒಬ್ಬರು ಇನ್ನೊಬ್ಬರಿಗೆ ಕರುಣಾಜನಕ ರೀತಿಯಲ್ಲಿ ಗುಲಾಮರಾಗಿರುತ್ತಾರೆ.

ಹೌದು, ಗುಲಾಮರು, ಏಕೆಂದರೆ ಮನುಷ್ಯನಲ್ಲಿ ಆಸೆಗಳು, ಆದ್ಯತೆಗಳು, ಮತ್ತು ಆಸಕ್ತಿಗಳು ಇರುವವರೆಗೆ ಅವನು ಅವುಗಳ ಹಾಗೂ ಅವುಗಳ ತೃಪ್ತಿಗಾಗಿ ಯಾರ ಮೇಲೆ ಅವಲಂಬಿಸಬೇಕಾಗುತ್ತದೆಯೋ ಅಂತಹರ ಗುಲಾಮನಾಗ–ಬೇಕಾಗುತ್ತದೆ.

ಹಾಗೆಯೇ ಸ್ತ್ರೀ ಪುರುಷನಿಗೆ ಗುಲಾಮಳಾಗಿರುತ್ತಾಳೆ, ಏಕೆಂದರೆ ಗಂಡಸು ಮತ್ತು ಅವನ ಬಲ ಇವುಗಳತ್ತ ಆಕೆ ಆಕರ್ಷಿತಳಾಗಿರುತ್ತಾಳೆ, ಮನೆ ಹಾಗೂ ಅದು ತಂದುಕೊಡುವ ರಕ್ಷಣೆ ಅವಳಿಗೆ ಬೇಕಾಗಿರುತ್ತವೆ, ಕೊನೆಯದಾಗಿ ಮಾತೃತ್ವಕ್ಕಾಗಿ ಅವಳಲ್ಲಿ ಅಪೇಕ್ಷೆಯಿರುತ್ತದೆ. ಪುರುಷ ಕೂಡ ಅವನ ಬದಿಯಿಂದ ಸ್ತ್ರೀಗೆ ಗುಲಾಮನಾಗಿರುತ್ತಾನೆ, ಏಕೆಂದರೆ ಅವನಲ್ಲಿ ವಶದಲ್ಲಿರಿಸಿಕೊಳ್ಳುವ ಅಪೇಕ್ಷೆ ಇರುತ್ತದೆ, ಅಧಿಕಾರ ಪ್ರಾಬಲ್ಯಗಳಿಗಾಗಿ ಬಯಕೆಯಿರುತ್ತದೆ, ಲೈಂಗಿಕ ಸಂಬಂಧದ

ಆಸೆಯಿರುತ್ತದೆ ಮತ್ತು ವೈವಾಹಿಕ ಜೀವನದ ಚಿಕ್ಕಪುಟ್ಟ ಸೌಲಭ್ಯಗಳಿಗೆ ಹಾಗೂ ಅನುಕೂಲತೆಗಳಿಗೆ ಅವನು ಅಂಟಿಕೊಂಡಿರುತ್ತಾನೆ.

ಆ ಕಾರಣದಿಂದಾಗಿಯೆ, ಯಾವುದೇ ಕಾಯಿದೆ ಕಾನೂನು ಸ್ತ್ರೀಯರನ್ನು ಮುಕ್ತಗೊಳಿಸಲಾರದು, ಅವರು ತಮ್ಮನ್ನು ತಾವೇ ಮುಕ್ತಗೊಳಿಸಿಕೊಳ್ಳಬೇಕು. ಅದೇ ರೀತಿಯಲ್ಲಿ ಪುರುಷರೂ ಕೂಡ ತಮ್ಮಲ್ಲಿ ಪ್ರಾಬಲ್ಯ ಮೆರೆಸುವ ಎಲ್ಲ ರೂಢಿಗಳಿದ್ದಾಗ್ಯೂ ಅವರು ತಮ್ಮ ಆಂತರಿಕ ಗುಲಾಮಗಿರಿಯಿಂದ ತಮ್ಮನ್ನು ಮುಕ್ತಗೊಳಿಸಿಕೊಂಡಾಗ ಮಾತ್ರ ಗುಲಾಮರಾಗುವುದು ನಿಂತು ಹೋಗುವುದು.

ತಮ್ಮ ಅತ್ಯಂತ ಒಳ್ಳೆಯ ಕ್ಷಣಗಳಲ್ಲಿ ಪುರುಷ ಹಾಗೂ ಸ್ತ್ರೀ ತಮ್ಮ ನಡುವಿರುವ ಲೈಂಗಿಕ ವ್ಯತ್ಯಾಸವನ್ನು ಮರೆಯಬಲ್ಲರು, ಆದರೆ ಅತಿ ಸ್ವಲ್ಪ ಕಿರಿಕಿರಿ ಉಂಟಾದಾಗ ಅದು ಮತ್ತೆ ಕಾಣಿಸಿಕೊಳ್ಳುತ್ತದೆ, ಸ್ತ್ರೀ ತಾನು ಸ್ತ್ರೀ ಎಂಬ ಭಾವನೆ ತಂದು–ಕೊಳ್ಳುತ್ತಾಳೆ, ಪುರುಷ ತಾನು ಪುರುಷ ಎಂಬ ಭಾವನೆ ತಂದುಕೊಳ್ಳುತ್ತಾನೆ, ಮತ್ತು ಜಗಳ, ಬಹಿರಂಗವಾಗಿ ಇಲ್ಲವೆ ಪರದೆಯ ಹಿಂದೆ, ಅನಿರ್ದಿಷ್ಟ ಕಾಲದವರೆಗೆ, ಒಂದಿಲ್ಲೊಂದು ರೀತಿಯಲ್ಲಿ ಪುನರುಜ್ಜೀವನ ಪಡೆಯುತ್ತದೆ, ಮತ್ತು ಅದನ್ನು ಒಪ್ಪಿಕೊಳ್ಳುವುದು ಕಡಿಮೆಯಾದಾಗ ಇನ್ನೂ ಹೆಚ್ಚು ಕಹಿಯಾಗಿರುತ್ತದೆ. ಪುರುಷರು ಮತ್ತು ಸ್ತ್ರೀಯರು ಎನ್ನುವವರು ಯಾರೂ ಇಲ್ಲವಾಗುವವರೆಗೆ, ಲಿಂಗರಹಿತ ದೇಹಗಳಲ್ಲಿ ತಮ್ಮ ಒಂದೇ ಬಗೆಯ ಮೂಲವನ್ನು ಅಭಿವ್ಯಕ್ತಗೊಳಿಸುವ ಆತ್ಮಗಳು ಬರುವವರೆಗೆ ಇದು ಹಾಗಿರದೆ ಇರುವಂತೆ ಆಗಬಲ್ಲದೇ ಎಂದು ಮನುಷ್ಯ ಆಶ್ಚರ್ಯಪಡುವಂತಿದೆ, ...

ಇಂತಹ ಸಂತೋಷಕರ ಹಾಗೂ ಮೂಲ ಸ್ವರೂಪದ ಪರಿಹಾರ ದೊರಕಿಸುವವರೆಗೆ ಭಾರತ ಈ ವಿಷಯ ಕುರಿತು ಇನ್ನಿತರ ಹಲವಾರು ದೇಶಗಳಿದ್ದ ಹಾಗೆ ಹಿಂಸಾತ್ಮಕ ಮತ್ತು ಸಂಘರ್ಷ ಉಂಟುಮಾಡುವ ವೈದೃಶ್ಯ ದರ್ಶನ (contrasts)ಗಳಿರುವ ಭೂಮಿಯಾಗಿರುತ್ತದೆ, ಆದಾಗ್ಯೂ ಅವುಗಳನ್ನು ಬಹಳ ವಿಸ್ತಾರವಾದ ಹಾಗೂ ಎಲ್ಲವನ್ನೂ ಒಳಗೊಳ್ಳುವ ಸಮನ್ವಯದ ಮೂಲಕ ಬಗೆಹರಿಸಬಹುದು.

ವಿಶ್ವದ ಸೃಷ್ಟಿಕರ್ತೆ, ಎಲ್ಲ ಶತ್ರುಗಳ ಮೇಲೆ ಜಯ ಸಾಧಿಸುವಾಕೆ, ಎಲ್ಲ ದೇವತೆಗಳ ಹಾಗೂ ಜಗತ್ತುಗಳ ಮಾತೆ, ಎಲ್ಲ ವರಗಳನ್ನು ಕೊಡುವಾಕೆಯಾದ ಪರಮೋಚ್ಚ ಜಗನ್ಮಾತೆಯನ್ನು ಕುರಿತು ಭಾರತದಲ್ಲಿ ನಾವು ಅತ್ಯಂತ ಗಾಢವಾದ



ಆರಾಧನೆಯನ್ನು ಮಾಡುವುದಿಲ್ಲವೆ, ಅತ್ಯಂತ ಸಂಪೂರ್ಣವಾದ ಪೂಜ್ಯ ಭಾವನೆಯನ್ನು ಹೊಂದಿರುವುದಿಲ್ಲವೆ?

ಹಾಗೆಯೇ ಅದೇ ಭಾರತದಲ್ಲಿ ಸ್ತ್ರೀ ಜಾತಿಯ ತತ್ವಕ್ಕೆ ಅದು ಪ್ರಕೃತಿ, ಮಾಯೆ, ಭ್ರಷ್ಟಗೊಳಿಸುವ ಭ್ರಮೆ, ಪ್ರತಿಯೊಂದು ಪತನದ ಮತ್ತು ಪ್ರತಿಯೊಂದು ದುಃಖದ ಕಾರಣ, ಮನುಷ್ಯನನ್ನು ಮೋಸಗೊಳಿಸಿ, ಕಲುಷಿತನನ್ನಾಗಿ ಮಾಡಿ, ಪ್ರಲೋಭನೆ–ಯನ್ನು ಒಡ್ಡಿ ಭಗವಂತನಿಂದ ದೂರವಿರಿಸುವಂತಹದು ಎಂದು ಮೂಲ ಸ್ವರೂಪದ ತೆಗಳಿಕೆ ಮತ್ತು ತಿರಸ್ಕಾರವಿರುವುದನ್ನು ನಾವು ಕಂಡುಕೊಳ್ಳುವುದಿಲ್ಲವೆ?

ಭಾರತದ ಇಡೀ ಜೀವನ ಈ ವೈರುಧ್ಯದ ಹೊಡೆತಕ್ಕೆ ಈಡಾಗಿದೆ, ಅದು ಮನಸ್ಸು ಮತ್ತು ಹೃದಯಗಳಲ್ಲಿ ವೇದನೆಗೊಳಗಾಗಿದೆ.

ಪಶುವಿನ ರೀತಿಯಲ್ಲಿ ಜನ್ಮ ನೀಡುವ ಆವಶ್ಯಕತೆಗೆ ಮತ್ತು ಹೀಗೆ ಒಂದಕ್ಕೊಂದು ಪೂರಕವಾದ ಲೈಂಗಿಕ ಭೇದವನ್ನುಂಟು ಮಾಡಲು ವಿಭಜನೆಯ ನಿರ್ಬಂಧಕ್ಕೆ ಶರಣಾಗುವುದು ಇಲ್ಲದಿರುವ ಹೊಸ ಜೀವಜಾತಿಯನ್ನು ಸೃಷ್ಟಿಸುವಂತೆ ಹೊಸ ಕಲ್ಪನೆ ಹಾಗೂ ಪ್ರಜ್ಞೆಗಳ ಪ್ರಕಟಣೆ ಪ್ರಕೃತಿಯ ಮೇಲೆ ಒತ್ತಾಯ ತರುವವರೆಗೆ ಸದ್ಯದ ಮಾನವ ಕುಲದ ಪ್ರಗತಿಗಾಗಿ ಕೈಕೊಳ್ಳಬಹುದಾದ ಅತ್ಯಂತ ಒಳ್ಳೆಯ ಕಾರ್ಯವೆಂದರೆ ಸ್ತ್ರೀಯರನ್ನು ಹಾಗೂ ಪುರುಷರನ್ನು ಪರಿಪೂರ್ಣ ಸಮತೆಯ ಸಂಬಂಧದಿಂದ ನಡೆಸಿಕೊಳ್ಳುವುದಾಗಿದೆ, ಅವರಿಗೆ ಒಂದೇ ಬಗೆಯ ಶಿಕ್ಷಣ ಹಾಗೂ ತರಬೇತು ಕೊಡುವುದಾಗಿದೆ, ಎಲ್ಲ ಲೈಂಗಿಕ ವ್ಯತ್ಯಾಸದ ಮೇಲ್ಗಡೆಗಿರುವ ದೈವೀ ನೈಜತೆಯೊಂದಿಗೆ ಸತತ ಸಂಪರ್ಕದಲ್ಲಿದ್ದು ಎಲ್ಲ ಸಾಧ್ಯತೆಗಳ ಹಾಗೂ ಸಾಮರಸ್ಯಗಳ ಮೂಲವನ್ನು ಕಂಡುಕೊಳ್ಳುವುದನ್ನು ಅವರಿಗೆ ಕಲಿಸಿಕೊಡುವುದಾಗಿದೆ.

ವೈದೃಶ್ಯ ದರ್ಶನಗಳ ಭೂಮಿಯಾಗಿರುವ ಭಾರತ, ಅವುಗಳ ಕಲ್ಪನೆಯ ತೊಟ್ಟಿಲಾಗಿತ್ತು, ಈಗ ಆ ಭೂಮಿಯೇ ಹೊಸ ಸಿದ್ಧಿಗಳ ಭೂಮಿಯಾಗಬಹುದು.

**(12/103–06)** **– ಶ್ರೀಮಾತೆ**

*

## **ಕುಟುಂಬ ಯೋಜನೆ** (Birth Control)

ವಿಜ್ಞಾನಿಗಳು ಹಾಗೂ ವೈದ್ಯರು ಕುಟುಂಬ ಯೋಜನೆಗಾಗಿ ದೇಹಕ್ಕೆ ಯಾವುದೇ ಗಾಯವನ್ನುಂಟು ಮಾಡದ ವಿಧಾನಗಳನ್ನು ರೂಪಿಸಿದ್ದಾರೆ. ಅದರ

ಉದ್ದೇಶಗಳು ಎರಡು ಬಗೆಯವಾಗಿವೆ. ಮೊದಲನೆಯದಾಗಿ ಅಸಂಖ್ಯಾತ ಮಕ್ಕಳಿಗೆ ಜನ್ಮ ನೀಡುವುದನ್ನು ತಪ್ಪಿಸುವುದಾಗಿದೆ, ಎರಡನೆಯದಾಗಿ ಸ್ತ್ರೀ ಒಳ್ಳೆಯ ಆರೋಗ್ಯ ಕಾಪಾಡಿಕೊಂಡು ತಾನು ಜನ್ಮ ನೀಡಿದ ಕಡಿಮೆ ಸಂಖ್ಯೆಯ ಮಕ್ಕಳು ಆರೋಗ್ಯದಿಂದ ಬೆಳೆಯುವಂತೆ ನೋಡಿಕೊಳ್ಳಲು ಅನುಕೂಲವಾಗುವಂತೆ ಮಾಡುವುದಾಗಿದೆ.

ಸಹಜವಾಗಿ ಆಂತರಿಕ ನಿಯಂತ್ರಣ ಹೆಚ್ಚು ಒಳ್ಳೆಯದು, ಆದರೆ ಅದನ್ನು ಪುರುಷನಿಂದ ನಿರೀಕ್ಷಿಸಲಾದೀತೆ?

**ಪ್ರಶ್ನೆ :** *(ಶಿಷ್ಯನೊಬ್ಬನಿಂದ) ಅದು ಸ್ವೇಚ್ಛಾಚಾರವನ್ನು ಹೆಚ್ಚಿಸಬಹುದು ಎಂದು ಅದಕ್ಕೆ ತಕರಾರು ಮಾಡಬಹುದಾಗಿದೆ.*

**ಶ್ರೀಮಾತೆ :** ಅದು ಮತ್ತೆ ನೀತಿವಂತರ ವಿಚಾರ. ಉತ್ಕಟ ಮಟ್ಟ(extreme)ಕ್ಕೆ ತಲುಪುವ ಎರಡು ರೀತಿಗಳಿವೆ: ಒಂದು ಆಂತರಿಕ ನಿಯಂತ್ರಣ, ಇನ್ನೊಂದು ಮುಕ್ತವಾಗಿ ಲೋಲರಾಗುವುದು, ಇವೆರಡರ ಮಧ್ಯೆ ಕುಟುಂಬ ಯೋಜನೆಯ ಪದ್ಧತಿ ಬರುತ್ತದೆ.

(ಔಪಚಾರಿಕ ಮಾತುಕತೆಯನ್ನು ನೆನಪಿನಿಂದ ದಾಖಲಿಸಿದ್ದು) – **ಶ್ರೀ ಅರವಿಂದರು**

*

## ವಿವಾಹ ಮತ್ತು ಕೌಟುಂಬಿಕ ಪದ್ಧತಿ ಇವುಗಳ ವಿಚ್ಛೇದನ

**ಪ್ರಶ್ನೆ :** *ಕೌಟುಂಬಿಕ ಪದ್ಧತಿ ಕುಸಿದು ಹೋಗುವ ಸಾಧ್ಯತೆ ಕುರಿತು ಆಧುನಿಕ ಸಮಾಜ ಶಾಸ್ತ್ರಜ್ಞರು ತಮ್ಮ ಭಯವನ್ನು ವ್ಯಕ್ತಪಡಿಸಿದ್ದಾರೆ. ನೀವು ಈ ಕುಸಿತ ಕುರಿತು ಕೊಟ್ಟ ಹೇಳಿಕೆಯಲ್ಲಿ "ಆ ಕುಸಿತ ಮೊದಲೂ ಇತ್ತು, ಇನ್ನೂ ಇದೆ, ಅದು ಮಾನವ ಕುಲವನ್ನು ಉಚ್ಚತರ ಮತ್ತು ವಿಶಾಲವಾದ ಸಿದ್ಧಿಗಳತ್ತ ತರಲು ಅತ್ಯಗತ್ಯದ್ದಾದ ಚಲನೆಯಾಗಿದೆ" ಎಂಬ ಅಂಶವಿದೆ.*

*ಇದು ಎರಡು ಮಹತ್ವದ ಪ್ರಶ್ನೆಗಳು ಮೇಲೆದ್ದು ಬರುವಂತೆ ಮಾಡುತ್ತದೆ. ಅವುಗಳನ್ನು ಕೆಳಗೆ ಕೊಡಲಾಗಿದೆ.*

*1. ಕೌಟುಂಬಿಕ ಪದ್ಧತಿಯ ವಿಚ್ಛೇದನ ಕೆಲವೊಂದು ಉಚ್ಚ ಮಾನಸಿಕ ಅಥವಾ ಆಧ್ಯಾತ್ಮಿಕ ಆದರ್ಶಗಳನ್ನು ಅನುಸರಿಸುವವರಿಗೆ ಮಾತ್ರ ಇದೆಯೋ ಅಥವಾ ಸರ್ವ ಸಾಧಾರಣ ಮಾನವ ಕುಲಕ್ಕಾಗಿಯೂ ಇದೆಯೋ?*



**ಶ್ರೀಮಾತೆ :** ಹೌದು, ಕೆಲವೊಂದು ಉಚ್ಚ ಮಾನಸಿಕ ಇಲ್ಲವೆ ಆಧ್ಯಾತ್ಮಿಕ ಆದರ್ಶವನ್ನು ಅನುಸರಿಸುವ ಅತಿ ಕಡಿಮೆ ಸಂಖ್ಯೆಯಲ್ಲಿರುವ ಅಸಾಧಾರಣ ವ್ಯಕ್ತಿಗಳಿಗೆ ಮಾತ್ರ ಅದು ಅನ್ವಯಿಸುತ್ತದೆ.

*2. ನೀವು ಕೌಟುಂಬಿಕ ಪದ್ಧತಿಯ ಸಂಪೂರ್ಣ ವಿಚ್ಛೇದನವನ್ನು ಇಡೀ ಮಾನವ ಕುಲಕ್ಕಾಗಿ ಸಮರ್ಥಿಸುತ್ತಿದ್ದರೆ ಜನ್ಮ ತಾಳುವುದು ನೇರವಾಗಿ ಭೌತಿಕರೂಪ ತಾಳುವುದರಿಂದಾಗುವುದಕ್ಕಿಂತ ಮೊದಲೇ ಅದು ಸಂಭವಿಸುವುದು ಸೂಕ್ತವೆಂದು ನೀವು ಪರಿಗಣಿಸುವಿರಾ?*

**ಶ್ರೀಮಾತೆ :** ಕೌಟುಂಬಿಕ ಪದ್ಧತಿಯಲ್ಲಿ ಹೆಚ್ಚಿನ ಸ್ವಾತಂತ್ರ್ಯ ಮತ್ತು ನಮ್ಯತೆ ಇವು ಸೂಕ್ತವಾದವುಗಳು, ಸ್ಥಿರಗೊಂಡ ನಿಯಮಗಳು ಉತ್ಕ್ರಾಂತಿಗೆ ಹಾನಿಕಾರಕ–ವಾಗಿರುತ್ತವೆ.

**ಪ್ರಶ್ನೆ :** *ಮಾನವ ಕುಲದ ಉಚ್ಚತರ ಅಭಿವೃದ್ಧಿಗಾಗಿ ಕೌಟುಂಬಿಕ ಪದ್ಧತಿಯ ವಿಚ್ಛೇದನ ಅತ್ಯಗತ್ಯವಾಗಿರುವಂತೆ, ಅದಕ್ಕೆ ಸಮನಾಗಿ ವಿವಾಹ ಪದ್ಧತಿಯ ವಿಚ್ಛೇದನವೂ ಕೂಡ ಅತ್ಯಗತ್ಯದ್ದೆಂದು ನೀವು ಪರಿಗಣಿಸುವಿರಾ? ಜನ್ಮ ತಾಳುವ ಹೊಸ ವಿಧಾನ ಸಾಮಾನ್ಯವಾಗುವವರೆಗೆ, ಸದ್ಯದ ರೀತಿಯ ಲೈಂಗಿಕ ಸಂತಾನೋತ್ಪಾದನ ಮುಂದುವರಿಯುದಿಲ್ಲವೆ? ಅಂತಹ ಸಂದರ್ಭದಲ್ಲಿ ಯಾವು–ದಾದರೊಂದು ಬಗೆಯ ವೈವಾಹಿಕ ಸಂಬಂಧದ ಆವಶ್ಯಕತೆ ಇರುವುದಿಲ್ಲವೆ?*

**ಶ್ರೀಮಾತೆ :** ವಿವಾಹ ಪದ್ಧತಿ ಯಾವಾಗಲೂ ನಡೆದು ಬರುವಂತಹದು, ಆದರೆ ಕಾನೂನು ಬಾಹಿರವಾಗುವುದನ್ನು ತಪ್ಪಿಸಿಕೊಳ್ಳಲು ಅದಕ್ಕೆ ಕಾನೂನಿನ ಸಮಾರಂಭಗಳನ್ನು ಒತ್ತಾಯಪೂರ್ವಕವಾಗಿ ಹೇರಬಾರದು.

**(14/292–93)** – **ಶ್ರೀಮಾತೆ**

*

## ಸ್ತ್ರೀಯೂ ಕೂಡ ಮುಕ್ತ ವ್ಯಕ್ತಿವಿಶಿಷ್ಟ ಸತ್ತೆಯಾಗಿದ್ದಾಳೆ

– ಸ್ತ್ರೀಯನ್ನು ಅಧೀನಕ್ಕೊಳಪಡಿಸುವಿಕೆ, ಅವಳನ್ನು ಪುರುಷ ಒಂದು ಆಸ್ತಿಯೆಂದು ಪರಿಗಣಿಸುವಿಕೆ ಇವು ಒಂದಾನೊಂದು ಕಾಲಕ್ಕೆ ಸಾಮಾಜಿಕ ಜೀವನದಲ್ಲಿ ಸರ್ವಸಮ್ಮತ ವಿಷಯಗಳೆಂದು ಭಾವಿಸಲಾಗುತ್ತಿತ್ತು, ಕೇವಲ ಇತ್ತೀಚೆಗಷ್ಟೆ ಅದಕ್ಕೆ ಸವಾಲು ಒಡ್ಡಲಾಗುತ್ತಿದೆ. ಪ್ರಾಬಲ್ಯ ಮೆರೆಸುವ ಈ ಹುಟ್ಟುಗುಣ ಪಶುಪ್ರಾಯ ಪುರುಷನಲ್ಲಿ ಎಷ್ಟೊಂದು ಬಲವತ್ತರವಾಗಿತ್ತೆಂದರೆ ಧರ್ಮ ಹಾಗೂ

ತತ್ವಜ್ಞಾನಗಳೂ ಕೂಡ ಅದಕ್ಕೆ ಅನುಮತಿ ನೀಡಬೇಕಾಗುತ್ತಿತ್ತು. ಈ ವಿಚಾರವೂ ಕೂಡ ಧೂಳಿನಲ್ಲಿ ಚೂರು ಚೂರಾಗುತ್ತಿದೆ, ಆದಾಗ್ಯೂ ಹಳೆಯ ಶಾಸನದ ಪ್ರಭಾವ ಹಾಗೂ ನಿಯಂತ್ರಣ, ಮುಂದುವರಿದ ಹುಟ್ಟುಗುಣ, ಸಾಂಪ್ರದಾಯಿಕ ವಿಚಾರಗಳು ಪಟ್ಟುಹಿಡಿದು ಉಳಿದುಕೊಳ್ಳುವಿಕೆ ಇವುಗಳ ಮೂಲಕ ಆ ವಿಚಾರದ ಅವಶೇಷಗಳು ಇನ್ನೂ ಜೀವನಕ್ಕೆ ಅಂಟಿಕೊಂಡಿವೆ, ಸ್ತ್ರೀ ಕೂಡ ತಾನು ಮುಕ್ತ ವ್ಯಕ್ತಿವಿಶಿಷ್ಟ ಸತ್ತೆಯೆಂದು ಪರಿಗಣಿಸಬೇಕೆಂದು ಹಕ್ಕು ಸಾಧಿಸುವುದರಿಂದ ಆ ವಿಚಾರದ ವಿರುದ್ಧ ಒಪ್ಪಿಗೆ ದೊರಕುವಂತಾಗುತ್ತದೆ.

**(25/631)** – **ಶ್ರೀ ಅರವಿಂದರು**

*

## ಜೀವನದ ಎಲ್ಲ ಕ್ಷೇತ್ರಗಳಲ್ಲಿ ಸ್ತ್ರೀಯರು

ಭೌತಿಕ ಸ್ತರದಲ್ಲಿ, ಸಾಧಾರಣವಾಗಿ, ಸ್ತ್ರೀ ಹೆಚ್ಚು ದಕ್ಷಳಾಗಿರುತ್ತಾಳೆ, ಏಕೆಂದರೆ ಅವಳು ತನ್ನ ಅಂತರ್ಬೋಧೆಗಳನ್ನು ಅನುಸರಿಸುತ್ತಾಳೆ. ಭೌತದ್ರವ್ಯವನ್ನು ವ್ಯವಸ್ಥೆ–ಗೊಳಪಡಿಸುವುದರಲ್ಲಿ ಸಾಮಾನ್ಯವಾಗಿ ಹೆಚ್ಚು ಶಕ್ತಳಾಗಿರುತ್ತಾಳೆ, ಕೈಕೊಳ್ಳಬೇಕಾದ ಕಾರ್ಯದತ್ತ ನೇರವಾಗಿ ಹೋಗುತ್ತಾಳೆ, ಅದು ಹಾಗಿರುವಾಗ ಪುರುಷ ವಿಚಾರಗಳಲ್ಲಿ, ಮಾನಸಿಕ ರಚನೆಗಳಲ್ಲಿ ಅತ್ತಿತ್ತ ಅಲೆದಾಡುತ್ತಿರುತ್ತಾನೆ. ಇದನ್ನು ರಾಜಕಾರಣದಲ್ಲಿ ನೋಡಬಹುದು, ಅಲ್ಲಿ ಸ್ತ್ರೀಯರು ಹೆಚ್ಚು ಯಶಸ್ವಿಯಾಗುತ್ತಾರೆ. ಪುರುಷ ಮಾನಸಿಕ ಶಕ್ತಿಯನ್ನು ಇರಿಸಲು ಹೆಚ್ಚು ಶಕ್ತನಾಗಿರುತ್ತಾನೆ, ಸ್ತ್ರೀ ಹೆಚ್ಚು ಚೈತ್ಯಾತ್ಮಿಕವಾಗಿ ಕಾರ್ಯ ಕೈಕೊಳ್ಳುತ್ತಾಳೆ, ಅವಳು ಪ್ರಾಣಿಕ ಸ್ತರದಲ್ಲಿಯೂ ಹೆಚ್ಚು ಕ್ರಿಯಾಶೀಲಳಾಗಿರುತ್ತಾಳೆ.

**ಪ್ರಶ್ನೆ :** *(ಶಿಷ್ಯನೊಬ್ಬನಿಂದ) ಬಹಳಷ್ಟು ಸಲ ಸ್ತ್ರೀ ಪುರುಷನಿಗೆ ಸ್ಫೂರ್ತಿಯ ಸೆಲೆಯಾಗಿದ್ದರೂ, ಅವಳು ಸೃಜನಾತ್ಮಕವಾಗಿ ಶ್ರೇಷ್ಠವಾದದ್ದನ್ನು ಕೈಕೊಂಡಿಲ್ಲ.*

**ಶ್ರೀ ಅ :** ಸಾಮಾಜಿಕ ಬಂಧನಗಳಿಂದಾಗಿ ಅವಳಿಗೆ ಅಂತಹ ಅವಕಾಶ ಕೊಡ–ಲಾಗಿಲ್ಲ. ಸ್ತ್ರೀಯರಿಗೆ ಅವಕಾಶ ಒದಗಿಸಿದ ಪ್ರತಿಸಲ ಅವರು ತಮ್ಮ ಕ್ಷಮತೆಯನ್ನು ತೋರಿಸಿಕೊಟ್ಟಿದ್ದಾರೆ. ಅವರು ಕಾರ್ಯನಿರತರಾಗಿರುವುದನ್ನು ನೋಡುವುದಕ್ಕಾಗಿ ನಾವು ಕೆಲವು ತಲೆಮಾರುಗಳ ಕಾಲ ಕಾದುಕೊಂಡಿರಬೇಕು.

(ಔಪಚಾರಿಕ ಮಾತುಕತೆಯನ್ನು ನೆನಪಿನಿಂದ ದಾಖಲಿಸಿದ್ದು) – **ಶ್ರೀ ಅರವಿಂದರು**

*



## ಸಾರ್ವಜನಿಕ ಜೀವನದಲ್ಲಿ ಅಪ್ರಾಮಾಣಿಕ ಜನರೊಂದಿಗೆ ವ್ಯವಹರಿಸುವುದನ್ನು ಕುರಿತು

**ಪ್ರಶ್ನೆ :** *'ಕ್ಷ'ನ (ಹಿರಿಯ ಸರಕಾರಿ ನೌಕರನ) ವಿಚಾರಣೆ ಪೃಥ್ವಿಯ ಮೇಲೆ ಅತಿ ಮನಸ್ಸು ತನ್ನನ್ನು ಪ್ರಕಟಿಸುವ ಸಮಯದಲ್ಲಿ ಆಗಿತ್ತು. ಆಗ ಅವನು ಪ್ರಾಮಾಣಿಕ ಜನರು ಜೀವನದಲ್ಲಿ ಎದುರಿಸಬೇಕಾದ ತೊಂದರೆಗಳನ್ನು ಕುರಿತು ಶ್ರೀಮಾತೆ–ಯವರಿಗೆ ಪ್ರಶ್ನೆ ಕೇಳಿದ್ದ: ಅಪ್ರಾಮಾಣಿಕ ಜನರು ಪ್ರಾಮಾಣಿಕ ಜನರಿಗೆ ತೊಂದರೆ–ಯನ್ನುಂಟು ಮಾಡಿ ತಮ್ಮ ಏಳಿಗೆ ಕಂಡುಕೊಳ್ಳುತ್ತಾರೆ. ಎಷ್ಟು ಕಾಲದವರೆಗೆ ಭಗವಂತ ಇಂತಹ ಸ್ಥಿತಿ ಮುಂದುವರಿದುಕೊಂಡು ಹೋಗಲು ಬಿಟ್ಟುಕೊಡುತ್ತಾನೆ, ಇದಕ್ಕೆ ಕೊನೆ ಎಂದು ಬರುತ್ತದೆ.*

**ಶ್ರೀಮಾತೆ :** ಇಂತಹ ಅಪ್ರಾಮಾಣಿಕ ಜನರ ಆಚರಣೆಗಳ ಪರಿಣಾಮಗಳು ಸಾಕಷ್ಟು ಕೆಟ್ಟವಾದವುಗಳಾಗಿ ಪ್ರತಿಯೊಬ್ಬನಿಗೂ ಸಾಕಾಗಿ ಹೋಗುವವರೆಗೆ, ಅದು ಸಾಮಾನ್ಯವಾಗಿ, ಮುಂದುವರಿಯುತ್ತದೆ. ಒಂದು ಕಾಲ ಬರುತ್ತದೆ, ಆಗ ಪ್ರಾಮಾಣಿಕ ಜನರು ತಾವು ಕೂಡ ಇತರರ ಮಾರ್ಗ ಏಕೆ ಹಿಡಿಯಬಾರದು ಮತ್ತು ಜೀವನದಲ್ಲಿ ತಮ್ಮ ವಿರುದ್ಧವಿದ್ದವರಿಗೆ ತೊಂದರೆ ಕೊಟ್ಟು ಸಮೃದ್ಧಿಯನ್ನು ಏಕೆ ಕಂಡುಕೊಳ್ಳಬಾರದು ಎಂದು ಯೋಚಿಸುವಂತಾಗುತ್ತದೆ. ಇಂತಹ ಆಧಾರ ದೊರಕುತ್ತಿರುವವರೆಗೆ ಅದರ ಬಲ ಹೆಚ್ಚುತ್ತ ಹೋಗುತ್ತದೆ. ಅನಿಷ್ಟವಾದದ್ದು, ಸಹಿಸಿಕೊಳ್ಳಬಹುದಾದ ಒಂದು ಮಿತಿ ದಾಟಿ ಹೋದ ನಂತರ ಅಲ್ಲಿ ಸ್ಫೋಟವಿರುತ್ತದೆ, ಕ್ರಾಂತಿ ಉಂಟಾಗುತ್ತದೆ. (ಇದಕ್ಕೆ ಉತ್ತರ ನೀಡುತ್ತ ಅವನು ಕೇಳಿದ ಪ್ರಶ್ನೆ ಹೀಗಿದೆ:)

**ಪ್ರಶ್ನೆ :** *(ಶ್ರೀಮಾತೆಯವರು ಹೇಳಿದುದಕ್ಕೆ ಉತ್ತರ ರೂಪದಲ್ಲಿ ಹೇಳಿದ್ದು) ಆದರೆ ಶ್ರೀಮಾತೆಯವರೆ, ಕ್ರಾಂತಿ, ಅದರಲ್ಲೂ ಹಿಂಸಾತ್ಮಕವಾದ ಕ್ರಾಂತಿ ಬರುವುದಕ್ಕಿಂತ ಮೊದಲು ಭಗವಂತ ಮಧ್ಯೆ ಏಕೆ ಪ್ರವೇಶಿಸಬಾರದು! ಕ್ರಾಂತಿ ಶಾಂತಿಯಿಂದ ಬರುವಂತೆ ಏಕಾಗಬಾರದು.*

**ಶ್ರೀಮಾತೆ :** (ಮೆತ್ತಗಿನ, ಆದರೆ ಮನವರಿಕೆ ಮಾಡಿಕೊಡುವ ದನಿಯಲ್ಲಿ ಹೇಳಿದ್ದು) "ಸಾಮಾನ್ಯವಾಗಿ ಅದು ಮುಂದುವರಿಯುತ್ತದೆ" ಎಂದು ನಾನು ಹೇಳಿದ್ದೆ. ಎರಡ–ನೆಯ ಮಾರ್ಗವೂ ಕೂಡ ನಿಮಗಾಗಿ ತೆರೆದುಕೊಂಡಿರುತ್ತದೆ. ವಿರೋಧಿಸುವ ಶಕ್ತಿಗಳು ಹೆಚ್ಚು ಬಲವತ್ತರವಾಗುತ್ತಿವೆ ಎನಿಸಿದಾಗ್ಯೂ ನಿನ್ನ ಆದರ್ಶಗಳಿಗೆ ನೀನು

ಅಂಟಿಕೊಂಡರೆ, ನಿನಗೆ ಸಾಕಷ್ಟು ಸಂಖ್ಯೆಯಲ್ಲಿ ಅನುಯಾಯಿಗಳಿರುತ್ತಾರೆ, ಅವರು ಸಹಿಷ್ಣುತೆಯ ಮಿತಿ ಹೆಚ್ಚು ಸಂಕುಚಿತವಾಗುವಂತೆ ಮಾಡುತ್ತಾರೆ. ನೀನು ಉಚ್ಚ ಅಧಿಕಾರದ ಸ್ಥಾನದಲ್ಲಿದ್ದರೆ ಇದು ಹೆಚ್ಚು ಸುಲಭವಾಗುತ್ತದೆ, ನಿನ್ನ ಉದಾಹರಣೆ–ಯನ್ನು ಬಹಳ ಜನರು ನೋಡುವಂತಾಗುತ್ತದೆ.

**ಪ್ರಶ್ನೆ :** *ನಾಲ್ಕು ವರ್ಷಗಳು ಕಳೆದ ನಂತರವೂ ಅಪ್ರಾಮಾಣಿಕತೆಯೊಂದಿಗೆ ಹೋರಾಟ ನಡೆಸುವ ಅದೇ ಸಮಸ್ಯೆ ಅವನನ್ನು ಚಿಂತೆಗೀಡು ಮಾಡುವುದು ಮುಂದುವರಿಯಿತು. ಮತ್ತು ಅವನು ಅದೇ ಪ್ರಶ್ನೆಯನ್ನು 17–3–1960 ರಂದು ಶ್ರೀಮಾತೆಯವರ ಮುಂದಿಟ್ಟನು.*

**ಶ್ರೀಮಾತೆ :** ನಿನ್ನನ್ನು ಸುತ್ತುವರಿದ ಪರಿಸ್ಥಿತಿಗಳು ನಿನ್ನ ಹತೋಟಿಯಿಂದಾಚೆಗಿವೆ ಎಂಬುದನ್ನು ನೀನು ಕಂಡುಕೊಂಡಾಗ, ಕೈಯಲ್ಲಿ ಕನ್ನಡಿಯೊಂದನ್ನು ಹಿಡಿದು–ಕೊಂಡು ನೀನೇ ಅವುಗಳಿಗೆ ಎಷ್ಟರ ಮಟ್ಟಿಗೆ ಆಧಾರ ನೀಡುತ್ತಿರುವಿ ಎಂಬುದನ್ನು ನೋಡು. ಅನಿಷ್ಟಕ್ಕೆ ನೀನು ಆಧಾರ ನೀಡುವುದನ್ನು ಹಿಂತೆಗೆದುಕೊಂಡರೆ, ಅದು ದುರ್ಬಲವಾಗುತ್ತ ಹೋಗುವುದು ನಿಶ್ಚಿತ. ನೀನೇ ಸ್ವತಃ ಅಪ್ರಾಮಾಣಿಕನಾಗಿರುವಿ ಎಂದು ನಾನು ಸೂಚಿಸುತ್ತಿಲ್ಲ, ಆದರೆ ಪ್ರತಿಯೊಬ್ಬನು, ಅವನ ಅಧಿಕಾರದ ಸ್ಥಾನ ಉಚ್ಚವಾದದ್ದಿರಲಿ ಇಲ್ಲವೆ ಕೆಳಮಟ್ಟದ್ದಿರಲಿ, ಮಿಥ್ಯೆ ತೋರಿಕೆಗೆ ಜಯ ಸಾಧಿಸುತ್ತದೆಂದು ಕಂಡುಬಂದರೂ ಸತ್ಯಕ್ಕೆ ಅಂಟಿಕೊಂಡರೆ, ಆಗ ಮಿಥ್ಯೆ ಕ್ರಮೇಣ ಧೂಳಿನಲ್ಲಿ ಚೂರು ಚೂರಾಗಿ ಹೋಗಲೇಬೇಕು.

(ಶ್ರೀ ಅರವಿಂದಾಶ್ರಮದಲ್ಲಿ ಜೀವನ, ನಾರಾಯಣ ಪ್ರಸಾದ, ಪು. 207–08)

*

## ಪ್ರತಿಯೊಂದರಲ್ಲಿ ಸರಕಾರದ ಮಧ್ಯಪ್ರವೇಶ

"ನಾವೇ ಸರಕಾರ ನಡೆಸುವವರೆಗೆ ಏನನ್ನು ಮಾಡಲು ಸಾಧ್ಯವಿಲ್ಲ, ವ್ಯಕ್ತಿಗತವಾಗಿ ನಾವೇ ಆಳಿಕೆ ನಡೆಸುವವರಿದ್ದೇವೆ ಎಂದು ಅದರ ಅರ್ಥವಲ್ಲ, ಆದರೆ ಆಳಿಕೆ ನಡೆಸುವವರು ನಮ್ಮಿಂದ ಸ್ವೀಕರಿಸುವ ಹಾಗೂ ಆಜ್ಞಾಧಾರಕರಾಗಿರುವ ಜನರಾಗಿರಬೇಕು" ಎಂದು ಶ್ರೀ ಅರವಿಂದರು ನನಗೆ ನಿಸ್ಸಂದಿಗ್ಧ ರೀತಿಯಲ್ಲಿ ಹೇಳಿದ್ದರು. ಹಾಗೆಯೇ 1967ರಲ್ಲಿ ಕೇವಲ ಭಾರತದ ಸರಕಾರವಷ್ಟೇ ಅಲ್ಲ, ಜಗತ್ತಿನಲ್ಲಿಯ ಎಲ್ಲ ಸರಕಾರಗಳು ಅತಿಮಾನಸದ ಪ್ರಭಾವವನ್ನು ಸ್ವೀಕರಿಸಲು ಪ್ರಾರಂಭಿಸುತ್ತವೆ ಎಂದೂ ಅವರು ನಿರೀಕ್ಷಿಸಿದ್ದರು. ಅದಾಗುವುದಕ್ಕಿಂತ ಮೊದಲು



ವಿಷಯಗಳು, ಸ್ಪಷ್ಟವಾಗಿ, ಅತ್ಯಂತ ವಿಪರೀತವಾಗಿ ಕೆಟ್ಟವಾದವುಗಳಾಗುತ್ತವೆ ಎಂಬುದನ್ನೂ ನಿರೀಕ್ಷಿಸಿದ್ದರು. ಅವು ಜಗತ್ತಿನಲ್ಲಿ ಸಾಕಷ್ಟು ಕೆಟ್ಟವಾಗಿವೆ. ಎಲ್ಲೆಡೆಯಲ್ಲಿ ಜನರು ಹೊಡೆದಾಡುತ್ತಿದ್ದಾರೆ, ಕೊಲೆಗೀಡಾಗುತ್ತಿದ್ದಾರೆ. ಇಂಡೋನೇಶಿಯಾದಲ್ಲಿ ಮತ್ತು ಸೈಪ್ರಸ್‌ನಲ್ಲಿ ಹಲವಾರು ಜನರನ್ನು ಕೊಲೆಮಾಡಲಾಗಿದೆ. ಅದು ಹೇಗೇ ಇರಲಿ, ಅದು ಸಾರಿ ಹೇಳಿದ ಯುದ್ಧವಲ್ಲ, ಆದರೆ ಅದು ಎಲ್ಲೆಡೆಯಲ್ಲೂ ಇದೆ.

ಮತ್ತು ಇಲ್ಲಿ (ಭಾರತದಲ್ಲಿ) ಸಂಪೂರ್ಣ ಭ್ರಷ್ಟಾಚಾರವಿದೆ, ಎಷ್ಟೊಂದು ಸಂಪೂರ್ಣ ಎಂದು ಹೇಳಲಾಗದು – ನಾನು ನಿಮಗೊಂದು ಉದಾಹರಣೆ ಕೊಡುತ್ತೇನೆ. ಸರಕಾರ ಪ್ರತಿಯೊಂದರಲ್ಲೂ ಕೈಹಾಕುತ್ತದೆ. ಅದರ ಪರವಾನಿಗೆ ಇಲ್ಲದೆ ನೀವು ಬೆರಳನ್ನೂ ಕೂಡ ಆಡಿಸಲಾರಿರಿ, ದೇಶ ಬಿಟ್ಟು ಹೋಗಲಾರಿರಿ, ದೇಶದಲ್ಲಿ ಪ್ರವೇಶಿಸಲಾರಿರಿ, ಪರದೇಶಕ್ಕೆ ಹಣ ಕಳಿಸಲಾರಿರಿ, ಅಂಗಡಿ ತೆರೆಯಲಾರಿರಿ, ಏನನ್ನೂ ಮಾಡಲಾರಿರಿ, ಪರವಾನಿಗೆ ಇಲ್ಲದೆ ನಿಮ್ಮ ಹೊಲದಲ್ಲಿ ನೇಗಿಲನ್ನು ನಡೆಸಲಾರಿರಿ. ಅವರು ಎಲ್ಲದರಲ್ಲೂ ಕೈಹಾಕುತ್ತಾರೆ, ಅದೇ ಸ್ವತಃ ಮೂರ್ಖತನದ ವಿಷಯ. ಮತ್ತು ಅವರು ಶಾಸನಗಳನ್ನು ಮಾಡುತ್ತಾರೆ – ನೀವು ಶಾಸನಗಳನ್ನು ಹೆಚ್ಚು ಹೆಚ್ಚಾಗಿ ಮಾಡಿದ ಹಾಗೆ ಅದು, ಸ್ವಾಭಾವಿಕವಾಗಿ, ಹೆಚ್ಚಿನ ರೀತಿಯಲ್ಲಿ ಅವಿಧೇಯತೆಯನ್ನು ಸೃಷ್ಟಿಸುತ್ತದೆ.

ಜನರು ಬೆಳೆಗಳನ್ನು ಬೆಳೆಸುತ್ತಿಲ್ಲ, ಏಕೆಂದರೆ ಅದು ಬಹಳ ಗೋಜಲಿನಿಂದ ಕೂಡಿದ ವಿಷಯ ಮತ್ತು ಬೆಳೆಗಳ ಮೇಲೆ ಹೇರಿದ ಎಲ್ಲ ಬಗೆಯ ಕರಗಳಿಂದಾಗಿ (ಹಲವಾರು ಬಗೆಯ ಕರಗಳನ್ನು ಕೊಡಬೇಕಾಗುತ್ತದೆ) ಅವರು ಗಳಿಸಬಹು–ದಾದುಕ್ಕಿಂತ ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ. ಆಹಾರ ಸಾಮಾಗ್ರಿ ಸಾಕಷ್ಟಿರದೆ ಇರುವುದರಿಂದ ಇದ್ದ ಸಾಮಗ್ರಿಯನ್ನು ಸಂಗ್ರಹಿಸಿ ಇಟ್ಟುಕೊಂಡು ಸಾಧ್ಯವಿದ್ದಷ್ಟು ಹೆಚ್ಚಿನ ಬೆಲೆಗೆ ಮಾರುವ ಜನರಿದ್ದಾರೆ. ...

ಆದರೆ ಪ್ರತಿಯೊಂದು ನಡತೆಗೆಟ್ಟದ್ದಾಗಿದೆ, ಏಕೆಂದರೆ ಅವರು ಎಲ್ಲೆಡೆಯಲ್ಲಿ ಶಾಸನಗಳನ್ನು ಮಾಡಿದ್ದಾರೆ! ಎಲ್ಲೆಡೆಯಲ್ಲೂ, ಎಲ್ಲದರಲ್ಲೂ, ಮತ್ತು ಭಯ–ವನ್ನುಂಟುಮಾಡುವಷ್ಟು ಗೋಜಲಿದೆ, ನಂಬಲಸಾಧ್ಯವಾದಷ್ಟು ಮೂರ್ಖತನವಿದೆ. ಅದು ಯೋಚನೆಗೆ ಯೋಗ್ಯವಾಗಿಲ್ಲ, ಅವು ಸತ್ಯವೆಂದು ನಂಬಲಾರಿರಿ. ಪಾಲಕರು ತಮ್ಮ ಮಕ್ಕಳಿಗೆ ವಿಧಿಸುವ ಕಟ್ಟಳೆಗಳಿಗಿಂತ ಇನ್ನೂ ಹೆಚ್ಚು ಕಟ್ಟುಪಾಡಿಗೊಳ–ಪಡಿಸುವ ಶಾಸನಗಳಿವೆ. ಇಲ್ಲಿ ಜನರಿಗೆ ಇರುವುದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯ ಮಕ್ಕಳ

ಚಲನೆಗಿದೆ. ನಿಯಂತ್ರಣಕ್ಕಾಗಿ ಎಷ್ಟೊಂದು ಮೂರ್ಖತನದಿಂದ ಕೂಡಿದ ಸಂಕಲ್ಪವಿದೆ! ಅದು ಅಪೇಕ್ಷಣೀಯವಲ್ಲದ್ದಾಗಿದೆ.

(Agenda) – **ಶ್ರೀಮಾತೆ**

ಮಾನವ ಕುಲವನ್ನು ರಾಜಕೀಯ ಯಾಂತ್ರಿಕತೆಯ ಮೂಲಕ ಬದಲು ಮಾಡುವುದು ಅಸಾಧ್ಯ – ಅದನ್ನು ಮಾಡಲಾಗದು.

(ಔಪಚಾರಿಕ ಮಾತುಕತೆಯನ್ನು ನೆನಪಿನಿಂದ ದಾಖಲಿಸಿದ್ದು) – **ಶ್ರೀ ಅರವಿಂದರು**

*

## ಮೇರೆಗಳಿಂದಾಚೆಯಿಂದ ಸಂಭವಿಸಬಹುದಾದ ಅಪಾಯ ಚೈನಾ ದೇಶದ ವಿರುದ್ಧ ರಕ್ಷಣೋಪಾಯದ ಆವಶ್ಯಕತೆ (April 1, 1908)

ಭಾರತದ ಸ್ಥಾನ ಅದನ್ನು ಏಶಿಯಾದ ಬೀಗದ ಕೈಯನ್ನಾಗಿ ಮಾಡಿದೆ. ಅದು ಧರ್ಮಬಾಹಿರ ಅತಿ ಪ್ರಾಚ್ಯ ದೇಶವನ್ನು ಮುಸ್ಲಿಮರಿರುವ ಪಶ್ಚಿಮ ದೇಶದಿಂದ ವಿಭಜಿಸುತ್ತದೆ ಮತ್ತು ಅವು ಸಂಧಿಸುವ ಸ್ಥಾನ ಅದಾಗಿದೆ. ಭಾರತದಿಂದ ಮಾತ್ರ ಏಕತೆಗಾಗಿ ಶಕ್ತಿ, ಎಲ್ಲವನ್ನು ಅರಿತುಕೊಳ್ಳುವ ಪ್ರಾರಂಭಬಿಂದು, ಇಸ್ಲಾಮ ಮತ್ತು ಧರ್ಮಬಾಹಿರತೆ ಇವುಗಳ ನಡುವೆ ರಾಜಿ ಮಾಡುವಿಕೆ ಹೊರಹೊಮ್ಮಬಲ್ಲವು. ಏಶಿಯಾದ ಏಕತೆಗಾಗಿ ಅದರ ಸ್ವಾತಂತ್ರ್ಯ ಅವಶ್ಯವಾಗಿದೆ. ಭೌಗೋಲಿಕವಾಗಿ ಭಾರತ ಅಜೇಯ ಬಲದ ಸ್ಥಾನವನ್ನು ಹೊಂದಿದೆ, ಏಶಿಯಾದ ಪೂರ್ವ ಭಾಗ ಹಾಗೆಯೇ ಪಶ್ಚಿಮದ ಭಾಗ ಇವುಗಳ ಮೇಲೆ ಅಧಿಕಾರ ಹೊಂದಿದೆ. ತನ್ನ ಆ ಸ್ಥಾನದಿಂದ ಅದು ಸುರಕ್ಷಿತ ಕೋಟೆಯೊಂದರಲ್ಲಿ ಇದ್ದ ಹಾಗೆ ಇದ್ದುಕೊಂಡು ಪರ್ಶಿಯಾ ಮತ್ತು ಚೈನಾ ಇರುವ ಜಗತ್ತಿಗೆ ಸೇರಿದ ದೇಶಗಳ ಮೇಲೆ ದಾಳಿ ಮಾಡಬಲ್ಲದು. ದೇಶಗಳು ಯುಕ್ತಾಯುಕ್ತ ವಿವೇಚನೆ ಮತ್ತು ರಾಜತಂತ್ರ ಇವುಗಳನ್ನು ಅನುಸರಿಸಬೇಕೆಂಬ ಆದೇಶದಿಂದಲ್ಲ; ಆದರೆ ಅವುಗಳ ಪರಿಸರ ಮಂಜೂರು ಮಾಡುವುದನ್ನು ಅನುಸರಿಸಬೇಕಾದ ರಹಸ್ಯ ಮತ್ತು ನಿಷ್ಠುರ ಆವಶ್ಯಕತೆಯ ವಿರುದ್ಧ ಯಾವ ಒಪ್ಪಂದವಾಗಲಿ, ಸಂಘರ್ಷಕ್ಕೀಡುಮಾಡುವ ಆಸಕ್ತಿಗಳಲ್ಲಿ ರಾಜೀಮಾಡಿಕೊಳ್ಳುವ ಪ್ರಯತ್ನಗಳಾಗಲಿ ನಿಲ್ಲಲಾರವು. ಅನಿವಾರ್ಯವಾದದ್ದು ಸಂಭವಿಸಿದಾಗ, ಚೈನಾ ದೇಶದ ಸೈನ್ಯಗಳು ಭಾರತ–ದಲ್ಲಿರುವ ಹಿಮಾಲಯದ ದ್ವಾರಗಳನ್ನು ನೂಕುತ್ತಿದ್ದಾಗ, ಮತ್ತು ಜಪಾನೀಯರ ನೌಕಾಬಲ ಮುಂಬಯಿ ಬಂದರಿನಲ್ಲಿ ಕಾಣಿಸಿಕೊಂಡಾಗ ಈ ದೈತ್ಯಾಕಾರದ ಸಂಯೋಜನೆಯನ್ನು ಇಂಗ್ಲಂಡ ಯಾವ ಶಕ್ತಿಯ ಮೂಲಕ ಎದುರಿಸಬಲ್ಲದು? ... ಮಂಗೋಲಿಯನ್‌ರ ವಿಜ್ಞಾನ ಹಾಗೂ ಕೌಶಲಗಳಿಂದ ಅವು ಚೂರು ಚೂರಾಗುವವು. ಮತ್ತು ಏಶಿಯಾದ ಬೀಗದ ಕೈ ಮಂಗೋಲಿಯನ್‌ರ ಪಾಲಾಗುವುದು.



**(7/90)** – **ಶ್ರೀ ಅರವಿಂದರು**

*

## ಚೈನಾ ದೇಶದ ಪ್ರಗತಿ (Oct. 9, 1909)

ವಿರೋಧಿ ಗುಪ್ತ ಸಂಘದ ಸದಸ್ಯನಿಂದಾದ ತೊಂದರೆಗಳು (Boxer troubles) ನಿವಾರಣೆಗೊಂಡ ನಂತರ ಸ್ವಲ್ಪೇ ಸಮಯದಲ್ಲಿ ಚೈನಾ ತನ್ನ ದೇಶದ ಶಿಕ್ಷಣ ಪದ್ಧತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿದೆ. ಎಲ್ಲ ದರ್ಜೆಗಳಿಗಾಗಿ ಆಧುನಿಕ ಶಾಲೆಗಳ ಜಾಲವನ್ನು ಸ್ಥಾಪಿಸಿದೆ, ತನ್ನ ದೇಶದ ರಾಜಕುಮಾರರಿಗೆ, ಶ್ರೀಮಂತ ವರ್ಗದವರಿಗೆ ಆಧುನಿಕ ಶಿಕ್ಷಣ ಆದ್ಯಂತವಾಗಿ ದೊರಕುವಂತೆ ಮಾಡಿದೆ, ಬೌದ್ಧಿಕ ಶಿಕ್ಷಣಕ್ಕೆ ಅಧಿಕವಾಗಿ ಸೈನ್ಯಕ್ಕೆ ಸಂಬಂಧಿಸಿದ ಜ್ಞಾನ, ಸೈನಿಕನು ಅಳವಡಿಸಿಕೊಳ್ಳಬೇಕಾದ ರೂಢಿಗಳು ಇವುಗಳಿಗಾಗಿ ಕೂಡ ತರಬೇತು ನೀಡ–ಲಾಗುತ್ತಿದೆ, ಅದರಿಂದಾಗಿ ಆ ವಿಧಾನ ಪೂರ್ತಿಗೊಂಡಾಗ, ಚೈನಾ ದೇಶದ ಎಲ್ಲ ಜನರು ಸೈನ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ತರಬೇತು ಪಡೆದವರಾಗಿರುತ್ತಾರೆ, ಇತರ ಸಾಮರ್ಥ್ಯಗಳ ಶ್ರೇಷ್ಠ ಸಂಯೋಜನೆ ಅವರನ್ನು ಸ್ಪರ್ಶಿಸುವುದನ್ನು ಕುರಿತು ಚಿಂತಿಸುವುದಿಲ್ಲ. ಇನ್ನೊಂದು ಬದಿಯಲ್ಲಿ ರೈಲು ಮಾರ್ಗದ ನಿರ್ಮಾಣವನ್ನು ಪೂರ್ತಿಗೊಳಿಸಲಾಗಿದೆ ಮತ್ತು ಅಲ್ಲಿ ರೈಲುಗಾಡಿಗಳ ಚಾಲನೆಯನ್ನು ಚೈನಾ ದೇಶದ ಜನರೇ ಮಾಡುವರು. ಶಿಕ್ಷಣದ ವಿಧಾನ ಸರಿಯಾಗಿ ಮುಂದುವರಿದು ಹೋದಾಗ ಚೈನಾ ದೇಶದ ಸರಕಾರ ತನ್ನನ್ನು ಸಂವಿಧಾನಾತ್ಮಕ ಸಂಸತ್ತಿನ ಪ್ರಕಾರದ್ದನ್ನಾಗಿ ಪರಿವರ್ತಿಸಬೇಕೆಂಬ ಉದ್ದೇಶ ಹೊಂದಿದೆ, ಮತ್ತು ಅದರ ಕಾರ್ಯಕ್ರಮದಲ್ಲಿ ಈ ಸ್ವಯಂಚಾಲಿತ ಕ್ರಾಂತಿ ಮುಂಬರುವ ಎಂಟು ವರ್ಷಗಳಲ್ಲಿ ಫಲಪ್ರದತೆ ಕಂಡುಕೊಳ್ಳುವಂತೆ ಮಾಡಲಾಗಿದೆ. ಸೂಕ್ಷ್ಮ ವಿಧಾನದ, ಪರಿಪೂರ್ಣ ಸಂಘಟನೆಯುಳ್ಳ ಮತ್ತು ದೊಡ್ಡ ಹಾಗೂ ಚಿಕ್ಕ ಕಾರ್ಯಗಳಲ್ಲಿ ಏಕಪ್ರಕಾರದ ಗಾಂಭೀರ್ಯವಿರುವ ಕನ್‌ಫ್ಯೂಸಿಯನ್ ಪದ್ಧತಿಯಲ್ಲಿ ತರಬೇತು ಪಡೆದ ಚೈನಾ ದೇಶದವರು ಮಾತ್ರ ಹೀಗೆ ಬೃಹದಾಕಾರದ ರಾಜಕೀಯ, ಸಾಮಾಜಿಕ ಮತ್ತು

ಶೈಕ್ಷಣಿಕ ಬದಲಾವಣೆಯ ಏರ್ಪಾಡು ಮಾಡಬಲ್ಲರು, ಅದನ್ನು ಅವರು ಸಮಾರಂಭವೊಂದರ ಕಾರ್ಯಕ್ರಮದ ಏರ್ಪಾಡು ಮಾಡಿದ ಹಾಗೆ ದಕ್ಷತೆಯಿಂದ ಹಾಗೂ ಕೂಲಂಕಷತೆಯಿಂದ ಮಾಡಬಲ್ಲರು. ಚೈನಾ ದೇಶದವರು ಒಮ್ಮೆ ಈ ಕ್ರಾಂತಿಗಾಗಿ ತಮ್ಮ ಮನಸ್ಸುಗಳನ್ನು ಸಿದ್ಧ ಮಾಡಿಕೊಂಡ ನಂತರ ಅವರು ಅದನ್ನು ಸಾಧ್ಯವಿರುವ ಅತ್ಯಂತ ಸಂಪೂರ್ಣತೆಯಿಂದ, ವ್ಯಾವಹಾರಿಕ ಪದ್ಧತಿಯಿಂದ, ಪರಿಣಾಮಕಾರಿ ಸಂಘಟನೆಯಿಂದ ಮತ್ತು ಅತ್ಯಂತ ಕಡಿಮೆ ಹಾಳುಮಾಡುವಿಕೆ ಹಾಗೂ ತಿಕ್ಕಾಟಗಳಿಂದ ನಿರ್ವಹಿಸುವ ಸಂಭವವಿರುತ್ತದೆ. ಚೈನಾ ದೇಶದ ಇತಿಹಾಸದಲ್ಲಿ, ಅದಕ್ಕೂ ಕಡಿಮೆಯಲ್ಲದ ರೀತಿಯಲ್ಲಿ ಜಪಾನಿನ ಇತಿಹಾಸದಲ್ಲಿ ರಾಷ್ಟ್ರೀಯ ಸಂಕಲ್ಪ ಶಕ್ತಿಯು ಶ್ರೇಷ್ಠ ಮತ್ತು ಪ್ರಾಚೀನ ಶಿಸ್ತುಪಾಲನೆಯ ನೈತಿಕ ಫಲಿತಾಂಶವನ್ನು ಉಪಯೋಗಿಸಿಕೊಂಡು ಪಡೆದ ಅಗಾಧ ಮೌಲ್ಯವನ್ನು – ಸಮಾಜ, ಚಿಂತನ ಮತ್ತು ಸರಕಾರಗಳಿಗೆ ಆ ಶಿಸ್ತುಪಾಲನೆ ಕೊಟ್ಟಿದ್ದ ಆಕಾರದ ತಾತ್ಕಾಲಿಕ ಎರಕಗಳನ್ನು ಮುರಿದುಹಾಕಿದಾಗ್ಯೂ – ನಾವು ನೋಡಬಹುದಾಗಿದೆ. ಚೈನಾ ದೇಶದ ಇಲ್ಲವೆ ಜಪಾನ ದೇಶದ ಶಿಸ್ತುಪಾಲನೆಗಿಂತ ಅತಿ ಹೆಚ್ಚು ಸಾಮರ್ಥ್ಯಪೂರ್ಣ ಪ್ರಾಚೀನ ಕಾಲದ ಶಿಸ್ತುಪಾಲನೆ ಭಾರತದಲ್ಲಿ ಇದೆ, ಆದರೆ ಆ ಶಿಸ್ತುಪಾಲನೆಯ ಸರಿಯಾದ ಉಪಯೋಗ ಮಾಡಿಕೊಳ್ಳುವುದಕ್ಕಾಗಿ ರಾಷ್ಟ್ರೀಯ ಸಂಕಲ್ಪ ಶಕ್ತಿಗೆ ನಿರ್ದೇಶನ ನೀಡುವ ಸಾರ್ವಭೌಮತ್ವದ ಕೇಂದ್ರ ಎಲ್ಲಿದೆ? ಅಂತಹ ಸರಕಾರದ ಅನುಪಸ್ಥಿತಿಯಲ್ಲಿ ಅದನ್ನು ಸರಿದೂಗಿಸುವ ರಾಷ್ಟ್ರೀಯ ಪ್ರಯತ್ನದ ಕೇಂದ್ರ ಎಲ್ಲಿದೆ? ರಾಷ್ಟ್ರೀಯ ಬಲದ ಮೂಲಗಳು ಹಾಗೂ ಸಂಸ್ಕೃತಿ ಇವುಗಳ ಬಗ್ಗೆ ತಿರಸ್ಕಾರವಿರುವ ಹಾಗೂ ಸಂಪರ್ಕವಿಲ್ಲದೆ ಇರುವ ವಿದೇಶೀಯರು ನಮ್ಮ ಸರಕಾರ ನಡೆಸುತ್ತಿದ್ದಾರೆ. ಅವು(ರಾಷ್ಟ್ರೀಯ ಬಲ ಮತ್ತು ಸಂಸ್ಕೃತಿ)ಗಳಿಲ್ಲದೆ ಇರುವ ಶಿಕ್ಷಣ ಪದ್ಧತಿ ನಮ್ಮಲ್ಲಿದೆ, ನಮ್ಮದೇ ಸಂಸ್ಕೃತಿಯನ್ನು ಮರಳಿ ಪಡೆದು, ಅದನ್ನು ವೀರ್ಯವತ್ತಾದದ್ದನ್ನಾಗಿ ಮಾಡಿ ಆಧುನಿಕ ಪ್ರಯೋಜನಗಳನ್ನು ಪಡೆಯುವುದರ ಬದಲಾಗಿ ವಿದೇಶೀ ಬಲವನ್ನು ಇರಿಸುವುದನ್ನು ಅರಸುತ್ತಿದೆ. ವಿದೇಶೀಯ ಶಿಸ್ತುಪಾಲನೆಯಲ್ಲಿ ತರಬೇತು ಪಡೆದ ನಮ್ಮ ನೇತಾರರಿದ್ದಾರೆ, ಯಾವ ಶಕ್ತಿಯನ್ನು ಉಪಯೋಗಿಸಿದರೆ ಭಾರತವನ್ನು, ಚೈನಾ ಮತ್ತು ಜಪಾನ ದೇಶಗಳಲ್ಲಿರುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ, ತೀವ್ರಗತಿಯಿಂದ ಮತ್ತು ಬಲವತ್ತರವಾಗಿ ಕ್ರಾಂತಿಗೊಳಪಡಿಸಬಹುದು ಎಂಬುದನ್ನು ಅವರು ತಿಳಿದಿಲ್ಲ, ಅದರಲ್ಲಿ ಅವರ ನಂಬಿಕೆಯಿಲ್ಲ. ಆಂತರಿಕ ವಿಭಜನೆ ಇಲ್ಲವೆ ಹಳೆಯ ಮತ್ತು ತಕ್ಕವಾದವುಗಳಾಗಿರದ ಸ್ಥಿತಿಗಳ ಎಳೆತ ಇವುಗಳಿಗಿಂತ ಇದೇ ವಿಷಯ ಏಶಿಯಾ



ಖಂಡದ ಬೇರೆ ಯಾವುದೇ ದೇಶದಲ್ಲಿರುವುದಕ್ಕಿಂತ ಭಾರತದಲ್ಲಿಯ ಕಾರ್ಯ ಹೆಚ್ಚು ಕಠಿಣವಾಗುವಂತೆ ಮಾಡುತ್ತದೆ.

**(8/265–66)** **– ಶ್ರೀ ಅರವಿಂದರು**

*

## ಚೈನಾ ದೇಶದಿಂದಾಗುವ ಭಯೋತ್ಪಾದನೆ

(ಮಾನವ ಕುಲದ ಏಕತೆಯ ಆದರ್ಶ (Ideal of Human Unity) ಗ್ರಂಥದ ಕೊನೆಗೆ ಎಪ್ರಿಲ್ 1950ರಲ್ಲಿ ಶ್ರೀ ಅರವಿಂದರು ಅಧಿಕವಾಗಿ ಸೇರಿಸಿದ ಅಧ್ಯಾಯದಲ್ಲಿ ಬರೆದದ್ದನ್ನು ಕೆಳಗೆ ಕೊಡಲಾಗಿದೆ.)

ಏಶಿಯಾ ಖಂಡದಲ್ಲಿ ಹೆಚ್ಚು ಅಪಾಯಕಾರಿ ಪರಿಸ್ಥಿತಿ ಉಂಟಾಗಿದೆ, ಚೈನಾ ದೇಶ ಕಮ್ಯುನಿಷ್ಟ ದೇಶವಾಗಿ ಹೊರಹೊಮ್ಮಿದುದರಿಂದಾಗಿ ಅದು ಜಗತ್ತಿನ ಈ ಭಾಗದ ಭೂಖಂಡದ ಜನರ ಏಕತೆಯ ಸಾಧ್ಯತೆಗೆ ತೀಕ್ಷ್ಣವಾಗಿ ಅಡ್ಡವಾಗಿ ನಿಂತುಕೊಂಡಿದೆ. ಅಗಾಧ ಕಮ್ಯುನಿಷ್ಟ ಅಧಿಪತ್ಯವುಳ್ಳ ರಾಷ್ಟ್ರಗಳಾದ ರಶಿಯಾ ಮತ್ತು ಚೈನಾ ಇವುಗಳ ಸಂಯೋಜನೆ ಏಶಿಯಾದ ಇಡೀ ಉತ್ತರ ಭಾಗವನ್ನು ಸುಲಭವಾಗಿ ಸುತ್ತುವರಿಯಬಲ್ಲದು, ದಕ್ಷಿಣ–ಪಶ್ಚಿಮ ಏಶಿಯಾದ ಭಾಗವನ್ನು, ಟಿಬೇಟನ್ನು ಅಧೀನಕ್ಕೊಳಪಡಿಸಿಕೊಳ್ಳಬಹುದಾದ ಭಯವನ್ನು ಉಂಟುಮಾಡಿ ಆ ಭಾಗವನ್ನು ನಿಸ್ತೇಜಗೊಳಿಸಬಲ್ಲದು ಮತ್ತು ಭಾರತದ ಇಡೀ ಉತ್ತರ ಗಡಿನಾಡಿನ ಮೇಲೆ ದಾಳಿ ಮಾಡಬಹುದು, ಅದರ ಹಾಗೂ ಪಶ್ಚಿಮ ಏಶಿಯಾ ಭಾಗದ ಸುರಕ್ಷಿತತೆಗೆ ಭಯವನ್ನುಂಟು ಮಾಡಬಹುದು, ಅದರೊಂದಿಗೆ ಬೇಡವಾದ ರಾಜಕೀಯ ವ್ಯವಸ್ಥೆಯ ಮೂಲಭೂತ ಭಾವನೆಗಳು, ರಾಜಕೀಯ ಹಾಗೂ ಸಾಮಾಜಿಕ ಸಂಘಟನೆಗಳು ಮತ್ತು ಪ್ರತಿರೋಧ ಒಡ್ಡಲಾಗದ ಕಮ್ಯುನಿಷ್ಟ ಸಿದ್ಧಾಂತ ಪ್ರತಿಪಾದಿಸುವ ಜನಸಮೂಹದ ಪ್ರಾಬಲ್ಯ ಇವುಗಳಿಗಾಗಿ ಆಕ್ರಮಣದ ಸಾಧ್ಯತೆ, ಒಳನುಗ್ಗುವುದರ ಮೂಲಕ ಇಲ್ಲವೆ ಪ್ರಚಂಡ ಸೈನ್ಯ ಬಲದ ಮೂಲಕ ನಿಸ್ತೇಜಗೊಳಿಸುವಿಕೆ, ಅಧೀನಪಡಿಸಿಕೊಳ್ಳುವಿಕೆ ಇವುಗಳ ಸಾಧ್ಯತೆ ಇದೆ.

**(25/590–91)** **– ಶ್ರೀ ಅರವಿಂದರು**

(ಶ್ರೀ ಅರವಿಂದರು ಇದನ್ನು ಬರೆದು ಆರು ತಿಂಗಳಾದ ನಂತರ ಅಕ್ಟೋಬರ 1950ರಲ್ಲಿ ಚೈನಾ ಟಿಬೇಟಿನ ಮೇಲೆ ದಾಳಿಮಾಡಿತು, ಮತ್ತು ಅಕ್ಟೋಬರ

1962ರಲ್ಲಿ ಅದು ಭಾರತದ ಉತ್ತರದ ಮೇರೆಯ ಮೇಲೆ ದಾಳಿಮಾಡಲು ಪ್ರಾರಂಭಿಸಿತು.)

*

## ಪ್ರಾಬಲ್ಯಕ್ಕಾಗಿ ಕಮ್ಯೂನಿಷ್ಟರ ಯೋಜನೆ (June 28, 1950)

**ಶ್ರೀ ಅ :** (ಕೆ.ಡಿ ಸೇಟ್ನಾ ಅವರಿಗೆ) ಕೋರಿಯಾ ದೇಶಕ್ಕೆ[1] ಸಂಬಂಧಿಸಿದ ವಿಷಯ ಕುರಿತು ನಿನಗೆ ಮಾರ್ಗದರ್ಶನ ಮಾಡಲು ಒಂದು ಸೂಚನೆ ನೀಡುವಂತೆ ನನ್ನನ್ನು ಏಕೆ ಕೇಳಿದೆ ಎಂಬುದು ನನಗೆ ತಿಳಿಯದು. ಅಲ್ಲಿ ಹಿಂದುಮುಂದು ನೋಡುವು–ದೇನಿಲ್ಲ, ಇಡೀ ವಿಷಯ ಸುಸ್ಪಷ್ಟವಾಗಿದೆ. ಅದು ಕಮ್ಯುನಿಷ್ಟರ ದಂಡಯಾತ್ರೆಯಲ್ಲಿ ಮೊದಲ ಚಲನೆ, ಅದು ಉತ್ತರದ ಈ ಭಾಗಗಳ ಮೇಲೆ ಪ್ರಾಬಲ್ಯ ಸಾಧಿಸುವು–ದಕ್ಕಾಗಿ, ವಶಪಡಿಸಿಕೊಳ್ಳುವುದಕ್ಕಾಗಿ ಪೂರ್ವಭಾವಿಯಾಗಿ ಅವರು ನಡೆಸುವ ವ್ಯೂಹರಚನೆ – ಪ್ರಾಸಂಗಿಕವಾಗಿ ಭಾರತವನ್ನು ಪ್ರವೇಶಿಸಲು[2] ದ್ವಾರವೊಂದನ್ನು ಮಾಡಿಕೊಳ್ಳುವುದಕ್ಕಾಗಿ ಟಿಬೇಟನ್ನು ವಶಪಡಿಸಿಕೊಳ್ಳುವುದಾಗಿದೆ. ಅವರು ಅದರಲ್ಲಿ ಯಶಸ್ವಿಯಾದರೆ ಇಡೀ ಜಗತ್ತಿನ ಮೇಲೆ ಅವರ ಪ್ರಾಬಲ್ಯ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಏಕೆ ಅನುಸರಿಸುತ್ತ ಹೋಗದಿರಬಾರದು ಎಂಬುದಕ್ಕೆ ಕಾರಣವಿಲ್ಲ.

**(36/507)** **– ಶ್ರೀ ಅರವಿಂದರು**

### ಶ್ರೀಮಾತೆಯವರು ಶಿಷ್ಯನೊಂದಿಗೆ ನಡೆಸಿದ ಮಾತುಕತೆ

**ಅಗಸ್ಟ 7, 1963**

... ಜಯಸಾಧಿಸುವ ಹುರುಪು ಚೈನಾ ದೇಶದವರನ್ನು ಮತ್ತೆ ಹಿಡಿದುಕೊಂಡಿರುವ ಹಾಗೆ ತೋರಿಬರುತ್ತದೆ.

ನಾನು ಆ ಪ್ರವಾಹಗಳನ್ನು ನೋಡುತ್ತಿದ್ದೇನೆ, ಅವು ಹುಚ್ಚುತನದ

1. ಕೆಲವು ದಿನಗಳ ಹಿಂದೆ ಉತ್ತರ ಕೋರಿಯಾದ ಸೈನ್ಯಗಳು ರಶಿಯಾದ ಸೈನ್ಯಗಳೊಂದಿಗೆ ಕೂಡಿಕೊಂಡು ದಕ್ಷಿಣ ಕೋರಿಯಾದ ಮೇಲೆ ದಾಳಿ ಪ್ರಾರಂಭಿಸಿದವು. ಕೆಲವು ತಿಂಗಳುಗಳ ನಂತರ ಚೈನಾ ಸೈನ್ಯಗಳು ಅವುಗಳನ್ನು ಕೂಡಿಕೊಂಡವು.

2. ಈ ಪತ್ರವನ್ನು ಬರೆದು ನಾಲ್ಕು ತಿಂಗಳುಗಳಾದ ನಂತರ ಚೈನಾ ಟಿಬೇಟಿನ ಮೇಲೆ, ಅಕ್ಟೋಬರ 1950ರಲ್ಲಿ, ದಾಳಿ ಮಾಡಿತು.



ಪ್ರವಾಹಗಳಿದ್ದ ಹಾಗಿವೆ, ಅವು ಮನುಷ್ಯರನ್ನು, ವಿಷಯಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತವೆ. ... ತಳದಲ್ಲಿ, ನಿಜವಾಗಿ, ಅದು 'ಹೌದು' ಮತ್ತು 'ಇಲ್ಲ' ಇವುಗಳ ನಡುವಿರುವ ತೀಕ್ಷ್ಣ ಸಂಘರ್ಷವಾಗಿದೆ. ಎಂದರೆ ಹೊಸ ವಿಷಯಗಳು ಬರುವುದನ್ನು ತೀವ್ರಗೊಳಿಸಲು ಹೋರಾಟ ನಡೆಸುವುದೆಲ್ಲದರ ಹಾಗೂ ಅದನ್ನು ತಿರಸ್ಕರಿಸುವ – ಹೆಚ್ಚುತ್ತಿರುವ ಹಿಂಸೆಯೊಂದಿಗೆ ತಿರಸ್ಕರಿಸುವುದೆಲ್ಲದರ ನಡು–ವಿರುವ ಸಂಘರ್ಷವಾಗಿದೆ.

**ಜೂನ 18, 1965**

ಚೈನಾ ದೇಶದವರ ಪ್ರಾಬಲ್ಯದ ಕೆಳಗೆ ಜೀವಿಸುವುದು... ಅದಕ್ಕಿಂತ ಮೊದಲು ಮರಣ ಹೊಂದುವುದು ಒಳ್ಳೆಯದು.

ಚೈನಾ ದೇಶದವರು, ಪೃಥ್ವಿಯ ಮೇಲೆ ಚೈನಾ ದೇಶದವರ ಪ್ರಾಬಲ್ಯ – ಇದರರ್ಥ ಪೃಥ್ವಿ ಬಿರುಸಾಗುತ್ತ ಹೋಗುವುದಾಗಿದೆ, ಚಂದ್ರನ ಹಾಗೆ ಪೃಥ್ವಿ, ತಣ್ಣಗಾಗುವುದಾಗಿದೆ, ಓಹ್, ಅದು ಭಯಾನಕವಾಗುವುದು ...

ನಮಗೆ ಅನಾಹುತಗಳು ಬೇಕಾಗಿಲ್ಲ.

**ಜುಲೈ 19, 1969**

ಅಪಾಯ ಅಲ್ಲಿದೆ.

ಆದರೆ ಆಂತರಿಕ ಅಸ್ತವ್ಯಸ್ತತೆ ... ಅದಾಗಲೇ ಬಹುಮಟ್ಟಿಗೆ ಅಸ್ತಿತ್ವದಲ್ಲಿದೆ, ತಿಳಿಯಿತೆ?

ಸ್ವಾಭಾವಿಕವಾಗಿ, ಚೈನಾ ದೇಶದ ಜನರು ಅದರ ಪ್ರಯೋಜನವನ್ನು ಕೂಡಲೆ ತೆಗೆದುಕೊಳ್ಳುವ ಸಾಧ್ಯತೆ ಇದೆ.

**ಮೇ 12, 1971**

ಮನುಷ್ಯರು ಎಸಗಬಹುದಾದ ದಿಗಿಲು ಹುಟ್ಟಿಸುವ ಕಾರ್ಯಗಳಿಗೆ ಮಿತಿ–ಗಳಿವೆ, ಏಕೆಂದರೆ, ಏನೇ ಇದ್ದಾಗ್ಯೂ ಹಿಂದೆ ಇದ್ದುಕೊಂಡಿರುವ ಚೈತ್ಯ ಸತ್ತೆಯಿದೆ, ಅದು ಅವುಗಳನ್ನು ತಡೆಯುತ್ತದೆ – ಆದರೆ ಚೈನಾ ದೇಶದವರಲ್ಲಿ ಚೈತ್ಯ ಸತ್ತೆಯಿಲ್ಲ. ಮತ್ತು ಅವರು ಬಹಳ ಬುದ್ಧಿವಂತಾಗಿದ್ದಾರೆ.

**– ಶ್ರೀಮಾತೆ**

*

## ವಿವಾದದ ವಿಷಯವಾದ ತಿಬೇಟ: ಐತಿಹಾಸಿಕ ಸಂದರ್ಶನ (Jan. 18, 1973)

**ದಲಾಯಿ ಲಾಮಾ:** *ತಿಬೇಟನಲ್ಲಿ ಪರಿಪೂರ್ಣ ಆರ್ಥಿಕ ಅಭಿವೃದ್ಧಿ, ಪರಿಪೂರ್ಣ ಸಂಘಟನೆ, ಕಮ್ಯುನಿಷ್ಟ ಸಿದ್ಧಾಂತದಲ್ಲಿ ಕಂಡುಬರುವ ದಕ್ಷತೆ ಇವೆಲ್ಲ ಇರುವುದನ್ನು ಕಾಣಬೇಕೆಂಬುದು ನನ್ನ ಕನಸಾಗಿದೆ. ಆದರೆ ಇದೆಲ್ಲದಕ್ಕೆ ಆಧಾರ, ತಳಹದಿ ಬೌದ್ಧರ ಗುಣಗಳಾದ ಕರುಣೆ ಮತ್ತು ಪ್ರೇಮಗಳಾಗಿರಬೇಕು, ಅದರಿಂದಾಗಿ ಅಧಿಕಾರ–ದಲ್ಲಿರುವವರು ಭ್ರಷ್ಟರಾಗಿ ಅವನತಿ ಹೊಂದದಂತಾಗುವುದು. ಈ ಕನಸನ್ನು ಕುರಿತು ಶ್ರೀಮಾತೆಯವರ ದೃಷ್ಟಿಕೋನವೇನು? ಇಂತಹದನ್ನು ತಿಬೇಟನಲ್ಲಿ ಸಿದ್ಧಿಸಿಕೊಳ್ಳಲಾಗುವುದೆ?*

**ಶ್ರೀಮಾತೆ :** ಅದು ಕನಸಲ್ಲ. ಅದು ಸ್ವಾಭಾವಿಕವಾಗಿ ಆಗುವುದಿದೆ. ಆದರೆ ಅದಕ್ಕೆ ಎಷ್ಟುಕಾಲ ಬೇಕಾಗುತ್ತದೆಂಬುದು ನನಗೆ ತಿಳಿಯದು. ಅದು ಶ್ರೀ ಅರವಿಂದರು ಅತಿಮಾನಸ ಕುರಿತು ಹೇಳಿದ ರೀತಿಯದಾಗಿದೆ.

ಸತ್ಯ, ಪ್ರೇಮ ಮತ್ತು ಕರುಣೆ ಇವು ಹೊಸ ಸೃಷ್ಟಿಗೆ ಆಧಾರ ನೀಡುತ್ತವೆ. ಅದು ಜನ್ಮತಾಳುವಿಕೆಯಲ್ಲ, ಆದರೆ ಮಾನವರ ಮೌಲ್ಯ ಅಧಿಕಾರಕ್ಕೆ ಕೊಡಬೇಕಾದ ಹಕ್ಕಾಗಿದೆ.

ಶ್ರೀ ಅರವಿಂದರ ಬೋಧನೆ ಜಗತ್ತಿನ ಮೇಲೆಲ್ಲ ಹರಡುವಂತಾದರೆ, ಮತ್ತು ಅಲ್ಲಿ ಅತಿಮಾನಸದ ಪ್ರಕಟಣೆಯಾದರೆ, ಆಗ ಅತಿಮಾನಸವೇ ತಿಬೇಟನ್ನು ಸ್ವತಂತ್ರಗೊಳಿಸುವ ಸಾಮರ್ಥ್ಯವಾಗಿರುತ್ತದೆ.

ಅದು ಬರುವುದು ನಿಶ್ಚಿತ, ಅದು ಬರಲಿದೆ, ಆದರೆ ಅದು ಈಗ ಹೋಗುತ್ತಿರುವ ರೀತಿಯಲ್ಲಿ ಹೋಗುತ್ತಿದ್ದರೆ ಅದಕ್ಕೆ ನೂರು ವರ್ಷಗಳು ಬೇಕಾಗಬಹುದು. ಆದರೆ ಅತಿಮಾನಸ ಪ್ರಕಟವಾದರೆ ಅದು ಬೇಗನೆ ಬರಬಹುದು. ಬೇಗನೆ ಎಂದರೆ ಹತ್ತು ಅಥವಾ ಇಪ್ಪತ್ತು ವರ್ಷಗಳಲ್ಲಿ, ಆ ಅವಧಿಯಲ್ಲಿ ಅದು ಬಂದರೆ ಪವಾಡ ಸದೃಶವಾಗುವುದು.

**ಕಿರೀಟ :** *ಆದರೆ ಅತಿಮಾನಸ ಈಗ ಸಾಮರ್ಥ್ಯಪೂರ್ಣವಾಗಿ ಕಾರ್ಯಮಾಡುತ್ತಿದೆ.*

**ಶ್ರೀಮಾತೆ :** ಅದು ಕಾರ್ಯಮಾಡುತ್ತಿದೆ. ಸರಿಯಾದ ಜನರಲ್ಲಿ ಅಧಿಕಾರವಿದ್ದಾಗ ಅದು ಸಾಕಷ್ಟು ಸಾಮರ್ಥ್ಯದಿಂದ ಕಾರ್ಯಮಾಡುತ್ತದೆ.

ಸದ್ಯದ ಕ್ಷಣದಲ್ಲಿ ವಿರುದ್ಧವಾದುದು ಎಂದರೆ ಮಿಥ್ಯೆಯಾದುದು ನಾಶವಾಗು–



ವುದಕ್ಕಿಂತ ಮೊದಲು ಸಂಪೂರ್ಣ ಸಾಮರ್ಥ್ಯದೊಂದಿಗೆ ಆಕ್ರಮಣ ಮಾಡುತ್ತಿದೆ. ಹಿಂದೆ ಎಂದೆಂದಿಗೂ ಜನರು ಈಗ ಹೇಳುತ್ತಿರುವಷ್ಟು ಅಸತ್ಯವನ್ನು ನುಡಿದಿರಲಿಲ್ಲ. ಹಳೆಯ ರೂಢಿ ಸ್ವಯಂಪ್ರೇರಿತವಾಗಿ ಬರುತ್ತಿರುವಂತೆ ತೋರಿಬರುತ್ತಿದೆ, ಅದನ್ನು ಮುರಿದುಹಾಕಬೇಕು.

ನಾವು ಪೃಥ್ವಿಯ ಇತಿಹಾಸದಲ್ಲಿ ಅಸಂತೋಷಕರ ಕ್ಷಣ ಎಂದು ಕರೆಯ ಬಹುದಾದುದರಲ್ಲಿ ಇದ್ದೇವೆ. ಅದು ಸ್ವಾರಸ್ಯಕರವಾದದ್ದು, ಏಕೆಂದರೆ ಕ್ರಿಯೆ ಬಹಳ ಸಾಮರ್ಥ್ಯಪೂರ್ಣವಾಗಿದೆ, ಆದರೆ ಅದನ್ನು ಸಂತೋಷಕರವಾದದ್ದು ಎಂದು ಕರೆಯಲಾರೆ.

**ಕಿರೀಟ :** *ಹೌದು ಶ್ರೀಮಾತೆಯವರೆ, ತಾವು ಆ ಸಂದೇಶವನ್ನು ಕೊಟ್ಟಿದ್ದೀರಿ.*

**ದಲಾಯಿ ಲಾಮಾ :** *ನನ್ನನ್ನು ಕುರಿತು ಹೇಳುವುದಾದರೆ ಸರಕಾರದಲ್ಲಿ ಅಧಿಕಾರದ ಸ್ಥಾನದಲ್ಲಿರುವ ಬಯಕೆ ನನಗಿಲ್ಲ, ಏಕೆಂದರೆ ಸರಕಾರದಲ್ಲಿ ಪರಸ್ಪರರಲ್ಲಿ ಸಂಘರ್ಷ ನಡೆಸುವ ಪಕ್ಷಗಳಿರುತ್ತವೆ ಮತ್ತು ನಾನು ಯಾವುದಾದರೊಂದು ಪಕ್ಷದ ಪರವಾಗಿ ಇರಬೇಕಾಗುತ್ತದೆ.*

**ಶ್ರೀಮಾತೆ :** ಯಾವ ಪಕ್ಷದಲ್ಲಿಯೂ ಸೇರಿಕೊಳ್ಳದೆ ಆಳಿಕೆ ನಡೆಸಬಹುದು. ಹಾಗೆ ಯಾವುದಾದರೊಂದು ಪಕ್ಷದ ಪರವಾಗಿರುವ ತಪ್ಪನ್ನು ಎಲ್ಲ ಸರಕಾರಗಳೂ ಮಾಡುತ್ತವೆ. ಅದು ಅವರ ಕ್ಷಮತೆಯನ್ನು ಬಹುಮಟ್ಟಿಗೆ ಕುಗ್ಗಿಸುತ್ತದೆ.

ಆದರೆ ಮನಸ್ಸಿನಾಚೆ ಉಚ್ಚತರ ಮತ್ತು ಆಳಾತಿ ಆಳದ ಪ್ರಜ್ಞೆಯಿದೆ – ಅವರು ದೈವೀ ಪ್ರಜ್ಞೆಯೊಂದನ್ನು ಕಂಡುಕೊಳ್ಳುವರು. ಅದರಲ್ಲಿ ಮನುಷ್ಯ ತನ್ನ ಎಲ್ಲ ಕ್ಷಮತೆಗಳನ್ನು ಉಪಯೋಗಿಸಬಹುದು. ಅದು ಪ್ರಜ್ಞೆ ಸಾಕಷ್ಟು ವಿಶಾಲವಾಗಿರುವುದರ ಪ್ರಶ್ನೆಯಾಗಿರುತ್ತದೆ. ಪ್ರಜ್ಞೆ ವಿಶಾಲವಾಗಿದ್ದಾಗ ಪ್ರತಿಯೊಂದು ಕ್ಷಮತೆಯನ್ನು ಅದಕ್ಕೆ ಯೋಗ್ಯವಾದ ಸ್ಥಾನದಲ್ಲಿರಿಸಬಹುದು, ಅದರಿಂದಾಗಿ ಸರ್ವಸಾಧಾರಣ ಸಾಮರಸ್ಯವನ್ನುಂಟು ಮಾಡಲು ಸಾಧ್ಯವಾಗುವುದು.

**ದಲಾಯಿ ಲಾಮಾ :** *ಜಗತ್ತಿನ ಎಲ್ಲೆಡೆಯಲ್ಲಿ ಸದ್ಭಾವನೆ, ನಿಷ್ಕಾಪಟ್ಯಗಳಿರುವ ಜನರಿದ್ದಾರೆ, ಆದರೆ ಅಂತಹ ಜನರು ಅತಿ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಆ ಜನರಿಂದ ಜಗತ್ತಿನ ಸ್ಥಿತಿಗಳ ಮೇಲೆ ಪರಿಣಾಮ ಬೀರಲು ಸಾಧ್ಯವಾಗುವುದೆ?*

**ಶ್ರೀಮಾತೆ :** ಅದು ಖಂಡಿತವಾಗಿ ಬದಲಾಗುವುದು. ಜನರು ನಿಷ್ಕಪಟರಾಗಿದ್ದರೆ ಅದು ಕಡಿಮೆ ಸಮಯದಲ್ಲಿ, ಹೆಚ್ಚು ತೀವ್ರಗತಿಯಿಂದ ಸಾಗುವುದು.

ಮೊದಲ ಹಾಗೂ ಅತ್ಯಗತ್ಯವಾದದ್ದಾದ ಹೆಜ್ಜೆಯೆಂದರೆ ಎಲ್ಲ ಮಿಥ್ಯೆ ನಿಂತುಹೋಗುವಂತೆ ಮಾಡುವುದಾಗಿದೆ. ದೈವೀ ಸಾನ್ನಿಧ್ಯವನ್ನು ವಿರೋಧಿ–ಸುವುದೆಲ್ಲ ಮಿಥ್ಯೆಯಾಗಿರುತ್ತದೆ.

(ಕಿರೀಟ ಜೋಶಿ ಅವರ ಕೃಪೆಯಿಂದ) **– ಶ್ರೀಮಾತೆ**

*

### ಭಾರತ ಪಾಕಿಸ್ತಾನಗಳ ನಡುವೆ ಪ್ರತ್ಯೇಕತೆ ಇರಬಾರದು

ಇಂದು ಭಾರತ ಸ್ವತಂತ್ರವಾಗಿದೆ, ಆದರೆ ಏಕತೆಯನ್ನು ಸಾಧಿಸಲಾಗಿಲ್ಲ. ಹಿಂದೂ ಮುಸ್ಲಿಮರ ನಡುವಿನ ಹಳೆಯ ಜಾತೀಯ ವಿಭಜನೆ ಈಗ ದೇಶದ ಶಾಶ್ವತ ರಾಜಕೀಯ ವಿಭಜನೆಯಾಗಿದೆ. ಈ ನೆಲೆಗೊಂಡ ವಾಸ್ತವತೆಯನ್ನು ಎಲ್ಲ ಕಾಲಕ್ಕೂ ಸ್ವೀಕರಿಸಲಾಗುವುದಿಲ್ಲ ಎಂಬ ಭರವಸೆ ಹೊಂದಿರಬೇಕು. ಇದು ಅನುಕೂಲಕರ ತಾತ್ಕಾಲಿಕ ವ್ಯವಸ್ಥೆಗಿಂತ ಬೇರೇನಲ್ಲ. ಕಾರಣ ಅದು ಉಳಿದು–ಕೊಂಡರೆ ಭಾರತ ಗಂಭೀರವಾಗಿ ದುರ್ಬಲಗೊಳ್ಳುವುದು, ಊನಗೊಳ್ಳುವುದು, ಅಂತರ್ಘರ್ಷಣೆ ಯಾವಾಗಲೂ ಸಂಭವಿಸಬಹುದು. ಮತ್ತೊಮ್ಮೆ ವಿದೇಶೀಯರ ಹೊಸ ಆಕ್ರಮಣದಿಂದ ಅದು ಅವರ ವಶವಾಗಬಹುದು. ಭಾರತದ ಆಂತರಿಕ ಅಭಿವೃದ್ಧಿ ಹಾಗೂ ಸಮೃದ್ಧಿಗಳಿಗೆ ಅಡ್ಡಿಯಾಗಬಹುದು. ಜಗತ್ತಿನ ರಾಷ್ಟ್ರಗಳ ಮಧ್ಯೆ ಭಾರತದ ಸ್ಥಾನ ದುರ್ಬಲಗೊಳ್ಳಬಹುದು. ಅದರ ಅದೃಷ್ಟಕ್ಕೆ ಧಕ್ಕೆಯಾಗಬಹುದು, ನಿಷ್ಫಲತೆ ಕೂಡ ಕಂಡುಬರಬಹುದು. ಇದಾಗಕೂಡದು, ಪ್ರತ್ಯೇಕತೆ ಹೊರಟು–ಹೋಗಬೇಕು. ಶಾಂತಿ ಮತ್ತು ಹೊಂದಾಣಿಕೆ ಇವುಗಳ ಆವಶ್ಯಕತೆಯಿಂದಷ್ಟೇ ಅಲ್ಲ, ಆದರೆ ಸಾಮಾನ್ಯ ಕ್ರಿಯಾಚರಣೆಯ ಮೂಲಕ ಮತ್ತು ಆ ಉದ್ದೇಶಕ್ಕಾಗಿ ಸಾಧನಗಳನ್ನು ಸೃಷ್ಟಿಸುವುದರ ಮೂಲಕ ಏಕತೆ ಸ್ವಾಭಾವಿಕವಾಗಿ ಬರುವುದೆಂದು ಆಶಿಸೋಣ. ಈ ರೀತಿಯಾಗಿ ಏಕತೆ ಬರಬಹುದು, ಅದರ ರೂಪ ಎಂತಹದೇ ಇರಬಹುದು–ನಿಖರವಾದ ರೂಪಕ್ಕೆ ವ್ಯಾವಹಾರಿಕ ಮಹತ್ವವಿರಬಹುದು, ಆದರೆ ಮೂಲಭೂತ ಮಹತ್ವವಿರುವುದಿಲ್ಲ. ಯಾವುದೇ ಸಾಧನದ ಮೂಲಕ, ಯಾವುದೇ ರೀತಿಯಲ್ಲಿ ಪ್ರತ್ಯೇಕತೆ ಹೊರಟು ಹೋಗಬೇಕು, ಏಕತೆಯನ್ನು ಸಿದ್ಧಿಸಿಕೊಳ್ಳಬೇಕು, ಏಕೆಂದರೆ ಭಾರತದ ಭವಿಷ್ಯತ್ತಿನ ಶ್ರೇಷ್ಠತೆಗಾಗಿ ಅದು ಅವಶ್ಯವಾಗಿದೆ.

**(36/478–79)** **– ಶ್ರೀ ಅರವಿಂದರು**

ಹಿಂದು–ಮುಸ್ಲಿಮರ ಏಕತೆಯ ಅರ್ಥ ಹಿಂದೂಗಳು ಅಧೀನತೆಗೆ ಒಳಗಾಗುವುದಲ್ಲ. ಪ್ರತಿಯೊಂದು ಸಲ ಹಿಂದೂಗಳ ಮೃದುತ್ವ ಇತರರಿಗೆ ದಾರಿ



ಮಾಡಿಕೊಟ್ಟಿದೆ. ಅತ್ಯಂತ ಒಳ್ಳೆಯ ಪರಿಹಾರವೆಂದರೆ ಹಿಂದೂಗಳು ತಮ್ಮಲ್ಲಿಯೇ ಸಂಘಟಿತರಾಗುವುದಕ್ಕೆ ಅನುವು ಮಾಡಿಕೊಡಬೇಕು ಮತ್ತು ಹಿಂದು–ಮುಸ್ಲಿಮ ಏಕತೆ ತನ್ನ ಕಾಳಜಿ ತಾನೇ ತೆಗೆದುಕೊಳ್ಳುವುದು, ಅದು ಸ್ವಯಂಚಾಲಿತವಾಗಿ ಸಮಸ್ಯೆಯನ್ನು ಬಗೆಹರಿಸುವುದು.

(ಔಪಚಾರಿಕ ಮಾತುಕತೆ) **– ಶ್ರೀ ಅರವಿಂದರು** (June 21, 1940)

ಕಾಶ್ಮೀರದಲ್ಲಿ ಹಿಂದುಗಳದೇ ಏಕಸ್ವಾಮ್ಯವಿತ್ತು. ಈಗ ಮುಸ್ಲಿಮರ ಒತ್ತಾಯದ ಬೇಡಿಕೆಗಳನ್ನು ಒಪ್ಪಿಕೊಂಡರೆ ಹಿಂದೂಗಳು ಅಲ್ಲಿ ಇಲ್ಲದಂತಾಗುವರು.

(ಔಪಚಾರಿಕ ಮಾತುಕತೆ) **– ಶ್ರೀ ಅರವಿಂದರು** (ಜೂನ 21, 1940)

*

### ಏಶಿಯಾ ಖಂಡಕ್ಕೆ ಒಕ್ಕೂಟ (Federation) ದ ಆವಶ್ಯಕತೆ

**(ಸಪ್ಟಂಬರ 21, 1966)**

ಅತ್ಯಂತ ಮೊಂಡುತನದ್ದೆಂದು ಸಿದ್ಧವಾಗುತ್ತಿರುವುದು ಯಾವುದೆಂದರೆ (ಅದರ ವಿಧಿವಿಡಂಬನ (irony) ಅದ್ಭುತವಾಗಿದೆ) ಅದು ಯುನೈಟೆಡ್ ನೇಶನ್ಸ್ (ಸಂಯುಕ್ತ ರಾಷ್ಟ್ರ ಸಂಸ್ಥೆ), ಅದರಲ್ಲಿರುವವರು ಗತಕಾಲಕ್ಕೆ ಸೇರಿದವರಾಗಿದ್ದಾರೆ. ಅವರು "ಪ್ರಾಪಂಚಿಕ, ಧರ್ಮವಿರೋಧಿ ಚಲನೆ"ಗಳಾಚೆ ಇನ್ನೂ ಹೋಗಿಲ್ಲ, ಅರೋವಿಲೆ ಕುರಿತು ಪ್ರಕಟವಾದ ಕಿರುಹೊತ್ತಿಗೆಯನ್ನು ಕುರಿತು ಅದು "ಅತೀಂದ್ರಿಯ" (mystic) ಮತ್ತು "ಧಾರ್ಮಿಕ" ಪ್ರವೃತ್ತಿಯದಾಗಿದೆ ಎಂದು ಅನುಚಿತ ಟೀಕೆ ಮಾಡಿದ್ದಾರೆ. ಆ ವಿಧಿವಿಡಂಬನೆ ಸೊಗಸಾಗಿದೆ.

ಅಲ್ಲದೆ ಬಹಳ ಬಹಿರಂಗವಾಗಿಯೂ ಕೂಡ ಭಾರತ ಮತ್ತು ಪಾಕಿಸ್ತಾನ ಇವುಗಳ ನಡುವಿರುವ ಹೋರಾಟ ಸ್ಪಷ್ಟವಾಗಿ ... (ಅದನ್ನು ನಾನು ಹೇಗೆ ಹೇಳಲಿ, ನನ್ನ ಬಾಯಲ್ಲಿ ಬರುತ್ತಿರುವ ಶಬ್ದಗಳು ಇಂಗ್ಲೀಷ ಭಾಷೆಯಲ್ಲಿವೆ) ದೈವೀ ಸತ್ಯದ ಶಕ್ತಿಗಳಿಂದ, ಪ್ರಚೋದನೆಯಿಂದ ಪ್ರಾರಂಭವಾಗಿತ್ತು, ಮುಂದುವರಿದುಕೊಂಡು ಹೋಗುತ್ತಿತ್ತು. ಆ ದೈವೀ ಸತ್ಯಕ್ಕೆ ಕೆಂಪು ಚೈನಾ ಹಾಗೂ ಅದರ ಚಲನೆಯ ವಿರುದ್ಧ ಸಮಭಾರ ಹಾಕುವ ಶ್ರೇಷ್ಠ ಏಶಿಯಾದ ಒಕ್ಕೂಟ (Asia Federation) ಸೃಷ್ಟಿಸುವುದು ಬೇಕಾಗಿತ್ತು. ಆ ಒಕ್ಕೂಟದಲ್ಲಿ, ವಾಸ್ತವವಾಗಿ, ಪಾಕಿಸ್ತಾನ ಮತ್ತು ಅದರ ಸುತ್ತಲಿರುವ ನೇಪಾಳ, ತಿಬೇಟ, ಬರ್ಮಾ ದೇಶಗಳು, ದಕ್ಷಿಣದಲ್ಲಿರುವ ಸಿಲೋನ ಇವೆಲ್ಲವುಗಳನ್ನು ಕೂಡಿಕೊಂಡಿರಬೇಕಾಗಿತ್ತು, ಪ್ರತಿಯೊಂದು ದೇಶ ಸ್ವಯಮಾಧಿಕಾರ ಹೊಂದಿರುವಂತಹದು, ಅಭಿವೃದ್ಧಿಪಡಿಸಿಕೊಳ್ಳುವಂತಹದು,

ಪರಿಪೂರ್ಣವಾಗಿ ಸ್ವತಂತ್ರವಾದದ್ದು ಆಗಿದ್ದುಕೊಂಡು ವಿನಾಶಕಾರಿ ಶಕ್ತಿಗಳ ಆಕ್ರಮಣದ ವಿರುದ್ಧ ಶಾಂತಿಯನ್ನುಳಿಸಿಕೊಳ್ಳಲು ಏಕೈಕ ಅಭೀಪ್ಸೆಯನ್ನಿಟ್ಟುಕೊಂಡು ಹೋರಾಡುವುದಾಗಿತ್ತು. ಅದು ಸ್ಪಷ್ಟವಾಗಿತ್ತು, ಅದಕ್ಕಾಗಿ ಸಂಕಲ್ಪ ಮಾಡಲಾಗಿತ್ತು – ಈ ಸಂಯುಕ್ತ ರಾಷ್ಟ್ರ ಸಂಘದ ಹಸ್ತಕ್ಷೇಪ ಪ್ರತಿಯೊಂದನ್ನು ನಿಲ್ಲಿಸಿಬಿಟ್ಟಿತು.

(Agenda ದಿಂದ) **– ಶ್ರೀಮಾತೆ**

*

## ಭಾರತದಲ್ಲಿ ಪುನರುಜ್ಜೀವನ
### ಭಾರತ ಯುರೋಪಿನ ಹೆಜ್ಜೆಗಳನ್ನು ಅನುಸರಿಸಿದರೆ

ಆಧುನಿಕ ರಾಜಕೀಯದ ವಾತಾವರಣ ಅಪನಂಬಿಕೆಯದಾಗಿದೆ, ಪರಸ್ಪರರಲ್ಲಿ ಸಂಶಯ ಮತ್ತು ದ್ವೇಷ ಕ್ರಿಯೆಯ ರಹಸ್ಯ ಕಾರಂಜಿಯಾಗಿದೆ. ಅದರ ಲೌಕಿಕ ನಾಗರಿಕತೆಯ ಸುಂದರ ಬಾಹ್ಯ ತೋರಿಕೆಯ ಕೆಳಗೆ ಆಳವಾಗಿ ಬೇರುಬಿಟ್ಟ ನೈತಿಕ ರೋಗ ಕಾರ್ಯನಿರತವಾಗಿದೆ, ಅದು ಯುರೋಪಿನ ಮರ್ಮಸ್ಥಾನಗಳನ್ನು ತಿಂದು ಹಾಕುತ್ತಿದೆ, ಅದರ ಸಾವಿರಾರು ರೋಗ ಲಕ್ಷಣಗಳು ಕಣ್ಣಿಗೆ ಬೀಳುತ್ತಿವೆ. ...

ಭಾರತ ಯುರೋಪಿನ ಹೆಜ್ಜೆಗಳನ್ನು ಅನುಸರಿಸಿದರೆ, ಅದರ ರಾಜಕೀಯ, ಸಾಮಾಜಿಕ ಪದ್ಧತಿಯ ಆದರ್ಶಗಳನ್ನು ಸ್ವೀಕರಿಸಿದರೆ ಅದರ ಮೇಲೆ ಅವೇ ರೋಗಗಳು ಆಕ್ರಮಣ ಮಾಡುತ್ತವೆ. ಅಂತಹ ಪರಾಕಾಷ್ಠೆ ಭಾರತಕ್ಕೂ ಒಳ್ಳೆಯದಲ್ಲ, ಯುರೋಪಿಗೂ ಒಳ್ಳೆಯದಲ್ಲ. ಭಾರತ ಯುರೋಪಿನ ಬೌದ್ಧಿಕ ಪ್ರಾಂತವಾದರೆ, ಅದು ತನ್ನ ಸ್ವಾಭಾವಿಕ ಶ್ರೇಷ್ಠತೆಯನ್ನು ಎಂದಿಗೂ ಸಿದ್ಧಿಸಿಕೊಳ್ಳುವುದಿಲ್ಲ, ಇಲ್ಲವೆ ತನ್ನಲ್ಲಿರುವ ಸಾಧ್ಯತೆಗಳ ನೆರವೇರಿಕೆ ಕಂಡುಕೊಳ್ಳುವುದಿಲ್ಲ. "ಪರಧರ್ಮೋ ಭಯಾವಹಃ" ಇನ್ನೊಬ್ಬರ ಧರ್ಮವನ್ನು ಸ್ವೀಕರಿಸುವುದು ಅಪಾಯಕಾರಿ–ಯಾದದ್ದು, ಅದು ಮನುಷ್ಯನ ಇಲ್ಲವೆ ದೇಶದ ರಹಸ್ಯ ಜೀವನವನ್ನು ಮತ್ತು ಜೀವನೋತ್ಸಾಹವನ್ನು ಅಪಹರಿಸುತ್ತದೆ ಮತ್ತು ಸ್ವಾಭಾವಿಕವಲ್ಲದ, ಕುಂಠಿತ ಬೆಳವಣಿಗೆಯನ್ನು ಪ್ರಕೃತಿಯ ಮುಕ್ತ, ವಿಶಾಲವಾದ ಹಾಗೂ ಸುಸಂಘಟಿತ ಅಭಿವೃದ್ಧಿಯ ಸ್ಥಾನದಲ್ಲಿರಿಸುತ್ತದೆ. ದೇಶವೊಂದು ತನ್ನ ಅಸ್ತಿತ್ವದ ಉದ್ದೇಶವನ್ನು ಕೈಬಿಟ್ಟಾಗ ಅದರ ಬೆಳವಣಿಗೆಗೆ ನಷ್ಟವಾಗಿರುತ್ತದೆ. ಭಾರತ, ತನ್ನ ಅದೃಷ್ಟದ ನೆರವೇರಿಕೆ ಕಂಡುಕೊಳ್ಳಬೇಕಾದರೆ ಅದು ಭಾರತವಾಗಿಯೇ ಉಳಿಯಬೇಕು.

**(7/1039–41)** **– ಶ್ರೀ ಅರವಿಂದರು**

*



## ಭಾರತದ ಪುನರುಜ್ಜೀವನದ ಮೂರು ಹಂತಗಳು

ಈಗ ಅನಿವಾರ್ಯವೆನಿಸಿರುವ ಪುನರುಜ್ಜೀವನಕ್ಕೆ ಕಾರಣವಾಗಿರುವ ಕಾರ್ಯ ವಿಧಾನವನ್ನು ಚಾರಿತ್ರಿಕ ದೃಷ್ಟಿಯಿಂದಲೂ, ತಾರ್ಕಿಕ ದೃಷ್ಟಿಯಿಂದಲೂ ಮೂರು ಹಂತಗಳಲ್ಲಿ ವಿಶ್ಲೇಷಿಸಬಹುದು. ಈ ಮೂರು ಹಂತಗಳೆಂದರೆ ಸಂಕೀರ್ಣ ರೀತಿಯಲ್ಲಿ ಒಡೆಯುವಿಕೆ, ಪುನರೂಪಣ ಹಾಗೂ ಪುನರ್ನಿರ್ಮಾಣ, ಇವುಗಳ ಮೂಲಕ ಬದಲಾವಣೆಯನ್ನು ನಿರ್ವಹಿಸಬಹುದು. ಅಲ್ಲೊಂದು ಕಡೆ, ಇಲ್ಲೊಂದು ಕಡೆ ಈ ಕಾರ್ಯದ ಮೊದಲ ತಳಹದಿಗಳನ್ನು ಈಗಾಗಲೆ ಹಾಕಿರಬಹುದಾದರೂ ಕೊನೆಯ ಫಲ – ರೂಪಾಂತರಿತವಾದ ಒಂದು ಪ್ರಾಚೀನ ಸಂಸ್ಕೃತಿಯ ನವಯುಗ, ಹಳೆಯ ಮೃತ ನಾಗರಿಕತೆಯನ್ನು ಅಂಗವಾಗಿರಿಸಿಕೊಳ್ಳುವುದಲ್ಲ, ನಿಜವಾದ ನವಜನ್ಮ, ಪುನರುಜ್ಜೀವನ – ಇನ್ನೂ ಬಹಳ ದೂರದಲ್ಲಿದೆ. ಯುರೋಪಿನ ಸಂಪರ್ಕವನ್ನು ಸ್ವೀಕರಿಸುವುದು, ಪ್ರಾಚೀನ ಸಂಸ್ಕೃತಿಯ ಹಲವಾರು ಪ್ರಧಾನ ತತ್ವಗಳ ಆಮೂಲಾಗ್ರ ಪುನರ್ವಿವೇಚನೆ, ಮತ್ತು ಆ ತತ್ವಗಳನ್ನು ಕ್ರಾಂತಿಕಾರಕವಾಗಿ ನಿರಾಕರಿಸುವುದು – ಇದೇ ಮೊದಲ ಹಂತ. ಯುರೋಪಿನ ಸಂಪರ್ಕಕ್ಕೆ ಭಾರತೀಯ ಮನೋಧರ್ಮದ ಪ್ರತಿಕ್ರಿಯೆ, ಕೆಲವೊಮ್ಮೆ ಅದರ ಕೊಡುಗೆಯ ಪೂರ್ಣ ನಿರಾಕರಣ, ಇನ್ನೂ ಜೀರ್ಣಿಸಿಕೊಳ್ಳುವುದರ ಮುಖವಾಡದ ಹಿಂದಿರಿಸಿರುವ ರಾಷ್ಟ್ರದ ಗತಕಾಲದ ಸಾರಭೂತವಾದ ಮತ್ತು ಕಟ್ಟುನಿಟ್ಟಿನ ಶಬ್ದದ ಮೇಲೆ ಒತ್ತುಕೊಡುವಿಕೆ – ಇದು ಎರಡನೆಯ ಹಂತ. ಇದರ ಮೂರನೆಯ ಹಂತ ಇದೀಗ ಪ್ರಾರಂಭವಾಗತೊಡಗಿದೆ ಇಲ್ಲವೆ ಇತ್ತೀಚೆಗೆ ಪ್ರಾರಂಭವಾಗಿದೆ, ಇದು ನವಸೃಷ್ಟಿಯ ಕಾರ್ಯವಿಧಾನ, ಇದರಲ್ಲಿ ಭಾರತೀಯ ಮಾನಸದ ಆಧ್ಯಾತ್ಮಿಕ ಶಕ್ತಿಯು ಮಹೋನ್ನತವಾಗಿ ಉಳಿಯುತ್ತದೆ, ತನ್ನ ಸತ್ಯಗಳನ್ನು ಮತ್ತೊಮ್ಮೆ ಗಳಿಸಿಕೊಳ್ಳುತ್ತದೆ, ಆಧುನಿಕ ವಿಚಾರಧಾರೆಯಲ್ಲಾಗಲಿ, ಬಾಹ್ಯ ವಿಧಿವಿಧಾನಗಳಲ್ಲಾಗಲಿ ಸತ್ಯವಾದದ್ದನ್ನು, ಪ್ರಯೋಜನಕಾರಿಯಾದದ್ದನ್ನು, ಅನಿವಾರ್ಯವಾದದ್ದೆಂದು ಕಂಡುಬರುವ ಯಾವುದೇ ಅಂಶವನ್ನು ಸ್ವೀಕರಿಸುತ್ತದೆ. ಆದರೆ ಹಾಗೆ ಸ್ವೀಕರಿಸುವಾಗ, ಆಧುನಿಕ ಪ್ರಭಾವಕ್ಕೆ ವಶವಾಗದೆ ಇಲ್ಲವೆ ಅದರಿಂದ ಪರಾಜಿತವಾಗದೆ, ಅದರ ಮೇಲೆ ತನ್ನದೇ ಪ್ರಭುತ್ವ ಸಾಧಿಸಿ ಅದನ್ನು ಸ್ವಾಧೀನಪಡಿಸಿಕೊಳ್ಳುತ್ತದೆ, ಆ ಆಧುನಿಕ ವಿಚಾರದ ವಿದೇಶೀಯ ಗುಣವು ಮಾಯವಾಗಿ ಅದು ಪುರಾತನ ಭಾರತದ ಶಕ್ತಿದೇವತೆಯ ವಿಶಿಷ್ಟ ಕಾರ್ಯ ರೀತಿಯ ಇನ್ನೊಂದು ಸಮಂಜಸ ತತ್ವವಾಗುವಂತೆ ಅದನ್ನು ಪರಿವರ್ತಿಸಿ, ಅದಕ್ಕೆ ಭಾರತೀಯ ರೂಪ ಕೊಡುತ್ತದೆ, ಹಾಗಾಗುವಂತೆ ಅದಕ್ಕೆ ರೂಪ ಕೊಡುತ್ತದೆ,

ಅದನ್ನು ಹೀರಿಕೊಳ್ಳುತ್ತದೆ ಮತ್ತು ಪೂರ್ತಿಯಾಗಿ ತನ್ನ ರೂಪಕ್ಕೆ ಮಾರ್ಪಡಿಸಿಕೊಳ್ಳುತ್ತದೆ.

**(20/17)** – ಶ್ರೀ ಅರವಿಂದರು

*

## ಸರಿಯಾದ ಉಪಾಯ

ಭಾರತ ಸ್ವ–ಸ್ವರೂಪದಲ್ಲಿದ್ದುಕೊಂಡು, ತನ್ನದೇ ಸ್ವಭಾವದ ನಿಯಮವನ್ನು ಅನುಸರಿಸಿಕೊಂಡಿರುವುದು ತನ್ನನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಮತ್ತು ಮಾನವ ಕುಲಕ್ಕೆ ಸೇವೆ ಸಲ್ಲಿಸುವುದಕ್ಕೆ ಅತ್ಯಂತ ಉತ್ತಮವಾಗಿರುತ್ತದೆ. ಇದರರ್ಥ ಕೆಲವರು ಸಂಕುಚಿತ ದೃಷ್ಟಿಯಿಂದ ಮುಂದಾಲೋಚನೆಯಿಲ್ಲದೆ ಭಾವಿಸುವಂತೆ ಕಾಲಪ್ರವಾಹದಲ್ಲಿ ನಮ್ಮತ್ತ ಬರುವ ಹೊಸದೆಲ್ಲವನ್ನು ಇಲ್ಲವೆ ಯಾವುದನ್ನು ಪಾಶ್ಚಾತ್ಯರು ಅಭಿವೃದ್ಧಿಪಡಿಸಿದ್ದಾಗಿರುತ್ತದೆಯೋ ಇಲ್ಲವೆ ಸಾಮರ್ಥ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿರುತ್ತದೆಯೋ ಅಂತಹದನ್ನು ತಿರಸ್ಕರಿಸುವುದಲ್ಲ. ಅಂತಹ ಮನೋಭಾವ ಬೌದ್ಧಿಕವಾಗಿ ಅಸಂಗತ, ಭೌತಿಕವಾಗಿ ಅಸಾಧ್ಯ, ಎಲ್ಲದಕ್ಕಿಂತಲೂ ಹೆಚ್ಚಾಗಿ ಆಧ್ಯಾತ್ಮಿಕವಲ್ಲದ್ದಾಗಿರುತ್ತದೆ. ನಿಜವಾದ ಆಧ್ಯಾತ್ಮಿಕತೆ ಯಾವ ಹೊಸ ಪ್ರಕಾಶವನ್ನೂ ತಿರಸ್ಕರಿಸುವುದಿಲ್ಲ, ನಮ್ಮ ಮಾನಸಿಕ ಸ್ವ–ಅಭಿವೃದ್ಧಿಗಾಗಿ ನೆರವಾಗುವ ಯಾವ ಅಧಿಕ ಸಾಧನೋಪಾಯವನ್ನಾಗಲಿ, ಸಾಮಗ್ರಿಗಳನ್ನಾಗಲಿ ತಿರಸ್ಕರಿಸುವುದಿಲ್ಲ. ನಮ್ಮ ಕೇಂದ್ರವನ್ನು, ನಾವು ಸಾರಭೂತವಾಗಿ ಇರುವುದನ್ನು, ನಮ್ಮ ಅಂತರ್ಜಾತ ಸ್ವಭಾವವನ್ನು ಕಾಪಾಡಿಕೊಂಡು ಬರಬೇಕು, ನಾವು ಸ್ವೀಕರಿಸುವುದನ್ನೆಲ್ಲ ಅದರಲ್ಲಿ ಅರಗಿಸಬೇಕು ಮತ್ತು ಅದರೊಳಗಿಂದ ನಾವು ಕೈಕೊಳ್ಳುವುದನ್ನು ಮತ್ತು ಸೃಷ್ಟಿಸುವುದನ್ನು ವಿಕಾಸಪಡಿಸಬೇಕು ಎಂಬುದು ಅದರ ಸರಳ ಅರ್ಥವಾಗಿರುತ್ತದೆ. ...

... 'ಧರ್ಮ'ಕ್ಕೆ ಆಧ್ಯಾತ್ಮಿಕ ಪ್ರೇರಣೆಯನ್ನು ಪೂರ್ಣರೂಪದಲ್ಲಿ ಅನುಸರಿಸುವುದು ಎಂಬ ಅರ್ಥಕೊಡುವುದಾದರೆ, ದಿವ್ಯಾತ್ಮವಾದ ಅತ್ಯುಚ್ಚ ಸತ್ತೆಯನ್ನು, ಎಲ್ಲವನ್ನೂ ಅಪ್ಪಿಕೊಳ್ಳುವ ಏಕತೆಯನ್ನು ಅರಿತುಕೊಂಡು ಅದರಲ್ಲಿ ಜೀವಿಸುತ್ತ ಜೀವನದ ಸರ್ವಾಂಗಗಳನ್ನು ಪರಮ ದಿವ್ಯ ಮೌಲ್ಯಗಳಿಗೇರಿಸುವ ಪ್ರಯತ್ನ ವಿಶೇಷವೆಂದು ಆಧ್ಯಾತ್ಮಿಕತೆಗೆ ವ್ಯಾಖ್ಯೆ ಕೊಡುವುದಾದರೆ, ನಮ್ಮಲ್ಲಿ ಮಿತಿಮೀರಿದ ಧರ್ಮವಿರಲಿಲ್ಲವೆಂದೂ, ಬದಲಾಗಿ ಧರ್ಮಾಂಶವು ಅತ್ಯಲ್ಪವಾಗಿತ್ತೆಂದೂ – ಇದ್ದ ಧರ್ಮಪ್ರವೃತ್ತಿಯಾದರೂ ಏಕಮುಖವಾಗಿತ್ತೆಂದೂ,



ಆದುದರಿಂದ ಸಾಕಷ್ಟು ಯಥೇಷ್ಟವಾದ ಪ್ರವೃತ್ತಿಯಾಗಿರಲಿಲ್ಲವೆಂದೂ – ಸ್ಪಷ್ಟವಾಗುವುದು. ಯುಗಯುಗಾಂತರಗಳಿಂದ ಬಂದ ಭಾರತೀಯ ಆದರ್ಶವನ್ನು ಇನ್ನಷ್ಟು ಕಡೆಗಣಿಸುವುದು ಈ ಕೊರತೆಗೆ ಪರಿಹಾರವಲ್ಲ. ಅದರ ಗತ ವೈಶಾಲ್ಯವನ್ನು ಮರಳಿ ಸಾಧಿಸಿ, ಅದಕ್ಕೆ ಇನ್ನಷ್ಟು ವಿಶಾಲ ವ್ಯಾಪ್ತಿಯನ್ನು ಕೊಡುವುದು, ದೇಶದ ಸಮಗ್ರ ಜೀವನವನ್ನು ಮಹೋದಾತ್ತವಾದ ಆಧ್ಯಾತ್ಮಿಕ ಅರ್ಥದಲ್ಲಿ ನಿಜಕ್ಕೂ ಧರ್ಮಮಯವನ್ನಾಗಿ ಮಾಡುವುದು ಈ ಕೊರತೆಗೆ ಪರಿಹಾರ. ಪಾಶ್ಚಾತ್ಯ ತತ್ವಶಾಸ್ತ್ರ, ಕಾವ್ಯ, ಕಲೆಗಳು ಈಗಲೂ ಹೆಚ್ಚುಕಡಿಮೆ, ಮಸಕು ಮಸಕಾಗಿ, ಆದರೆ ಹೆಚ್ಚುತ್ತಿರುವ ಪ್ರಕಾಶದೊಂದಿಗೆ ಮರಳತೊಡಗಿರುವುದರಿಂದ ಈ ದಿಶೆಯಲ್ಲಿ ರಾಜಕೀಯ, ಸಾಮಾಜಿಕ ಆದರ್ಶಗಳ ಮೇಲೆ ಈ ತತ್ವದ ಅಷ್ಟಿಷ್ಟು ಮಂದಕಾಂತಿ ಮಿನುಗತೊಡಗಿದೆ. ಈ ಆದರ್ಶದ ಜ್ಞಾನ ಹಾಗೂ ಪ್ರಜ್ಞಾಪೂರ್ವಕ ಅನ್ವಯಗಳಿಗೆ ಭಾರತದ ಹತ್ತಿರ ಬೀಗದ ಕೈ ಇದೆ. ಆಚರಣೆಯ ವಿಷಯದಲ್ಲಿ ಹಿಂದೆ ಯಾವುದು ಅಂಧಕಾರಮಯವಾಗಿತ್ತೋ ಅದನ್ನು ಭಾರತ ಈಗ ಹೊಸ ಪ್ರಕಾಶದಲ್ಲಿ ಬೆಳಗಬಲ್ಲದ್ದಾಗಿದೆ, ತನ್ನ ಹಳೆಯ ವಿಧಿವಿಧಾನಗಳಲ್ಲಿ ಯಾವುದು ತಪ್ಪಾಗಿತ್ತೋ, ವಕ್ರವಾಗಿತ್ತೋ ಅದನ್ನೆಲ್ಲ ಭಾರತ ಈಗ ಸರಿಪಡಿಸಿಕೊಳ್ಳಬಹುದಾಗಿದೆ. ಆಧ್ಯಾತ್ಮಿಕಾದರ್ಶದ ಬಾಹ್ಯ ವಿಕಾಸದ ಸಂರಕ್ಷಣೆಗಾಗಿ ಅದು ಸೃಜಿಸಿದ ಯಾವ ಬೇಲಿಗಳು ತದನಂತರ ಅದರ ವಿಸ್ತರಣಕ್ಕೂ, ಹೆಚ್ಚು ಹೆಚ್ಚಿನ ಪ್ರಯೋಗಕ್ಕೂ ವಿಘ್ನಗಳಾಗಿ ಪರಿಣಮಿಸಿದವೋ, ಆ ಬೇಲಿಗಳನ್ನು ಭಾರತ ಮುರಿದು ಹಾಕಿ ತನ್ನ ಆತ್ಮಕ್ಕೆ ಹೆಚ್ಚು ಮುಕ್ತವಾದ ಕಾರ್ಯಕ್ಷೇತ್ರವನ್ನೂ, ಇನ್ನಷ್ಟು ವಿಶಾಲವಾದ ವಿಚಾರ ಸ್ವಾತಂತ್ರ್ಯವನ್ನೂ ನೀಡಬಲ್ಲದಾಗಿದೆ. ಯಾವ ಸಮಸ್ಯೆಗಳ ಪರಿಹಾರಕ್ಕಾಗಿ ಸಮಸ್ತ ಮಾನವ ಕುಲ ಶ್ರಮಿಸುತ್ತಿದೆಯೋ, ಎಡವಿಬೀಳುತ್ತಿದೆಯೋ, ಅವುಗಳಿಗೆ ಭಾರತ, ಇಷ್ಟಪಟ್ಟರೆ, ನಿರ್ಣಾಯಕವಾದ ಹೊಸ ತಿರುವೊಂದನ್ನು ನೀಡಬಲ್ಲದಾಗಿದೆ, ಏಕೆಂದರೆ ಇವೆಲ್ಲ ಸಮಸ್ಯೆಗಳಿಗೆ ಪರಿಹಾರದ ರಹಸ್ಯವು ಭಾರತದ ಪುರಾತನ ಜ್ಞಾನರಾಶಿಯಲ್ಲಿ ಅಡಕವಾಗಿದೆ.

**(20/38–40)** – ಶ್ರೀ ಅರವಿಂದರು

ಒಂದು ವಿಷಯ ನಿಶ್ಚಿತವೆಂದು ತೋರಿಬರುತ್ತದೆ, ಅದೆಂದರೆ ಭಾರತದ ಭವಿಷ್ಯತ್ತಿನಲ್ಲಿ, ಅದರ ಗತಕಾಲದಲ್ಲಿದ್ದ ಹಾಗೆ, ಆಧ್ಯಾತ್ಮಿಕ ಪ್ರೇರಣೆ ನಿಜವಾಗಿ ಸೃಷ್ಟಿಶೀಲವಾದದ್ದು, ಪ್ರಬಲವಾದದ್ದು ಆಗಲಿದೆ ಎಂಬುದು.

**(20/23)** – ಶ್ರೀ ಅರವಿಂದರು

*

## ಭಾರತ ಮತ್ತು ಹೊರಹೊಮ್ಮುತ್ತಿರುವ ಜಾಗತಿಕ ಸಂಸ್ಕೃತಿ
## ಸಂಸ್ಕೃತಿಗಳ ಒಂದುಗೂಡುವಿಕೆ

ಜಗತ್ತಿನ ಸದ್ಯದ ಯುಗ ಅಗಾಧ ಪರಿವರ್ತನೆಗಳಿರುವ ಹಂತವಾಗಿದೆ. ... ಪ್ರಾಚ್ಯ ದೇಶಗಳ ಹೃದಯವಾದ ಭಾರತ ಪಾಶ್ಚಿಮಾತ್ಯ ದೇಶಗಳು ಮತ್ತು ಪೌರ್ವಾತ್ಯ ದೇಶಗಳು ಬದಲಾಗುತ್ತಿರುವ ರೀತಿಯಲ್ಲಿ ಬದಲಾಗಬೇಕಾಗಿದೆ ಮತ್ತು ಯುರೋಪ ದೇಶ ತನ್ನ ಮೇಲೆ ಒತ್ತಾಯದಿಂದ ತರುತ್ತಿರುವ ಸಮಸ್ಯೆಗಳ ಅರ್ಥದಲ್ಲಿ ಬದಲಾಗುವುದನ್ನು ಅದು ತಪ್ಪಿಸಿಕೊಳ್ಳಲಾರದು. ಹೊಸ ಪೌರ್ವಾತ್ಯ ಅವಶ್ಯವಾಗಿ ಒಂದು ಬಗೆಯ ಸಮತೋಲನ ಮತ್ತು ಒಂದುಗೂಡುವಿಕೆಗಳ ಪರಿಣಾಮ ಇಲ್ಲವೆ ಪ್ರಗತಿಪರ ಮತ್ತು ಸಾಂಪ್ರದಾಯಿಕ ಆದರ್ಶಗಳು ಮತ್ತು ಪ್ರವೃತ್ತಿಗಳು ಇವುಗಳ ನಡುವಿರುವ ಒಂದು ಬಗೆಯ ಉತ್ಸಾಹಿ ಹೋರಾಟದ ಪರಿಣಾಮವಾಗಿರಬೇಕು. ಆದ್ದರಿಂದ ಈ ದೇಶದ ಸಾಂಪ್ರದಾಯಿಕ ಮನಸ್ಸು ಪರಿವರ್ತನೆಯ ಆವಶ್ಯಕತೆಗೆ ತನ್ನನ್ನು ಸಾಕಷ್ಟು ತೆರೆದಿಟ್ಟುಕೊಂಡರೆ ಪುನರುಜ್ಜೀವನ ಪಡೆದ ಭಾರತದಿಂದ ಪರಿಣಾಮವಾಗಿ ಜನ್ಮ ತಳೆದ ಸಂಸ್ಕೃತಿ ಜಗತ್ತಿನ ಭವಿಷ್ಯತ್ತಿನ ನಾಗರಿಕತೆಯಲ್ಲಿ ಗಾಢ ಮಾರ್ಪಾಡನ್ನು ತಂದುಕೊಡಬಹುದು. ಆದರೆ ಅದು ಮೃತ ಕಟ್ಟುಕತೆಗಳಲ್ಲಿ ತನ್ನನ್ನು ಮುಚ್ಚಿಹಾಕಿಕೊಂಡಿದ್ದರೆ ಇಲ್ಲವೆ ಹೊಸ ಆವಶ್ಯಕತೆಗಳನ್ನು ಉಪಾಧ್ಯಾಯನ ಇಲ್ಲವೆ ವಿದ್ಯಾವ್ಯಾಪಾರಿ (sophist)ಯ ಮನಸ್ಸಿನಿಂದ ವಾಸ್ತವಿಕ ಸಂಗತಿ, ಸತ್ಯ, ಸಂಭಾವ್ಯತೆ ಇವುಗಳಿಗಿಂತಲೂ ಹೆಚ್ಚಾಗಿ ಗಾಳಿಯಲ್ಲಿ ಹಾರಾಡುವ ಶಬ್ದಗಳು ಹಾಗೂ ವಿಚಾರಗಳ ಮೂಲಕ ವ್ಯವಹರಿಸುವ ರೀತಿಯಲ್ಲಿ ಎದುರಿಸಲು ಪ್ರಯತ್ನಿಸಿದರೆ ಇಲ್ಲವೆ ಅತ್ಯಲ್ಪ ಬದಲಾವಣೆಯನ್ನು ಹೊರತು ಪಡಿಸಿ ಉಳಿದೆಲ್ಲ ಬದಲಾವಣೆಯನ್ನು ತಪ್ಪಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದರೆ, ಆಗ ಹೊಸ ವಿಚಾರಗಳು ತಮ್ಮನ್ನು ಸಿದ್ಧಿಸಿಕೊಳ್ಳುವುದರಲ್ಲಿ ವಿಫಲವಾಗದೆ ಇರುವುದರಿಂದ, ಸೃಜನಾತ್ಮಕ ವಿಚಾರಗಳಿಲ್ಲದೆ ಬರಿದಾದ, ಪ್ರಾಣಿಕ ಅನುಭವಗಳಿಂದ ಜ್ಞಾನೋದಯ ಪಡೆದಿರದ ಪಾಶ್ಚಾತ್ತೀಕರಣಗೊಂಡ ಸಾಮಾಜಿಕ ಮತ್ತು ರಾಜಕೀಯ ಸುಧಾರಕ ಯುರೋಪಿನ ವಿಚಾರಗಳನ್ನು ಮರು ಉತ್ಪಾದನೆ ಮಾಡುವುದರ ಹೊರತಾಗಿ ಬೇರೇನನ್ನೂ ಮಾಡಲಾರ ಮತ್ತು ನಮ್ಮನ್ನೆಲ್ಲ ಪಾಶ್ಚಾತ್ಯರನ್ನು ಅನುಕರಿಸುವ ಮಂಗಗಳನ್ನಾಗಿ ಮಾಡುತ್ತಾನೆ. ಇಲ್ಲವೆ – ಅದು ಬಹುಶಃ ಸಂಭವಿಸಬಹುದಾದ ಅತ್ಯಂತ ಒಳ್ಳೆಯದು – ಹೊಸ ಆಧ್ಯಾತ್ಮಿಕ ಎಚ್ಚತ್ತುಕೊಳ್ಳುವಿಕೆ ಈ ವಿಶಾಲವಾದ ಜೀವನದಿಂದ ಎದ್ದು ಬರಬೇಕು, ಅದು ಈ ಸಲ ಹೆಚ್ಚು ಯಶಸ್ವಿಯಾಗಿ ತನ್ನ ವ್ಯಾಪ್ತಿಯಲ್ಲಿ ಪ್ರಾಪಂಚಿಕ ಜೀವನದ ಶ್ರೇಷ್ಠ



ಸಮಸ್ಯೆಗಳನ್ನು ಒಳಗೊಳ್ಳಬೇಕು, ಹಾಗೆಯೇ ಆತ್ಮದ ಹಾಗೂ ಪ್ರಾಪಂಚಿಕ ಜೀವನದಾಚೆಗಿರುವ ಅದೃಷ್ಟಗಳನ್ನು, ಪಾಶ್ಚಾತ್ಯರ ಪುನರುದಯವಾಗುತ್ತಿರುವ ಆಧ್ಯಾತ್ಮಿಕ ಅರಸುವಿಕೆಯನ್ನು ಮತ್ತು ಅದರೊಂದಿಗೆ ಮನುಕುಲದ ಪರಿಪೂರ್ಣತೆಗಾಗಿ ಹಾತೊರೆತವನ್ನು ಒಳಗೊಳ್ಳಬೇಕು. ಈ ಮೂರನೆಯದು ಮತ್ತು ಇನ್ನೂ ಅಪರಿಚಿತ ಪರಿಣಾಮದಲ್ಲಿರುವುದು ನಿಜವಾಗಿ ಪೌರ್ವಾತ್ಯರೆಲ್ಲರಿಗೆ ಅವಶ್ಯವಾಗಿದೆ.

**(13/137–38)** **– ಶ್ರೀ ಅರವಿಂದರು**

*

## ಅಭಿವೃದ್ಧಿಯ ಹಾಗೂ ಸಮನ್ವಯದ ಹೊಸ ಯುಗ

ಬರಲಿರುವ ದಿನಗಳಿಗಾಗಿ ಇರುವ ನಾವು ಅಭಿವೃದ್ಧಿಯ ಹೊಸ ಯುಗದ ಪ್ರಾರಂಭದ ಹಂತದಲ್ಲಿ ನಿಂತಿದ್ದೇವೆ, ಅದು ಅಂತಹ ಹೊಸ ಮತ್ತು ಹೆಚ್ಚು ವಿಶಾಲವಾದ ಸಮನ್ವಯದತ್ತ ಕರೆದೊಯ್ಯಬೇಕು. ಮೂರು ಪದ್ಧತಿಗಳಲ್ಲಿರುವ ಸಾಂಪ್ರದಾಯಿಕ ವೇದಾಂತಿಗಳಲ್ಲಿ ಒಬ್ಬರಾಗಲು ಇಲ್ಲವೆ ತಾಂತ್ರಿಕರಾಗಲು ನಮಗೆ ಕರೆ ಬಂದಿಲ್ಲ, ಇಲ್ಲವೆ ಆಸ್ತಿಕ ಧರ್ಮವೊಂದಕ್ಕೆ ಅಂಟಿಕೊಳ್ಳಬೇಕಾಗಿಲ್ಲ ಇಲ್ಲವೆ ಗೀತೆಯ ಬೋಧನೆಯ ನಾಲ್ಕು ಗೋಡೆಗಳ ಮಧ್ಯೆ ಭದ್ರವಾಗಿ ನೆಲೆಸಬೇಕಾಗಿಲ್ಲ. ಅದು ನಮ್ಮನ್ನು ಸೀಮಿತತೆಗೆ ಒಳಪಡಿಸುವುದಾಗಿದೆ, ನಮ್ಮದೇ ಸತ್ತೆ ಹಾಗೂ ಸಾಧ್ಯಗೊಳಿಸುವ ಸಾಮರ್ಥ್ಯ (potentiality)ಗಳಿಂದ ನಿರ್ಮಾಣ ಮಾಡುವುದರ ಬದಲಾಗಿ ಗತಕಾಲದ ಜನರ ಸತ್ತೆ, ಜ್ಞಾನ ಮತ್ತು ಸ್ವಭಾವಗಳಿಂದ ಸೃಷ್ಟಿಸುವುದಾಗಿದೆ. ನಾವು ಗತಕಾಲದ ಅರುಣೋದಯಗಳಿಗೆ ಸೇರಿದವರಾಗಿಲ್ಲ, ಆದರೆ ಭವಿಷ್ಯತ್ತಿನ ಮಧ್ಯಾಹ್ನಗಳಿಗೆ ಸೇರಿದವರಾಗಿದ್ದೇವೆ. ಹೊಸ ವಿಷಯದ ಮೊತ್ತ ನಮ್ಮೊಳಗೆ ಹರಿದು ಬರುತ್ತಿದೆ, ಭಾರತದ ಹಾಗೂ ಜಗತ್ತಿನ ಶ್ರೇಷ್ಠ ಆಸ್ತಿಕ ಧರ್ಮ ಮತ್ತು ಮರಳಿ ಪಡೆದ ಅರ್ಥದಲ್ಲಿ ಬುದ್ಧ ಧರ್ಮದ ಭಾವನೆಯನ್ನು ನಾವು ಜೀರ್ಣಿಸಿಕೊಳ್ಳಬೇಕಷ್ಟೇ ಅಲ್ಲ, ಆದರೆ ಆಧುನಿಕ ಜ್ಞಾನದ ಹಾಗೂ ಅರಸುವಿಕೆಯ ಸಮಂಜಸವಾದ ಪೂರ್ಣ ಮಾಹಿತಿಯನ್ನು, ಅದು ಸೀಮಿತ ದರ್ಶನಗಳನ್ನು ಹೊಂದಿದ್ದರೂ, ಪೂರ್ತಿಯಾಗಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕು; ಮತ್ತು ಅದರಾಚೆಗೆ ಗತಕಾಲದಲ್ಲಿ ಮೃತವಾಗಿ ಹೋಗಿದೆ ಎಂದು ಭಾವಿಸಿದ, ದೂರದಲ್ಲಿರುವಂತಹದು ದಿನಾಂಕರಹಿತವಾದದ್ದು ನಮ್ಮ ಮೇಲೆ ಮರಳಿ ಬರುತ್ತಿದೆ, ಅದು ತನ್ನೊಂದಿಗೆ ಮನುಕುಲದ ಪ್ರಜ್ಞೆ ಬಹಳ ಕಾಲದಿಂದ ಕಳೆದುಕೊಂಡಿದ್ದ ಪ್ರಕಾಶಮಯ ರಹಸ್ಯಗಳನ್ನು ಪರದೆಯ ಹಿಂದಿನಿಂದ ತಂದು ಹೊರಹರಿಯುವಂತೆ ಮಾಡುತ್ತದೆ.

ಇದೆಲ್ಲವೂ ಹೊಸ, ಬಹಳ ಶ್ರೀಮಂತ, ಬಹಳ ವಿಶಾಲವಾದ ಸಮನ್ವಯದತ್ತ ಬೆರಳು ಮಾಡಿ ತೋರಿಸುತ್ತದೆ; ತಾಜಾತನವಿರುವ ಮತ್ತು ನಮ್ಮ ಲಾಭಗಳನ್ನು ವಿಶಾಲವಾಗಿ ಅಪ್ಪಿಕೊಳ್ಳುವ ಹಾಗೂ ಅವುಗಳಲ್ಲಿ ಸಾಮರಸ್ಯವನ್ನುಂಟು ಮಾಡುವ ಇದು ಭವಿಷ್ಯತ್ತಿನ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಆವಶ್ಯಕತೆಯಾಗಿದೆ.

**(19/10)** **– ಶ್ರೀ ಅರವಿಂದರು**

*

## ಸಾಂಪ್ರದಾಯಿಕತೆ ಮತ್ತು ಆಧುನಿಕತೆ

ಭವಿಷ್ಯತ್ತು ಎರಡು ಮನಸ್ಸುಗಳಿರುವ ಸಿಂಹದೇಹಿ (Sphinx) ಯಿದ್ದ ಹಾಗಿದೆ, ಅದೊಂದು ಚೈತನ್ಯದ ಹಾಗಿದ್ದು ತನ್ನನ್ನು ಅರ್ಪಿಸುತ್ತದೆ ಮತ್ತು ನಿರಾಕರಿಸುತ್ತದೆ, ತನ್ನನ್ನು ಕೊಟ್ಟುಕೊಳ್ಳುತ್ತದೆ ಮತ್ತು ಪ್ರತಿರೋಧ ಒಡ್ಡುತ್ತದೆ, ಸಿಂಹಾಸನದ ಮೇಲೆ ಕುಳ್ಳಿರಿಸುವುದನ್ನು ಅರಸುತ್ತದೆ ಮತ್ತು ಕೊಂದು ಹಾಕುವುದನ್ನೂ ಅರಸುತ್ತದೆ. ಆದರೆ ವಿಜಯಕ್ಕಾಗಿ ಪ್ರಯತ್ನಿಸಬೇಕು, ಪಣವನ್ನು ಸ್ವೀಕರಿಸಬೇಕು. ಭವಿಷ್ಯತ್ತು ಅರ್ಪಿಸುವ ಮೃತ್ಯುವನ್ನು ಮತ್ತು ಜೀವನವನ್ನು ಸ್ವೀಕರಿಸಬೇಕು, ಭಯಪಡುವ ಆವಶ್ಯಕತೆ ಇಲ್ಲ, ಏಕೆಂದರೆ ನಮ್ಮ ಹಳೆಯ ನಾಮಗಳು ಹಾಗೂ ರೂಪಗಳು ಸತತ ಕಳೆದು ಹೋಗುವಂತಹವುಗಳು. ನಾವು ಅತ್ಯಂತ ಹೆಚ್ಚಿನ ಜೀವನೋತ್ಸಾಹದಿಂದ ಶ್ರೇಷ್ಠತರ ಹಾಗೂ ಹೊಸದಾದ ರೂಪಗಳಲ್ಲಿ ಜೀವಿಸುತ್ತೇವೆ. ನಾವು ಸಾಗಿ ಹೋಗಲೇಬೇಕಾಗಿದೆ, ನಾವು ಹಾಗೆ ಮಾಡದಿದ್ದರೆ ಅಚಂಚಲರಾಗಿರುವಂತೆ ನಮ್ಮ ನಟನೆ ಇದ್ದರೂ ಕಾಲವೇ ನಾವು ಮುಂದುವರಿಯುವಂತೆ ಒತ್ತಾಯಪಡಿಸುತ್ತದೆ. ಇದು ಚಲನೆಗಳೆಲ್ಲವುಗಳಲ್ಲಿ ಅತ್ಯಂತ ಕರುಣಾಜನಕ ಹಾಗೂ ಅಪಾಯಕಾರಿ ಚಲನೆ. ನಮ್ಮ ಪ್ರಯತ್ನಗಳಿದ್ದಾಗ್ಯೂ ವಿನಾಶವಾಗುತ್ತಿರುವ ಹಳೆಯದಕ್ಕೆ ಅಂಟಿಕೊಂಡಿರುವುದಕ್ಕಿಂತಲೂ, ನಮ್ಮನ್ನು ಜೀವಂತವಾಗಿ ಉಳಿಸಲು ಮೃತ ಭೂತಗಳನ್ನು, ಗತಕಾಲದ ತುಂಡುಗಳನ್ನು ಕುರಿತು ಉದ್ರೇಕಗೊಂಡು ಕೂಗುವುದಕ್ಕಿಂತಲೂ ಅತ್ಯಂತ ಹೆಚ್ಚು ಕರುಣಾಜನಕವಾದ ಸ್ಥಿತಿ ಬೇರಾವುದಿದೆ? ಸ್ವಭಾವದಲ್ಲಿ ಚಲನಶೀಲವಾದುದರ ಮೇಲೆ ಚಲನೆರಹಿತತೆಯನ್ನು ಹೇರುವುದಕ್ಕಿಂತ ಹೆಚ್ಚು ಅಪಾಯಕಾರಿಯಾದದ್ದು ಯಾವುದಿದೆ? ಹಾಗಾಗಿ ಭಯವಿಲ್ಲದವರು ಶ್ರೇಷ್ಠ ಆತ್ಮಗಳನ್ನು ಹೊಂದಿರುತ್ತಾರೆ, ಅವರು ಸವಾಲನ್ನು, ಪಣವನ್ನು ಒಪ್ಪಿಕೊಳ್ಳುತ್ತಾರೆ, ಅವರಿಗೆ ಜಗತ್ತಿಗೆ ಮಾರ್ಗದರ್ಶನ ಮಾಡುವ ಭಗವಂತನಲ್ಲಿ ಸರ್ವಶ್ರೇಷ್ಠ ವಿಶ್ವಾಸವಿರುತ್ತದೆ, ಅನಂತನೊಡನೆ ಕುಸ್ತಿ ಹಿಡಿದು ಸಿದ್ಧಿಸಿಕೊಳ್ಳುವುದಕ್ಕಾಗಿರುವ ಅವರ ಆ ಉಚ್ಚ ಕೆಚ್ಚಿದೆ, ಕೊನೆಯ ಅದೃಷ್ಟದಲ್ಲಿರುವ ಜಾಣ ಹಾಗೂ ಯೋಧನ



ಗಾಢ ನಂಬಿಕೆ ಇವು ಅವರನ್ನು ಅವತಾರ ಪುರುಷರು, ಪ್ರವಾದಿಗಳೆಂದು, ಶ್ರೇಷ್ಠ ಅನ್ವೇಷಕರು, ನವೀಕರಿಸುವವರು ಎಂದು ಗುರುತಿಸುವಂತೆ ಮಾಡುತ್ತದೆ.

**(13/129–30)** **– ಶ್ರೀ ಅರವಿಂದರು**

*

## ಚಿಂತನಕ್ಕಾಗಿ ವೈಶಾಲ್ಯವಿರುವುದರ ಆವಶ್ಯಕತೆ

ಆ ವೈಶಾಲ್ಯಗಳೊಂದಿಗೆ ವ್ಯವಹರಿಸಲು ನಮ್ಮ ಹೊಸ ಚಿಂತನ ಸಾಕಷ್ಟು ವಿಶಾಲವಾದದ್ದು ಮತ್ತು ಬಲವುಳ್ಳ ರೆಕ್ಕೆಗಳನ್ನು ಹೊಂದಿದಂತಹದು, ನಮ್ಮ ಚಿಂತನಗಳು ಸಾಕಷ್ಟು ಭವ್ಯವಾದವುಗಳು, ನಮ್ಮ ಸ್ವಭಾವಗಳು ಸಾಕಷ್ಟು ಬಲಿಷ್ಠವಾದವುಗಳು ಆಗಿರಬೇಕು. ನಾವು ಹಾಳು ಮಾಡುವುದನ್ನು ಕುರಿತು ಕೂಡ ನಾವು ಅರ್ಥ ಮಾಡಿಕೊಳ್ಳುವ ಕಾಳಜಿ ವಹಿಸಬೇಕು. ನಾವು ಹಾಳುಮಾಡಲು ಬಯಸುವುದರ ಸ್ಥಳದಲ್ಲಿ ಹೆಚ್ಚು ಶ್ರೇಷ್ಠವಾದ, ಹೆಚ್ಚು ಪರಿಪೂರ್ಣವಾದ ವಿಷಯವಿರದೆ ಇದ್ದಾಗ ಚೂರು ಚೂರಾಗುತ್ತಿರುವ, ಕೊಳೆತು ಹೋಗುತ್ತಿರುವ ಪ್ರಾಚೀನ ವಸ್ತುಗಳನ್ನು ಹಾಳುಮಾಡಬಾರದು. ಸಮಾಜ ಸುಧಾರಕರ ಇಲ್ಲವೆ ತತ್ವಜ್ಞಾನವಿರುವ ಇಲ್ಲವೆ ತತ್ವಜ್ಞಾನವಿರದ ಅರಾಜಕತಾವಾದಿಗಳ ಯುರೋಪಿನ ಸಮಾಜದ ಮನೋಧರ್ಮದಿಂದ ಹಿಂದೂ ಸಮಾಜವನ್ನು ಹರಿದು ಬಿಸಾಕುವುದೆಂದರೆ ಶಾಂತಿವ್ಯವಸ್ಥೆಯನ್ನು ಹಾಳುಮಾಡಿದಂತೆ ಮತ್ತು ಸ್ವೇಚ್ಛಾಚಾರದ ಗೊಂದಲವನ್ನು ಅದರ ಸ್ಥಾನದಲ್ಲಿರಿಸಿದಂತೆ. ನಾವು ಈ ಮುಂಜಾಗ್ರತಾ ಕ್ರಮಗಳನ್ನು ನೆನಪಿನಲ್ಲಿಟ್ಟುಕೊಂಡರೆ ಸೃಜನಾತ್ಮಕ ಚಿಂತನ ಅದೆಷ್ಟೇ ದಿಟ್ಟವಾದದ್ದಾಗಿರಲಿ ಇಲ್ಲವೆ ನಿರ್ದಯವಾಗಿರಲಿ ಅದರಿಂದ ಹಾನಿಯೇನಿಲ್ಲ. ಉದಾಹರಣೆಗೆ ನ್ಯಾಯನಿರ್ಣಯ ಮತ್ತು ಶಿಕ್ಷೆನೀಡುವಿಕೆ ಇವುಗಳ ಸದ್ಯದ ವ್ಯವಸ್ಥಾಕ್ರಮವನ್ನು ಅರ್ಥರಹಿತವೆಂದು ನಿರುಪಯುಕ್ತವೆಂದು ದಯಾ ದಾಕ್ಷಿಣ್ಯವಿಲ್ಲದೆ ನಾನು ಖಂಡಿಸಿದರೆ, ನನ್ನಲ್ಲಿ ಅದನ್ನನುಸರಿಸಿ ಬರಲೆಂದು ತಯಾರಾದ ಹೊಸ ಪದ್ಧತಿ ಇಲ್ಲದೆ ಇದ್ದರೆ, ಹಳೆಯದನ್ನು ನಾಶಮಾಡುವ ಬಯಕೆ ನನ್ನಲ್ಲಿರಬಾರದು, ಏಕೆಂದರೆ ಅದು ಒಂದು ಜಾಗವನ್ನು ತುಂಬುತ್ತದೆ, ಆ ಜಾಗ ಬರಿದಾಗಿರುವುದನ್ನು, ಮಾನವನ ಯೋಗಕ್ಷೇಮವನ್ನು ಮೇಲಕ್ಕೆತ್ತಿ ಹಿಡಿಯುವ ಮತ್ತು ಅದಕ್ಕೆ ಆಧಾರ ನೀಡುವ ದಿವ್ಯಾತ್ಮ ಸಹಿಸುವುದಿಲ್ಲ. ಅಸ್ತಿತ್ವದಲ್ಲಿರುವ ಧರ್ಮದ ಸ್ವರೂಪದಲ್ಲಿರುವ ದೌರ್ಬಲ್ಯಗಳನ್ನು, ಸಂಕುಚಿತತೆಗಳನ್ನು ತೆರೆದು ತೋರಿಸಬಹುದು, ನನ್ನಲ್ಲಿ ಹೊಸದಾದ, ಒಳ್ಳೆಯದಾದ ಸ್ವರೂಪವಿದ್ದ ನನ್ನದೇ ಧರ್ಮವಿರದೆ ಇರಬಹುದು, ಆದರೆ ನಾನು ಆ ಧರ್ಮದ ದೌರ್ಬಲ್ಯಗಳ ಮೇಲೆ

ಎಲ್ಲ ಧಾರ್ಮಿಕ ನಂಬಿಕೆಯನ್ನು ನಾಶಮಾಡುವಷ್ಟು ರೋಷಾವೇಶದಿಂದ ರೇಗಿ ಬೀಳಬಾರದು, ಮತ್ತು ನನ್ನ ಟೀಕೆಯನ್ನು ಮುಕ್ತಾಯಗೊಳಿಸುವ ಮೊದಲು ಯಾವುದೇ ಧರ್ಮ ಇರದೆ ಇರುವುದಕ್ಕಿಂತ ಒಂದು ಕೆಟ್ಟ ಧರ್ಮವಿರುವುದು ಹೆಚ್ಚು ಒಳ್ಳೆಯದು ಎಂಬುದನ್ನು ನಾನು ನೆನಪಿನಲ್ಲಿಡಬೇಕು. ಎಲ್ಲ ನಂಬಿಕೆಗೆ ಹಾಗೂ ಆಧ್ಯಾತ್ಮಿಕತೆಗೆ ಮೃತರಾದ ಅಲ್ಪ ಜ್ಞಾನವುಳ್ಳ ಕುಡುಕರಿಗಿಂತ ನನ್ನ ಸುತ್ತಲಿರುವ ಚೈತನ್ಯವನ್ನು ಆಫ್ರಿಕಾದ ಕಾಡು ಮನುಷ್ಯನೊಂದಿಗೆ ಪೂಜಿಸುವುದು ಹೆಚ್ಚು ಒಳ್ಳೆಯದು. ಏಕೆಂದರೆ ಆ ಪಶುಸದೃಶ ಅಜ್ಞಾನದಲ್ಲಿ ಕೈಕೊಂಡ ಪೂಜೆಯಲ್ಲಿ ದೈವೀ ಅಗ್ನಿಯ ಕಿಡಿಯಿರುತ್ತದೆ, ಅದು ಮನುಕುಲ ಜೀವಂತವಿರುವಂತೆ ಮಾಡುತ್ತದೆ. ಅದು ಹಾಗಿರುವಾಗ ಸುಸಂಸ್ಕೃತ ಸಾಮ್ರಾಜ್ಯಶಾಹಿ ರೋಮನ್ ಮನುಷ್ಯ, ಇಲ್ಲವೆ ಆಧುನಿಕ ಐಷಾರಾಮ ಶ್ರೀಮಂತಿಕೆಯನ್ನು ಅರಸುವವ ದೇಹವನ್ನು ಪೂಜಿಸುವವ ಇವರೆಲ್ಲ ತಮ್ಮ ಬಗೆಯವರನ್ನು ನೇರ ಹಾಗೂ ಚೆನ್ನಾಗಿ ನಿರ್ಮಾಣ ಮಾಡಿದ ಮಾರ್ಗದ ಮೇಲೆ ಕರೆದೊಯ್ಯುತ್ತಾರೆ. ಆ ಮಾರ್ಗ ಎಷ್ಟೊಂದು ವಿಶಾಲವಾಗಿರುತ್ತದೆಂದರೆ ಅದು ಕೇವಲ ಮಹತ್ತರವಾದ ಅಧೋಗತಿಗೆ ಕರೆದೊಯ್ಯತ್ತದೆ. ... ನಮ್ಮ ಬೆಳಕನ್ನು ಸ್ಪಷ್ಟವಾಗಿರಿಸುವುದಕ್ಕೆ, ಹರಡಿಕೊಳ್ಳುವಂತೆ ಮಾಡುವುದಕ್ಕೆ ಹೆಣಗೋಣ, ಅಂಧಕಾರವಾಗಲಿ, ಇಕ್ಕಟ್ಟಿನಲ್ಲಿ ಹೊರಸೂಸುವ ತೀಕ್ಷ್ಣ ಪ್ರಕಾಶವಾಗಲಿ ಮತ್ತು ಕೇವಲ ಉಜ್ವಲ ಬೆಳಕಾಗಲಿ ನಮಗೆ ಬೇಡ. ಆ ಆದರ್ಶವನ್ನು ಯುಕ್ತಿಯಿಂದ ಸಾಧಿಸಲಾಗದಿದ್ದರೂ ಅದನ್ನು ಕುರಿತು ಯೋಚಿಸುವುದು ಹೆಚ್ಚು ಒಳ್ಳೆಯದು, ಯೋಚಿಸುವುದನ್ನು ನಿಲ್ಲಿಸಬಾರದು. ಏಕೆಂದರೆ ಅಂಧಕಾರದಿಂದಲೂ ಕೂಡ ಹಗಲು ಜನ್ಮ ತಾಳುತ್ತದೆ, ಮಿಂಚಿಗೂ ಕೂಡ ಅದರದೇ ಉಪಯೋಗವಿರುತ್ತದೆ.

**(12/43–44)** **– ಶ್ರೀ ಅರವಿಂದರು**

*

## ಜಗತ್ತಿನಲ್ಲಿ ಭಾರತದ ಪಾತ್ರ

### ಭಾರತ ಭವಿಷ್ಯತ್ತಿನಲ್ಲಿ ಕೈಕೊಳ್ಳಬೇಕಾದ ಕಾರ್ಯ (1947)

ಈ ಮೊದಲು ಕಲ್ಪಿಸಿಕೊಂಡಿದ್ದ ಗುರಿಗಳು ಹಾಗೂ ಆದರ್ಶಗಳು ಭಾರತದ ಭವಿಷ್ಯತ್ತಿನ ಕಾರ್ಯದ ಭಾಗಗಳಾಗಿವೆ, ಅವುಗಳನ್ನು ಕುರಿತು ಭಾರತ ನೇತೃತ್ವವಹಿಸಲೇಬೇಕಾಗಿದೆ ಎಂದು ನಾನು ನಂಬುತ್ತೇನೆ. ಏಕೆಂದರೆ ಭಾರತ ಮೇಲ್ಗಡೆ ಸಾಗುತ್ತಿದೆ, ಅದು ಕೇವಲ ತನ್ನದೇ ಭೌತಿಕ ಉದ್ದೇಶಗಳಿಗೆ ಸೇವೆ ಸಲ್ಲಿಸುವುದಕ್ಕಾಗಿ ಎಂದರೆ ವಿಸ್ತರಣೆ, ಶ್ರೇಷ್ಠತೆ, ಸಾಮರ್ಥ್ಯ ಹಾಗೂ ಸಮೃದ್ಧಿ



ಇವುಗಳನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಅಷ್ಟೇ ಅಲ್ಲ – ಆದಾಗ್ಯೂ ಇವುಗಳನ್ನು ನಿರ್ಲಕ್ಷಿಸಲಿಕ್ಕಾಗದು – ಇತರರ ಹಾಗೆ ಬೇರೆಯವರ ಮೇಲೆ ಪ್ರಾಬಲ್ಯ ಪಡೆಯುವುದಕ್ಕಾಗಿ ಅಲ್ಲ, ಆದರೆ ಭಗವಂತನಿಗಾಗಿ, ಜಗತ್ತಿಗಾಗಿ ಸಹಾಯಕನೆಂದು ಮತ್ತು ಇಡೀ ಮಾನವ ಕುಲದ ನೇತಾರನೆಂದು ಜೀವಿಸುವುದಾಗಿದೆ ಎಂದು ನಾನು ಭಾವಿಸಿದ್ದೆ ಹಾಗೂ ಹೇಳಿದ್ದೆ. ಆ ಗುರಿಗಳು ಮತ್ತು ಆದರ್ಶಗಳು ಅವುಗಳ ಸ್ವಾಭಾವಿಕ ಕ್ರಮದಲ್ಲಿ ಇದ್ದುದು ಹೀಗೆ: ಭಾರತದ ಸ್ವಾತಂತ್ರ್ಯವನ್ನು ಸಿದ್ಧಿಸಿಕೊಳ್ಳಲು ಒಂದು ಕ್ರಾಂತಿ, ಏಶಿಯಾದ ಸ್ವಾತಂತ್ರ್ಯ ಹಾಗೂ ಪುನರುಜ್ಜೀವನ ಹಾಗೂ ಅದು ಮಾನವರ ನಾಗರಿಕತೆಯ ಪ್ರಗತಿಗಾಗಿ ವಹಿಸಿದ ಪಾತ್ರದತ್ತ ಮರಳಿ ಬರುವಿಕೆ; ಮನುಕುಲಕ್ಕಾಗಿ ಹೊಸ ಶ್ರೇಷ್ಠತರ, ಉಜ್ವಲವಾದ ಹಾಗೂ ಉದಾತ್ತವಾದ ಜೀವನದತ್ತ ಮೇಲ್ಗಡೆ ಸಾಗುವಿಕೆ, ಈ ಜೀವನ ಅದರ ಇಡೀ ಸಿದ್ಧಿಗಾಗಿ ಬಾಹ್ಯದಲ್ಲಿ, ಜನರ ಪ್ರತ್ಯೇಕ ಅಸ್ತಿತ್ವವನ್ನು, ಅವರ ರಾಷ್ಟ್ರೀಯ ಜೀವನವನ್ನು ರಕ್ಷಿಸುವುದ–ರೊಂದಿಗೆ, ಅಂತಾರಾಷ್ಟ್ರೀಯ ಏಕತೆಯನ್ನು ಆಶ್ರಯಿಸಿರುವುದು, ಆದರೆ ಅತಿಮುಖ್ಯ, ಪರಾಕಾಷ್ಠೆಯ ಒಂದುಗೂಡುವಿಕೆಯಲ್ಲಿ ಅವರನ್ನು ಒಟ್ಟಿಗೆ ಎಳೆದು ತರುವುದು; ಭಾರತ ತನ್ನ ಆಧ್ಯಾತ್ಮಿಕ ಜ್ಞಾನವನ್ನು ಹಾಗೂ ಜೀವನವನ್ನು ಆಧ್ಯಾತ್ಮೀಕರಣಗೊಳಿಸುವ ಸಾಧನವನ್ನು ಇಡೀ ಮಾನವ ಕುಲಕ್ಕೆ ಕಾಣಿಕೆಯ ರೂಪದಲ್ಲಿ ಕೊಡುವುದು; ಕೊನೆಯದಾಗಿ ಉತ್ಕ್ರಾಂತಿಯಲ್ಲಿ ಒಂದು ಹೊಸ ಹೆಜ್ಜೆಯನ್ನಿರಿಸುವುದು, ಅದು ಪ್ರಜ್ಞೆಯನ್ನು ಮೇಲ್ಮಟ್ಟಕ್ಕೇರಿಸುವುದರ ಮೂಲಕ ಅಸ್ತಿತ್ವದ ಹಲವಾರು ಸಮಸ್ಯೆಗಳಿಗೆ ಪರಿಹಾರ ನೀಡುವುದು. ಈ ಸಮಸ್ಯೆಗಳು ಮಾನವರು ಯೋಚಿಸಲು ಪ್ರಾರಂಭಿಸಿದಂದಿನಿಂದ, ವ್ಯಕ್ತಿಗತ ಪರಿಪೂರ್ಣತೆ–ಯನ್ನು, ಪರಿಪೂರ್ಣ ಸಮಾಜವನ್ನು ಕುರಿತು ಕನಸು ಕಾಣಲು ಪ್ರಾರಂಭಿಸಿ–ದಂದಿನಿಂದ ಅವರನ್ನು ರೇಗಿಸಿವೆ ಮತ್ತು ದಿಗ್ಭ್ರಮೆಗೊಳಪಡಿಸಿವೆ.

ಭಾರತ ಸ್ವತಂತ್ರವಾಗಿದೆ, ಆದರೆ ಏಕತೆಯನ್ನು ಸಾಧಿಸಿಲ್ಲ, ಅದು ಕೇವಲ ಬಿರುಕುಬಿಟ್ಟ, ತುಂಡಾದ ಸ್ವಾತಂತ್ರ್ಯ, ... ಯಾವುದೇ ಸಾಧನವನ್ನು ಉಪಯೋಗಿಸಿಯಾದರೂ ಈ ವಿಭಜನೆಯನ್ನು ತೊಡೆದುಹಾಕಬೇಕು, ಮತ್ತು ಅದು ಹೋಗುವುದಿದೆ. ಏಕೆಂದರೆ ಅದಿಲ್ಲದೆ ಭಾರತದ ಅದೃಷ್ಟ ಗಂಭೀರವಾಗಿ ಧಕ್ಕೆಗೊಳಗಾಗಬಹುದು ಮತ್ತು ನಿಷ್ಫಲಗೊಳ್ಳಬಹುದು. ...

ಏಶಿಯಾ ಮೇಲಕ್ಕೆದ್ದು ಬಂದಿದೆ ಮತ್ತು ಅದರ ಬಹಳಷ್ಟು ಭಾಗಗಳು ಸ್ವತಂತ್ರವಾಗಿವೆ ಇಲ್ಲವೆ ಈ ಸಮಯದಲ್ಲಿ ಸ್ವತಂತ್ರವಾಗುತ್ತಿವೆ. ಇನ್ನೂ ಅಧೀನದಲ್ಲಿರುವ ಅದರ ಭಾಗಗಳು ಸ್ವಾತಂತ್ರ್ಯಕ್ಕಾಗಿ ಮಾಡಬಹುದಾದ ಬೇರೆ

ಬಗೆಯ ಹೋರಾಟಗಳ ಮೂಲಕ ಅದರತ್ತ ಚಲಿಸುತ್ತಿವೆ. ಕೇವಲ ಅಲ್ಪವಾದದ್ದನ್ನು ಕೈಕೊಳ್ಳುವುದಿದೆ, ಅದನ್ನು ಇಂದು ಅಥವಾ ನಾಳೆ ಕೈಕೊಳ್ಳಲಾಗುವುದು. ಆ ವಿಷಯದಲ್ಲಿ ಭಾರತ ವಹಿಸಬೇಕಾದ ಪಾತ್ರವಿದೆ ಮತ್ತು ಆ ವಹಿಸುವಿಕೆಯನ್ನು ಚೈತನ್ಯದಿಂದ ಹಾಗೂ ಕ್ಷಮತೆಯಿಂದ ಪ್ರಾರಂಭಿಸಲಾಗಿದೆ. ಅದು ಈಗಾಗಲೇ ಭಾರತದ ಸಾಧ್ಯತೆಗಳ ಪರಿಮಾಣವನ್ನು ಮತ್ತು ರಾಷ್ಟ್ರಗಳ ಸಲಹಾಮಂಡಲಿ (council of the nations)ಯಲ್ಲಿ ದೊರಕಿಸಬಹುದಾದ ತನ್ನ ಸ್ಥಾನವನ್ನು ಸೂಚಿಸುತ್ತದೆ.

ಮನುಕುಲವನ್ನು ಒಂದುಗೂಡಿಸುವ ಕಾರ್ಯ ಅಭಿವೃದ್ಧಿಯಲ್ಲಿದೆ, ಆದಾಗ್ಯೂ ಅದು ಕೇವಲ ಮೊದಲ ಹೆಜ್ಜೆಯಾಗಿದೆ, ಸಂಘಟಿತವಾಗಿದೆಯಾದರೂ ಬೃಹತ್ತರವಾದ ತೊಂದರೆಗಳ ವಿರುದ್ಧ ಹೋರಾಡುವುದಿದೆ. ಆದರೆ ಆವೇಗವಿದೆ ಮತ್ತು ಇತಿಹಾಸದ ಅನುಭವವನ್ನು ಮಾರ್ಗದರ್ಶಿಯೆಂದು ತೆಗೆದುಕೊಂಡರೆ ಆ ಆವೇಗ ಜಯದೊರಕಿಸುವವರೆಗೆ ಅನಿವಾರ್ಯವಾಗಿ ಹೆಚ್ಚುತ್ತ ಹೋಗಬೇಕು. ಇಲ್ಲಿಯೂ ಕೂಡ ಭಾರತ ಪ್ರಮುಖ ಪಾತ್ರವನ್ನು ವಹಿಸತೊಡಗಿದೆ ಮತ್ತು ಅದು ಸದ್ಯದ ವಾಸ್ತವತೆಗಳಿಂದ ಮತ್ತು ಕೂಡಲೆ ಕಂಡು ಬರುವ ಸಾಧ್ಯತೆಗಳಿಂದ ಸೀಮಿತಗೊಳ್ಳದಂತಹ, ಆದರೆ ಭವಿಷ್ಯತ್ತಿನತ್ತ ಇಣುಕಿ ನೋಡಿ ಅದನ್ನು ಹತ್ತಿರ ತರುವಂತಹ ಭವ್ಯ ರಾಜ್ಯ ತಂತ್ರಜ್ಞತೆ(Statesmanship)ಯನ್ನು ಭಾರತ ಅಭಿವೃದ್ಧಿಪಡಿಸಿಕೊಂಡರೆ ಅದರ ಉಪಸ್ಥಿತಿ ಅಂಜುಬುರುಕ ಹಾಗೂ ನಿಧಾನಗತಿಯಿಂದಾಗುವ ಅಭಿವೃದ್ಧಿಯ ಬದಲಾಗಿ ದಿಟ್ಟ ಹಾಗೂ ತೀವ್ರಗತಿಯ–ದಾಗುವ ವ್ಯತ್ಯಾಸವನ್ನುಂಟು ಮಾಡಬಹುದು. ಅನಾಹುತವೊಂದು ಮಧ್ಯೆ ಬಂದು ಈಗ ಕೈಕೊಳ್ಳುತ್ತಿರುವುದಕ್ಕೆ ತಡೆಯುಂಟಾಗುವಂತೆ ಮಾಡಬಹುದು ಮತ್ತು ನಾಶಮಾಡಬಹುದು. ಹಾಗಿದ್ಯಾಗ್ಯೂ ಕೊನೆಯ ಪರಿಣಾಮ ನಿಶ್ಚಿತವಾದದ್ದು. ಸಂದರ್ಭ ಏನೇ ಇರಲಿ, ಏಕತೆ ಪ್ರಕೃತಿಯ ನಡೆಯಲ್ಲಿ ಒಂದು ಆವಶ್ಯಕತೆ, ಅನಿವಾರ್ಯವಾದ ಚಲನೆ ಮತ್ತು ಅದನ್ನು ಸಿದ್ಧಿಸಿಕೊಳ್ಳುವುದನ್ನು ಕುರಿತು ಯಾವ ಆತಂಕವಿಲ್ಲದೆ ಭವಿಷ್ಯ ನುಡಿಯಬಹುದು. ಏಕೆಂದರೆ ಅದಿಲ್ಲದೆ ಚಿಕ್ಕ ಜನಾಂಗಗಳ ಭವಿಷ್ಯ, ಈ ನಂತರ, ಎಂದಿಗೂ ಸುರಕ್ಷಿತವಾಗಿರುವುದಿಲ್ಲ, ದೊಡ್ಡ ಹಾಗೂ ಸಾಮರ್ಥ್ಯಪೂರ್ಣ ರಾಷ್ಟ್ರಗಳದೂ ಕೂಡ ನಿಜವಾಗಿ ಸುರಕ್ಷಿತವಾಗಿರದು. ಭಾರತ ವಿಭಜನೆಗೊಂಡು ಉಳಿದುಕೊಂಡರೆ, ತನ್ನ ಸುರಕ್ಷತತೆಯ ಬಗ್ಗೆ ಭರವಸೆ–ಯಿಂದಿರಲಾರದು. ಆದ್ದರಿಂದ ಎಲ್ಲರ ಹಿತಕ್ಕಾಗಿ ಏಕತೆ ಉಂಟಾಗಬೇಕಾಗಿದೆ. ಕೇವಲ ಮಾನವರ ದೌರ್ಬಲ್ಯ ಮತ್ತು ಮೂಢತನದ ಸ್ವಾರ್ಥ ಅದನ್ನು



ತಡೆಯಬಲ್ಲದು. ಅದರ ವಿರುದ್ಧ ದೇವತೆಗಳ ಹೆಣಗುವಿಕೆ ಕೂಡ ವ್ಯರ್ಥವಾಗುತ್ತದೆ ಎಂದು ಹೇಳಲಾಗಿದೆ. ಆದರೆ ಅದು ಎಲ್ಲ ಕಾಲಕ್ಕೂ ಪ್ರಕೃತಿಯ ಆವಶ್ಯಕತೆಯ ಹಾಗೂ ದೈವೀ ಸಂಕಲ್ಪದ ವಿರುದ್ಧ ನಿಲ್ಲಲಾರದು. ರಾಷ್ಟ್ರೀಯತೆ ಆಗ ನೆರವೇರಿಕೆ ಕಂಡುಕೊಳ್ಳುತ್ತದೆ, ಅಂತಾರಾಷ್ಟ್ರೀಯ ಮನೋಧರ್ಮ ಮತ್ತು ನೋಡುವಿಕೆ ಅಂತಾರಾಷ್ಟ್ರೀಯ ರೂಪಗಳಲ್ಲಿ ಹಾಗೂ ಸಂಸ್ಥೆಗಳಲ್ಲಿ ಬೆಳೆಯಬೇಕು. ಆ ಬೆಳವಣಿಗೆಗಳು ಎರಡು ಅಥವಾ ಹಲವಾರು ರಾಷ್ಟ್ರಗಳ ಪೌರತ್ವ (citizenship) ಹೊಂದಿರುವಿಕೆಯಂತಹವಿರಬಹುದು, ಆ ಬದಲಾವಣೆಯ ವಿಧಾನದಲ್ಲಿ ಸಂಸ್ಕೃತಿಗಳು ಸ್ವ–ಸಂತೋಷದಿಂದ ಬೆರೆತುಕೊಳ್ಳುತ್ತಿರುವಂತೆ ತೋರಿಬರಬಹುದು ಮತ್ತು ರಾಷ್ಟ್ರೀಯತೆಯ ಮನೋಧರ್ಮ ಅದರ ಉಗ್ರಗಾಮಿ ಮನೋವೃತ್ತಿಯನ್ನು ಕಳೆದುಕೊಳ್ಳಬಹುದು ಮತ್ತು ಇದೆಲ್ಲ ತನ್ನದೇ ದೃಷ್ಟಿಕೋನದ ಸಮಗ್ರತೆಗೆ ಪರಿಪೂರ್ಣವಾಗಿ ಸಮಂಜಸವಾಗಿರುವುದನ್ನು ಕಂಡುಕೊಳ್ಳಬಹುದು. ಮಾನವ ಕುಲದಲ್ಲಿ ಏಕತೆಯ ಹೊಸ ಮನೋಭಾವ ಭದ್ರವಾಗಿ ನೆಲೆಯೂರುವುದು. ಆ ಚಲನೆ ಬೆಳೆಯುತ್ತ ಹೋಗುವುದು; ಕಾಲಧರ್ಮದಲ್ಲಿ ಸಂಭವಿಸುವ ವಿಪತ್ತುಗಳ ನಡುವೆ ಹಲವಾರು ಜನರ ಕಣ್ಣುಗಳು ಭರವಸೆಯೊಂದಿಗೆ ಭಾರತದತ್ತ ಹೊರಳುವವು; ಭಾರತದ ಬೋಧನೆಗಳನ್ನಷ್ಟೇ ಅಲ್ಲ, ಆದರೆ ಅದರ ಚೈತ್ಯಾತ್ಮಿಕ ಹಾಗೂ ಆಧ್ಯಾತ್ಮಿಕ ಆಚರಣೆಗಳನ್ನು ಆಶ್ರಯಿಸುವುದು ಹೆಚ್ಚುತ್ತ ಹೋಗುತ್ತದೆ.

ಉಳಿದದ್ದೆಲ್ಲ ನನ್ನ ವೈಯಕ್ತಿಕ ನಿರೀಕ್ಷೆ ಮತ್ತು ವಿಚಾರ ಹಾಗೂ ಆದರ್ಶ, ಇವು ಮುಂಧೋರಣೆಯ ಮನಸ್ಸಿರುವ ಜನರಲ್ಲಿ, – ಅವರು ಭಾರತೀಯರಾಗಿರಲಿ ಇಲ್ಲವೆ ಪಾಶ್ಚಿಮಾತ್ಯರಾಗಿರಲಿ – ಭದ್ರವಾಗಿ ನೆಲೆಯೂರಲು ಪ್ರಾರಂಭಿಸಿವೆ. ಈ ಮಾರ್ಗದಲ್ಲಿ, ಬೇರೆ ಯಾವುದೇ ಕ್ಷೇತ್ರದಲ್ಲಿ ಪ್ರಯತ್ನ ಪಡುವಾಗ ಎದುರಾಗುವ ತೊಂದರೆಗಳಿಗಿಂತ ಹೆಚ್ಚು ದಿಗಿಲು ಹುಟ್ಟಿಸುವ ತೊಂದರೆಗಳು ಎದುರಾಗುತ್ತವೆ. ಆದರೆ ಜಯ ಸಾಧಿಸಲಿ ಎಂಬ ಉದ್ದೇಶಕ್ಕಾಗಿಯೇ ತೊಂದರೆಗಳು ನಿರ್ಮಾಣಗೊಂಡಿರುತ್ತವೆ. ಮತ್ತು ಪರಮೋಚ್ಚನ ದೈವೀ ಸಂಕಲ್ಪವಿದ್ದರೆ ಅವುಗಳ ಮೇಲೆ ಜಯ ಸಾಧಿಸಲಾಗುವುದು. ಇಲ್ಲಿಯೂ ಕೂಡ ಉತ್ಕ್ರಾಂತಿ ಸಂಭವಿಸಬೇಕಾದರೆ, ಅದು ಆತ್ಮ ಹಾಗೂ ಆಂತರಿಕ ಪ್ರಜ್ಞೆ ಇವುಗಳ ಬೆಳವಣಿಗೆಯ ಮೂಲಕ ಆಗಬೇಕಾದುದರಿಂದ ಅದರತ್ತ ಮೊದಲ ಹೆಜ್ಜೆ ಇರಿಸುವಿಕೆ ಭಾರತದಿಂದಲೇ ಆಗಬೇಕಾಗಿದೆ ಮತ್ತು ಅದರ ವ್ಯಾಪ್ತಿ ವಿಶ್ವಂಭರವಾಗಿದ್ದರೂ, ಕೇಂದ್ರ ಚಲನೆ ಭಾರತದ್ದಾಗಿರಬಹುದು.

**(36/475–77)** **– ಶ್ರೀ ಅರವಿಂದರು**

*

## ಪ್ರಕಟಗೊಂಡ ಜೀವನದ ಸಾಮರಸ್ಯಕ್ಕೆ ಮಾರ್ಗ

ಮಾನವರ ಚಲನೆಯ ಪೂರ್ಣತೆಗಾಗಿ ಎರಡು ಪ್ರವೃತ್ತಿಗಳು ಅವಶ್ಯವಾಗಿರುವುದು ಸರಿಯಾಗಿಯೇ ಇರಬಹುದು. ಮಾನಸಿಕ, ಪ್ರಾಣಿಕ ಹಾಗೂ ಯುರೋಪದ ಭೌತಿಕ ಒತ್ತಡ ಮತ್ತು ಭಾರತದ ಆಧ್ಯಾತ್ಮಿಕ ಹಾಗೂ ಚೈತ್ಯಾತ್ಮಿಕ ಪ್ರಚೋದನೆ ಇವು ಆ ಎರಡು ಪ್ರವೃತ್ತಿಗಳು. ಆದರೆ ಪ್ರಕಟಗೊಂಡ ಜೀವನದ ಸಾಮರಸ್ಯಕ್ಕಾಗಿರುವ ಕೊನೆಯ ಮಾರ್ಗವನ್ನು ಆಧ್ಯಾತ್ಮಿಕ ಆದರ್ಶ ತೋರಿಸಿಕೊಡುತ್ತಿದ್ದರೆ, ಭಾರತ ಆ ಸತ್ಯದ ಮೇಲಿನ ಹಿಡಿತವನ್ನು ಕಳೆದುಕೊಳ್ಳದೆ ಇರುವುದು ಅತ್ಯಂತ ಮಹತ್ವವಾದದ್ದು, ಅದು ತಿಳಿದುಕೊಂಡಿದ್ದ ಅತ್ಯುಚ್ಚವಾದದ್ದನ್ನು ಕೈಬಿಟ್ಟುಬಿಡಬಾರದು, ಮತ್ತು ಅದನ್ನು, ಬಹುಶಃ ಹೆಚ್ಚು ಅನಾಯಾಸವಾಗಿ ಆಚರಣೆಗೆ ತರಬಹುದಾದ ಆದರೆ ತನ್ನ ನಿಜವಾದ ಹಾಗೂ ಸತತವಿರುವ ಸ್ವಭಾವಕ್ಕೆ ನಿಮ್ನತರ ಹಾಗೂ ವಿದೇಶೀಯವಾದುದರ ಜೊತೆಗೆ ವಿನಿಮಯ ಮಾಡಿಕೊಳ್ಳಬಾರದು.

**(20/745)** **– ಶ್ರೀ ಅರವಿಂದರು**

*

## ನಡತೆಯ ಅತ್ಯುಚ್ಚ ನಿಯಮವಾದ ಸತ್ಯ

ಹಿಂದುತ್ವ ಒಂದು ಒಳಪಂಗಡ ಇಲ್ಲವೆ ಮತತತ್ವದ ಪಂಥವಲ್ಲ, ಸೂತ್ರಗಳ ಕಟ್ಟಲ್ಲ, ಸಾಮಾಜಿಕ ನಿಯಮಗಳ ಮೊತ್ತವಲ್ಲ, ಆದರೆ ಅದು ಮಹೋನ್ನತ, ಸನಾತನ, ವಿಶ್ವಂಭರ ಸತ್ಯ. ಭಗವಂತನ ಅನಂತ ಅಸ್ತಿತ್ವದೊಂದಿಗೆ ತಾದಾತ್ಮ್ಯ ಪಡೆಯುವ ದೈವೀ ಪರಾಕಾಷ್ಠೆಗಾಗಿ ಆತ್ಮವನ್ನು ತಯಾರು ಮಾಡುವ ರಹಸ್ಯವನ್ನು ಹಿಂದುತ್ವ ಕಲಿತುಕೊಂಡಿದೆ. ಈ ಶ್ರೇಷ್ಠ ತಯಾರಿಗೆ ಸಹಾಯಕವೆಂದು ಮಾತ್ರ ಜೀವನದ ನಿಯಮಗಳು, ನಂಬಿಕೆಯ ಸೂತ್ರಗಳು ಪವಿತ್ರ ಹಾಗೂ ಉಪಯುಕ್ತವಾಗಿರುತ್ತವೆ. ಸ್ವಾರ್ಥ, ಭಯ, ಪ್ರಾಪಂಚಿಕ ಅನುಕೂಲತೆಗಳನ್ನು ಗಳಿಸುವುದಕ್ಕಾಗಿ ಸತ್ಯವನ್ನು ತುಚ್ಛಗೊಳಿಸುವ ಪ್ರಲೋಭನೆ ಇವೆಲ್ಲವುಗಳ ಮೇಲೆ ಮನುಷ್ಯ ಜಯಸಾಧಿಸಿ ತನ್ನ ಕ್ಷಮತೆಗೆ ಸಾಧ್ಯವಿದ್ದಷ್ಟು ಅತ್ಯುಚ್ಚ ಜೀವನವನ್ನು ನಡೆಸುವುದು ಮೊದಲ ನಿಯಮ. ಸತ್ಯವಿರುವ ನಡತೆಗಿಂತ ಹೆಚ್ಚಿನ ಧರ್ಮವಿಲ್ಲ "ಸತ್ಯಾನ್ನಾಸ್ತಿ ಪರೋ ಧರ್ಮಃ" ಎಂಬುದು ನಂಬಿಕೆಯ ಮೊದಲ ನಿಯಮ.

*



... ಭಾರತ ನಿರ್ವಹಿಸಬೇಕಾದ ಕಾರ್ಯವೆಂದರೆ ಜಗತ್ತಿಗೆ ಪ್ರಕಾಶ ಹಾಗೂ ನವೀಕರಣಗಳ ಚಿರಂತನ ಮೂಲವನ್ನು ಒದಗಿಸುವುದಾಗಿದೆ.

**(7: 928, 1086)** **– ಶ್ರೀ ಅರವಿಂದರು**

*

## ಜಗತ್ತಿಗೆ ಗುರುವಾಗಿರುವ ಭಾರತ

ಭಾರತದ ಆತ್ಮ ಏಕ ಹಾಗೂ ಅವಿಭಾಜ್ಯವಾಗಿದೆ. ಭಾರತ ತನ್ನ ಮಣಿಹದ ಬಗ್ಗೆ ಅರಿವುಳ್ಳದ್ದಾಗಿದೆ. ಪ್ರಕಟಣೆಗಾಗಿ ಬಾಹ್ಯ ಸಾಧನವನ್ನು ದೊರಕಿಸುವ ನಿರೀಕ್ಷೆಯಲ್ಲಿದೆ.

*

ಭಾರತದ ಭವಿಷ್ಯತ್ತು ಬಹಳ ಸ್ಪಷ್ಟವಾಗಿದೆ. ಭಾರತ ಜಗತ್ತಿನ ಗುರುವಾಗಿದೆ. ಭವಿಷ್ಯತ್ತಿನಲ್ಲಿ ಜಗತ್ತಿನ ರಚನೆ ಭಾರತದ ಮೇಲೆ ಅವಲಂಬಿಸಿದೆ. ಭಾರತ ಜೀವಂತವಿರುವ ಆತ್ಮ. ಜಗತ್ತಿನಲ್ಲಿ ಆಧ್ಯಾತ್ಮಿಕ ಜ್ಞಾನ ಅವತರಿಸುವಂತೆ ಭಾರತ ಮಾಡುತ್ತದೆ. ಭಾರತದ ಸರಕಾರ ಈ ವಲಯದಲ್ಲಿ ಭಾರತದ ಪ್ರಾಮುಖ್ಯತೆಯನ್ನು ಗುರುತಿಸಬೇಕು ಮತ್ತು ಅದಕ್ಕೆ ಅನುಗುಣವಾಗುವಂತೆ ಅದರ ಕಾರ್ಯವನ್ನು ಯೋಜಿಸಬೇಕು.

*

## ಭಾರತದ ನಕಾಶವನ್ನು ಕುರಿತು

ಇಂಡಿಯಾ ದೇಶ ಭಾರತ ಮತ್ತು ಪಾಕಿಸ್ತಾನ ಎಂದು ವಿಭಜನೆಗೊಂಡ ನಂತರ (ಶ್ರೀ ಅರವಿಂದೋ ಆಶ್ರಮದ ಕ್ರೀಡಾಂಗಣದಲ್ಲಿ ಪ್ರದರ್ಶಿಸಲಾದ) ತಯಾರು ಮಾಡಿದ ನಕಾಶ ಕುರಿತು: ಸಾಗಿ ಹೋಗುತ್ತಿರುವ ತೋರಿಕೆಗಳು ಏನೇ ಇರಲಿ, ಅದು ಭಾರತದ ನಿಜವಾದ ನಕಾಶ ಮತ್ತು ಜನರು ಅದನ್ನು ಕುರಿತು ಏನನ್ನಾದರೂ ಯೋಚಿಸಲಿ, ಅದು ಎಲ್ಲ ಕಾಲಕ್ಕೂ ಭಾರತದ ನಕಾಶವಾಗಿ ಉಳಿದುಕೊಳ್ಳುತ್ತದೆ.

**(ಜುಲೈ 29, 1964)** **– ಶ್ರೀಮಾತೆ**

ಭಾರತ ಜಗತ್ತಿಗೆ ಆಧ್ಯಾತ್ಮಿಕ ನೇತಾರರೂಪದ್ದಾಗಿರಬೇಕು. ಅದರ ಅಂತರ್ಯದಲ್ಲಿ ಆ ಕ್ಷಮತೆ ಇದೆ, ಆದರೆ ಬಾಹ್ಯದಲ್ಲಿ .... ಸದ್ಯದ ಸಮಯದಲ್ಲಿ,

ನಿಜವಾಗಿ ಜಗತ್ತಿನ ಆಧ್ಯಾತ್ಮಿಕ ನೇತಾರನಾಗಲು ಇನ್ನೂ ಕೈಕೊಳ್ಳಬೇಕಾದುದು ಬಹಳಷ್ಟಿದೆ.

ಸದ್ಯದ ಸಮಯದಲ್ಲಿ ಅದ್ಭುತ ಅವಕಾಶ ಅಲ್ಲಿದೆ! ಆದರೆ ...

*

ಪ್ರಕಾಶ ಮತ್ತು ಆಧ್ಯಾತ್ಮಿಕ ಜ್ಞಾನದ ಭೂಮಿಯಾದ ಓ ಭಾರತ! ಜಗತ್ತಿನಲ್ಲಿ ಕೈಕೊಳ್ಳಬೇಕಾದ ನಿನ್ನ ಮಣಿಹಕ್ಕಾಗಿ ಎಚ್ಚತ್ತುಕೋ, ಏಕತೆ ಹಾಗೂ ಸಾಮರಸ್ಯಕ್ಕಾಗಿ ಮಾರ್ಗವನ್ನು ತೋರಿಸು.

*

ಭಾರತ ಆಧುನಿಕ ಮನುಕುಲದ ಎಲ್ಲ ತೊಂದರೆಗಳ ಸಾಂಕೇತಿಕ ಪ್ರತೀಕವಾಗಿದೆ.

ಭಾರತ ತನ್ನನ್ನು ಪುನರುಜ್ಜೀವನಗೊಳಿಸುವ ಭೂಮಿಯಾಗಿದೆ – ಅದು ಉಚ್ಚತರವಾದ ಹಾಗೂ ನಿಜವಾದ ಜೀವನವಾಗುವಂತೆ ಪುನರುಜ್ಜೀವನ ಮಾಡಿಕೊಳ್ಳುವುದಾಗಿದೆ.

*

ಇಡೀ ಸೃಷ್ಟಿಯಲ್ಲಿ ಪೃಥ್ವಿಗೆ ಹಿರಿಮೆ ಇರುವ ವಿಶೇಷ ಸ್ಥಾನವಿದೆ. ಏಕೆಂದರೆ ಬೇರೆ ಯಾವುದೇ ಗ್ರಹಕ್ಕಿರದ ಉತ್ಕ್ರಾಂತಿ ಹೊಂದುವ ಗುಣ ಪೃಥ್ವಿಗಿದೆ. ಅದರ ಕೇಂದ್ರದಲ್ಲಿ ಚೈತ್ಯಾತ್ಮಿಕ ಅಸ್ತಿತ್ವವಿದೆ. ಅದರಲ್ಲಿ ಭಾರತ ದೈವಿಕವಾಗಿ ಆಯ್ದುಕೊಂಡ ರಾಷ್ಟ್ರವಾಗಿದೆ.

*

ನಿಜವಾದ ಮುಕ್ತಿ ಆರೋಹಣ ಮಾಡುವ ಚಲನೆಯಾಗಿರುತ್ತದೆ. ಅದು ನಿಮ್ನತರ ಹುಟ್ಟುಗುಣಗಳಿಗೆ ಶರಣಾಗತವಾಗುವುದಿಲ್ಲ.

ನಿಜವಾದ ಮುಕ್ತಿ ದೈವೀ ಪ್ರಕಟಣೆಯಾಗಿದೆ.

ಭಾರತಕ್ಕೆ ನಿಜವಾದ ಸ್ವಾತಂತ್ರ್ಯವಿರಲೆಂದು ನಾವು ಬಯಸುತ್ತೇವೆ, ಅದರಿಂದಾಗಿ ಮಾನವ ಕುಲ ಏನಾಗಿರಬೇಕೆಂಬುದನ್ನು ತಾರ್ಕಿಕವಾಗಿ ಸಮರ್ಥಿಸಲು ಭಾರತ ಜಗತ್ತಿಗೆ ಸರಿಯಾದ ಉದಾಹರಣೆಯಾಗುತ್ತದೆ.



ಆಧ್ಯಾತ್ಮಿಕ ದೃಷ್ಟಿಕೋನದಿಂದ ಭಾರತ ಜಗತ್ತಿನಲ್ಲಿ ಅಗ್ರಗಣ್ಯ ದೇಶವಾಗಿದೆ. ಅದರ ಮಣಿಹವೆಂದರೆ ಆಧ್ಯಾತ್ಮಿಕವಾಗಿ ಒಂದು ಉದಾಹರಣೆಯಾಗುವುದಾಗಿದೆ. ಇದನ್ನು ಜಗತ್ತಿಗೆ ಬೋಧಿಸಲು ಶ್ರೀ ಅರವಿಂದರು ಪೃಥ್ವಿಯ ಮೇಲೆ ಬಂದಿದ್ದರು.

*

ಭಾರತ ಸಮಗ್ರವಾಗಿ ದೈವೀ ಜೀವನದ ಸಂದೇಶವಾಹಕವಾದಾಗ ಮಾತ್ರ ಅದು ಜಗತ್ತಿನಲ್ಲಿ ತನ್ನ ನಿಜವಾದ ಸ್ಥಾನವನ್ನು ಕಂಡುಕೊಳ್ಳುವುದು.

**(13/244–45, 351–72)** **– ಶ್ರೀಮಾತೆ**

*

## ಆವಾಹನೆ

**(ಆಗಸ್ಟ 15, 1947)**

ಓ ನಮ್ಮ ಮಾತೆಯ, ಭಾರತದ ಆತ್ಮವೆ, ನಿನ್ನ ಮಕ್ಕಳನ್ನು ಅಂಧಕಾರದ ಹಾಗೂ ನಿರಾಶಾದಾಯಕ ದಿನಗಳಲ್ಲಿ, ಅವರು ನಿನ್ನ ಧ್ವನಿಯಿಂದ ಬೇರೆಡೆ ಹೊರಳಿದಾಗ, ಬೇರೆ ಪ್ರಭುಗಳ ಸೇವೆ ಮಾಡಿ ನಿನ್ನನ್ನು ನಿರಾಕರಿಸಿದಾಗ ಎಂದೂ ಕೈಬಿಟ್ಟಿರದ ಮಾತೆಯೆ, ಈಗ ಅವರು ಮೇಲಕ್ಕೆದ್ದಿದ್ದಾರೆ, ಮತ್ತು ನಿನ್ನ ಮುಖದ ಮೇಲೆ ಸ್ವಾತಂತ್ರ್ಯದ ಅರುಣೋದಯದ ಪ್ರಕಾಶವಿದೆ, ಈ ಶ್ರೇಷ್ಠ ಗಳಿಗೆಯಲ್ಲಿ ನಾವು ನಿನಗೆ ನಮಸ್ಕರಿಸುತ್ತೇವೆ. ಅದರಿಂದಾಗಿ ನಮ್ಮೆದುರಿಗೆ ತೆರೆದುಕೊಳ್ಳುತ್ತಿರುವ ಸ್ವಾತಂತ್ರ್ಯದ ಕ್ಷಿತಿಜ ರಾಷ್ಟ್ರಗಳ ಸಮುದಾಯದಲ್ಲಿ ನಿನ್ನ ನಿಜವಾದ ಶ್ರೇಷ್ಠತೆಯ ಹಾಗೂ ನಿನ್ನ ಜೀವನದ ನಿಜವಾದ ಕ್ಷಿತಿಜವಾಗಲಿ. ನಾವು ಯಾವಾಗಲೂ ಶ್ರೇಷ್ಠ ಆದರ್ಶಗಳೊಂದಿಗಿರುವಂತೆ ಮಾರ್ಗದರ್ಶನ ಮಾಡು ಮತ್ತು ಆತ್ಮದ ರೀತಿಗಳಲ್ಲಿ ನೇತೃತ್ವ ವಹಿಸಿರುವ ಹಾಗೂ ಎಲ್ಲ ಜನರಿಗೆ ಒಬ್ಬ ಮಿತ್ರ ಹಾಗೂ ಸಹಾಯಕನಂತಿರುವ ನಿನ್ನ ಮುಖ ಲಕ್ಷಣವನ್ನು ನಮಗೆ ತೋರಿಸು.

**(13/352)** **– ಶ್ರೀಮಾತೆ**

*

## ಭರವಸೆಯ ಒಂದು ಶಬ್ದ

ಯುಗ ಯುಗಗಳ ಇತಿಹಾಸವಿರುವ ಭಾರತ ಮೃತವಾಗಿಲ್ಲ ಇಲ್ಲವೆ ಅದರ ಸೃಜನಾತ್ಮಕ ಕೊನೆಯ ಶಬ್ದವನ್ನು ಕುರಿತು ಅದು ಹೇಳಿಲ್ಲ, ಅದು ಜೀವಿಸುತ್ತಿದೆ

ಹಾಗೂ ತನಗಾಗಿ ಮತ್ತು ಮಾನವ ಜನಾಂಗಗಳಿಗಾಗಿ ಇನ್ನೂ ಒಂದಿಷ್ಟನ್ನು ಕೈಕೊಳ್ಳುವುದಿದೆ. ನಾವು ಈಗ ಅರಸಬೇಕಾದದ್ದು ಆಂಗ್ರೇಜಿಕರಣ (anglicised) ಗೊಂಡ ಪೌರ್ವಾತ್ಯ ಜನಾಂಗವೊಂದನ್ನಲ್ಲ, ಪಾಶ್ಚಾತ್ಯರ ಯಶಸ್ಸು ಹಾಗೂ ವಿಫಲತೆಗಳ ಸುತ್ತನ್ನು ಪುನರಾವರ್ತಿಸುವ ದುರ್ಗತಿಗೆ ಒಳಗಾದ, ಪಾಶ್ಚಾತ್ಯರಿಗೆ ವಿನೀತನಾದ ವಿದ್ಯಾರ್ಥಿಯನ್ನಲ್ಲ, ಆದರೆ ಅದು ಇನ್ನೂ ತನ್ನ ಆಳಾತಿ ಆಳದ ಆತ್ಮವನ್ನು ಮರಳಿ ಪಡೆಯುತ್ತಿರುವ, ತನ್ನ ಶಿರವನ್ನು ಪ್ರಕಾಶ ಹಾಗೂ ಬಲಗಳ ಪರಮೋಚ್ಚ ಮೂಲದತ್ತ ಹೊರಳಿಸುತ್ತಿರುವ ಮತ್ತು ತನ್ನ ಧರ್ಮದ ಸಂಪೂರ್ಣ ಅರ್ಥ ಮತ್ತು ವಿಶಾಲವಾದ ರೂಪಗಳನ್ನು ಶೋಧಿಸಲು ಹೊರಳುತ್ತಿರುವ ಪ್ರಾಚೀನ, ಸ್ಮೃತಿಪೂರ್ವ ಕಾಲದ ದೈವೀ ಶಕ್ತಿಯಾಗಿದೆ.

**(20/444)** – **ಶ್ರೀ ಅರವಿಂದರು**

ಸಂಶಯ, ಧೈರ್ಯಗೆಡಿಸುವಿಕೆ, ಕುಗ್ಗುತ್ತಿರುವ ಇಲ್ಲವೆ ಕಳೆದು ಹೋಗುತ್ತಿರುವ ನಂಬಿಕೆ, ಆದರ್ಶಕ್ಕಾಗಿರುವ ಪ್ರಾಣಿಕ ಉತ್ಸಾಹ ಕಡಿಮೆಯಾಗುವಿಕೆ, ದಿಗ್ಭ್ರಮೆ, ಭವಿಷ್ಯತ್ತಿಗಾಗಿ ಭರವಸೆ ಭಗ್ನಗೊಳ್ಳುವಿಕೆ ಇವು ತೊಂದರೆಯ ಸಾಮಾನ್ಯ ಲಕ್ಷಣಗಳು. ಬಾಹ್ಯ ಜಗತ್ತಿನಲ್ಲಿ ಇನ್ನೂ ಹೆಚ್ಚು ಕೆಟ್ಟವಾಗಿರುವ ರೋಗ ಲಕ್ಷಣಗಳಿವೆ: ಹೆಚ್ಚುತ್ತಿರುವ ಸಿನಿಕತನ (ತಪ್ಪು ಹುಡುಕುವುದು, ವ್ಯಂಗ್ಯ ಇತ್ಯಾದಿ), ಯಾವುದರಲ್ಲಿಯೂ ನಂಬಿಕೆ ಇಲ್ಲದಿರುವುದು, ಪ್ರಾಮಾಣಿಕತನದಲ್ಲಿ ಕೊರತೆ, ಭವ್ಯ ರೀತಿಯಲ್ಲಿ ಭ್ರಷ್ಟರಾಗಿರುವುದು; ಉಚ್ಚತರ ವಿಷಯಗಳನ್ನು ಹೊರತು ಪಡಿಸಿ ಆಹಾರ, ಧನ, ಸುಖಸೌಲಭ್ಯ, ಹರ್ಷ ಇಂತಹವುಗಳಲ್ಲಿ ಪೂರ್ವ ಮಗ್ನರಾಗಿರುವುದು, ವಿಷಯಗಳು ಇನ್ನೂ ಹೆಚ್ಚು ಕೆಟ್ಟು ಹೋಗಲಿವೆ ಎಂಬ ಜಗತ್ತಿನ ಸಾಮಾನ್ಯ ರೂಪದ ನಿರೀಕ್ಷೆ ಇವೆಲ್ಲ ಆ ಲಕ್ಷಣಗಳಾಗಿವೆ. ಅದೆಲ್ಲ ಎಷ್ಟೇ ತೀಕ್ಷ್ಣವಾಗಿದ್ದರೂ ಅದು ತಾತಾಲ್ಕಿಕವಾಗಿ ಗೋಚರಕ್ಕೆ ಬರುವ ವಿಷಯ. ಅದಕ್ಕಾಗಿ ಜಗತ್ತಿನ ಕಾರ್ಯಗತಿಗಳ ಬಗ್ಗೆ ಏನನ್ನಾದರೂ ತಿಳಿದುಕೊಂಡಿದ್ದ ಜನರು ತಯಾರಿ ಮಾಡಿಕೊಂಡಿದ್ದರು. ಇದು ಬರುವುದನ್ನು ನಾನೇ ಸ್ವತಃ ಪೂರ್ವಭಾವಿಯಾಗಿ ಕಂಡುಕೊಂಡಿದ್ದೆ, ಅದು ಅರುಣೋದಯದಕ್ಕಿಂತ ಮೊದಲು ತೋರಿ ಬರುವ ಅಂಧಕಾರ, ಹಾಗಾಗಿ ನಾನು ಎದೆಗುಂದಿರಲಿಲ್ಲ. ಅಂಧಕಾರದ ಹಿಂದೆ ಯಾವುದರ ತಯಾರಿ ನಡೆದಿದೆ ಎಂಬುದು ನನಗೆ ತಿಳಿದಿದೆ, ಅದು ಬರುತ್ತಿರುವುದರ ಮೊದಲ ಕುರುಹುಗಳನ್ನು ನಾನು ಭಾವನೆಗೆ ತಂದುಕೊಳ್ಳಬಲ್ಲೆ. ಭಗವಂತನನ್ನು ಅರಸುವವರು ಸ್ಥಿರವಾಗಿ ನಿಂತುಕೊಳ್ಳಬೇಕು, ಅರಸುವುದನ್ನು ಪಟ್ಟು ಹಿಡಿದು



ಕೈಕೊಳ್ಳಬೇಕು, ಕೆಲಕಾಲದ ನಂತರ ಅಂಧಕಾರ ಮರೆಯಾಗುತ್ತ ಹೋಗುತ್ತದೆ, ದೈವೀ ಪ್ರಕಾಶ ಬರುವುದು.

**(35/367)** – **ಶ್ರೀ ಅರವಿಂದರು (ಏಪ್ರಿಲ್ 9, 1947)**

ಈ ಜಗತ್ತು ಅಂಧ ಪ್ರಕೃತಿಯಿಂದ ಸೃಷ್ಟಿಯಾಗಿಲ್ಲ, ಅಚೇತನದಲ್ಲಿಯೂ ಕೂಡ ಪರಮೋಚ್ಚ ದೈವೀ ಸತ್ಯ ಕಾರ್ಯನಿರತವಾಗಿದೆ, ಅಲ್ಲಿ ಅದರ ಹಿಂದೆ ಲಕ್ಷ್ಯಗೊಡುತ್ತಿರುವ ದೈವೀ ಸಾಮರ್ಥ್ಯವಿದೆ, ಅದು ತಪ್ಪು ಮಾಡದ ರೀತಿಯಲ್ಲಿ ಕಾರ್ಯಕೈಕೊಳ್ಳುತ್ತದೆ ಮತ್ತು ಸ್ವತಃ ಅವಿದ್ಯೆಯ ಹೆಜ್ಜೆಗಳು ಎಡವುತ್ತಿರುವಾಗಲೂ ಕೂಡ ಮಾರ್ಗದರ್ಶನ ಪಡೆದಿರುತ್ತವೆ. ಈ ವಿಶಾಲ ಮತ್ತು ತೋರಿಕೆಗೆ ಗೊಂದಲಮಯವಾದ ಅಸ್ತಿತ್ವದ ಮೊತ್ತದಲ್ಲಿ ಒಂದು ನಿಯಮವಿದೆ, ಸತ್ತೆಯ ಒಂದು ಸತ್ಯವಿದೆ, ಮಾರ್ಗದರ್ಶನ ಮಾಡುವ, ನೆರವೇರಿಕೆ ತಂದುಕೊಡುವ ವಿಶ್ವ–ಅಸ್ತಿತ್ವದ ಉದ್ದೇಶವಿದೆ.

**(13/591–92)** – **ಶ್ರೀ ಅರವಿಂದರು** (Nov. 1950)

ಸರಕಾರಗಳು, ಸಮಾಜಗಳು, ರಾಜರುಗಳು, ಪೋಲೀಸರು, ನ್ಯಾಯಾ–ಧೀಶರು, ಸಂಸ್ಥೆಗಳು, ಚರ್ಚುಗಳು, ನಿಯಮಗಳು, ರೂಢಿಗಳು ಸೈನ್ಯಗಳು ಇವುಗಳೆಲ್ಲ ತಾತ್ಕಾಲಿಕ ಆವಶ್ಯಕತೆಗಳು, ಅವುಗಳನ್ನು ಕೆಲವು ಶತಮಾನಗಳ ಕಾಲ ನಮ್ಮ ಮೇಲೆ ಹೇರಲಾಗಿದೆ, ಏಕೆಂದರೆ ಭಗವಂತ ತನ್ನ ಮುಖವನ್ನು ಮರೆಯಲ್ಲಿರಿಸಿದ್ದಾನೆ. ಅದು ಮತ್ತೆ ತನ್ನ ಸತ್ಯ, ಸೌಂದರ್ಯಗಳಲ್ಲಿ ನಮಗೆ ತೋರಿಸಿಕೊಂಡಾಗ ಅವುಗಳೆಲ್ಲ ಮಾಯವಾಗುವವು.

**(12/465)** – **ಶ್ರೀ ಅರವಿಂದರು (1913)**

ಮೃತವಾಗುವ ಮೊದಲು ಮಿಥ್ಯೆ ತೂಗುಯ್ಯಾಲೆಯಾಟದಲ್ಲಿ ಪೂರ್ತಿಯಾಗಿ ತೊಡಗಿಸಿಕೊಂಡಿರುತ್ತದೆ.

ಆದಾಗ್ಯೂ ಜನರು ಅನಾಹುತ ಕಲಿಸಿಕೊಡುವ ಪಾಠವನ್ನು ಮಾತ್ರ ತಿಳಿದುಕೊಳ್ಳುತ್ತಾರೆ. ಅವರು ದೈವೀ ಸತ್ಯಕ್ಕೆ ತಮ್ಮ ಕಣ್ಣು ತೆರೆದಿರಿಸುವ ಮೊದಲು ಅದು ಬರಲೇಬೇಕೇ?

ದೈವೀ ಸತ್ಯ ಮಾತ್ರ ನಮ್ಮನ್ನು ರಕ್ಷಿಸಬಲ್ಲದು: ಶಬ್ದಗಳಲ್ಲಿ ಸತ್ಯ, ಕ್ರಿಯೆಯಲ್ಲಿ ಸತ್ಯ, ಸಂಕಲ್ಪದಲ್ಲಿ ಸತ್ಯ, ಭಾವನೆಗಳಲ್ಲಿ ಸತ್ಯ; ಅದು ದೈವೀ ಸತ್ಯಕ್ಕೆ ಸೇವೆ

ಸಲ್ಲಿಸುವುದು ಇಲ್ಲವೆ ನಾಶವಾಗುವುದು ಇವೆರಡರ ನಡುವೆ ಮಾಡಿಕೊಳ್ಳಬೇಕಾದ ಆಯ್ಕೆ.

**(13/217)** **– ಶ್ರೀಮಾತೆ**

ನಮ್ಮ ದೇಶ ದೈವೀ ಮಾತೆಯಾಗಿದೆ, ಅವಳನ್ನು ಕುರಿತು ದುಷ್ಟ ಮಾತು–ಗಳನ್ನು ಪ್ರೇಮ ಹಾಗೂ ಕೋಮಲತೆಯಿಂದ ಆಡಲಾಗದಿದ್ದರೆ ಅಂತಹ ಮಾತು–ಗಳನ್ನು ಅಡಬೇಡ.

**(12/456)** **– ಶ್ರೀಮಾತೆ**

*

**ಒಪ್ಪೋಲೆ :**
**ಅಖಿಲ ಭಾರತ ಪತ್ರಿಕೆ – ಜುಲೈ 2013**

| ಪುಟ ಮತ್ತು ಸಾಲು | ತಪ್ಪು | ಒಪ್ಪು |
|---|---|---|
| 22, 12ನೆಯ ಸಾಲು | ಪ್ರಾಣಿ ಲೋಕದ | ಪ್ರಾಣಿಕಲೋಕದ |
| 22, ಕೆಳಗಿನಿಂದ 6ನೆಯ ಸಾಲು | ಭಾರದ | ಬಾರದ |
| 31, 6ನೆಯ ಸಾಲು | ಹೊರನೋಟನ್ನು | ಹೊರನೋಟವನ್ನು |
| 35, ಕೆಳಗಿನಿಂದ 13ನೆಯ ಸಾಲು | ಮ | ಪರಮ |
| 39, ಕೊನೆಯ ಸಾಲು | ಕೂಡಿ | ಕೂಡಿದ |

## ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 8ನೇ ಆಗಸ್ಟ್ 2013ರ ಗುರುವಾರದಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ವತಿಯಿಂದ ಅಂತರ್ ಶಾಲಾ ಸಾಂಸ್ಕೃತಿಕ ಸ್ಪರ್ಧೆ "ಅಂಕುರ್" ಜರುಗಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಿನಿಮಾನಟ/ಕಿರುತೆರೆ ನಿರೂಪಕರಾದ ಶ್ರೀಯುತ ಸಿಹಿಕಹಿ ಚಂದ್ರುರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ವೇದಿಕೆಯಲ್ಲಿ ಶಾಲೆಯ ಛೇರಮನ್‌ರಾದ ಶ್ರೀಯುತ ಅಜಿತ್ ಸಬ್ನೀಸ್, ಶಾಲಾ ಆಡಳಿತಾಧಿಕಾರಿ ಮತ್ತು ಪ್ರಾಂಶುಪಾಲರು ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳು ಇಂದಿನ ವಿದ್ಯಾರ್ಥಿಗಳ ಕರ್ತವ್ಯ ಮತ್ತು ಸಾಂಸ್ಕೃತಿಕ



ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವಿಕೆಯ ಮಹತ್ವವನ್ನು ಕುರಿತು ಬೆಳಕು ಚೆಲ್ಲಿದರು. ಸುಮಾರು 17ಕ್ಕೂ ಅಧಿಕ ಶಾಲೆಗಳ 600 ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿದರು. ನೃತ್ಯ, ಸಂಗೀತ, ಚಿತ್ರಕತೆ ಹಾಗೂ ಬರವಣಿಗೆ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಿದರು. ಮಧ್ಯಾಹ್ನ ನಡೆದ ಸಮಾರೋಪ ಸಮಾರಂಭಕ್ಕೆ ಖ್ಯಾತ ಸಂಗೀತಗಾರ್ತಿ ಶ್ರೀಮತಿ ಸಂಗೀತ ಕಟ್ಟಿ ಕುಲಕರ್ಣಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ಪ್ರಧಾನ ಮಾಡಿದರು. ಮೀರಾಂಬಿಕಾ ಶಾಲೆಯ ಹಿರಿಯ ವಿಭಾಗದ ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ವಂದೇ ಮಾತರಂನೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ದಿನಾಂಕ 15ನೇ ಆಗಸ್ಟ್ 2013ರ ಗುರುವಾರದಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್‌ವತಿಯಿಂದ ಭಾರತ ಸ್ವಾತಂತ್ರ್ಯೋತ್ಸವ ದಿನವನ್ನು ಆಚರಿಸಲಾಯಿತು. ಶ್ರೀಯುತ ಬಿ.ಎಸ್. ಅಂಗಡಿ, ಜೆ.ಪಿ. ನಗರ ಠಾಣೆ ಪೋಲೀಸ್ ಇನ್ಸ್‌ಪೆಕ್ಟರ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ಮಾಡಿದರು. ಮತ್ತು ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯದ ಮಹತ್ವವನ್ನು ವಿವರಿಸಿದರು, ನಂತರ ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗಳನ್ನು ಹಾಡಿದರು. ಕಾರ್ಯಕ್ರಮದಲ್ಲಿ ಶಾಲಾ ಆಡಳಿತಾಧಿಕಾರಿ, ಪ್ರಾಂಶುಪಾಲರು, ಶಿಕ್ಷಕ ವೃಂದದವರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿನಾಂಕ 15ನೇ ಆಗಸ್ಟ್ 2013ರ ಗುರುವಾರದಂದು ಶ್ರೀ ಅರವಿಂದ ಸಂಕೀರ್ಣ ಟ್ರಸ್ಟ್‌ವತಿಯಿಂದ ಶ್ರೀ ಅರವಿಂದರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ ಅರವಿಂದ ಸಂಕೀರ್ಣದ ಧ್ಯಾನ ಮಂದಿರದಲ್ಲಿ ಬೆಳಿಗ್ಗೆ 10.00 ರಿಂದ 10.30ರ ವರೆಗೆ ಸಾಮೂಹಿಕ ಧ್ಯಾನ ಜರುಗಿತು. ನಂತರ ವಿಶೇಷ ದಿನದ ಸಂದೇಶ ಪತ್ರ ಹಾಗೂ ಪ್ರಸಾದವನ್ನು ವಿತರಿಸಲಾಯಿತು. ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಹಾಲ್‌ನಲ್ಲಿ 10.30 ರಿಂದ 12.00ರ ವರೆಗೆ ಟ್ರಸ್ಟ್‌ನ ಕಾರ್ಯನಿರ್ವಾಹಕ ಧರ್ಮದರ್ಶಿ ಶ್ರೀಯುತ ಅಜಿತ್ ಸಬ್ನೀಸ್‌ರವರು "Why Sri Aurobindo-His Philosophical Relevance Today" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು ಬಂಧುಗಳು, ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.



*"Keep an immutable faith. Truth will triumph."*

**- The Mother**

**RNI No. 22511/1971**
No. of Pages **56 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು – 560 078
ದೂರವಾಣಿ : 080–22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.